ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 12 ಸೋಮವಾರ 2024

₹4

ಸಂಪುಟ: 45 | ಸಂಚಿಕೆ: 118 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com




ಹುಟ್ಟುಹಬ್ಬದ ಶುಭಾಶಯ....



ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರ ಹುಟ್ಟುಹಬ್ಬದ ಪ್ರಯುಕ್ತ ತುಮಕೂರಿನ ಅವರ ನಿವಾಸದಲ್ಲಿ ಡಾ.ಜಿ.ಪರಮೇಶ್ವರ್ ಅಭಿಮಾನಿಗಳ ಬಳಗದಿಂದ ಬಾದಾಮಿ ಹಾರ ಹಾಕಿ ಶುಭಾಶಯ ಕೋರಲಾಯಿತು. ಈ ವೇಳೆ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್, ಬ್ಲಾಕ್ ಅಧ್ಯಕ್ಷ ಜಿ.ಎನ್.ಮಂಜುನಾಥ್, ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ರಘುರಾಜೇ ಅರಸ್, ನಗರಪಾಲಿಕೆ ಮಾಜಿ ಸದಸ್ಯ ಸೈಯದ್ ಹಜರತ್ ಉಲ್ಲಾ, ಬಳಗದ ಅಧ್ಯಕ್ಷ ಪದ್ಮನಾಭನ್ (ಗುಂಡ), ಉಮೇಶ್, ಶ್ರೀನಿವಾಸ್, ರಮೇಶ್ ಇನ್ನಿತರರು ಉಪಸ್ಥಿತರಿದ್ದರು.

ಸಾ.ರಾ.ಮಹೇಶ್‌ಗೆ ಹುಟ್ಟುಹಬ್ಬದ ಶುಭ ಕೋರಿಕೆ...



ಮಾಜಿ ಸಚಿವ, ಜನತಾದಳ (ಜಾತ್ಯತೀತ)ದ ರಾಜ್ಯ ಕಾರ್ಯಾಧ್ಯಕ್ಷ ಸಾ.ರಾ.ಮಹೇಶ್ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಅಭಿನಂದಿಸಿ ಶುಭಾಶಯ ಕೋರಲಾಯಿತು. ಈ ವೇಳೆ ಮಾಜಿ ಮೇಯರ್ ಆರ್.ಲಿಂಗಪ್ಪ, ಜೆಡಿಎಸ್ ರಾಜ್ಯ ವಕ್ತಾರ ರವಿಚಂದ್ರೇಗೌಡ, ಮುಖಂಡರಾದ ರಾಮು, ಗಂಗಾಧರ್‌ಗೌಡ, ಸಾ.ರಾ.ಶೈಲೇಶ್ ಉಪಸ್ಥಿತರಿದ್ದರು.

ಪ್ರಾಸಿಕ್ಯೂಷನ್ ವಿಳಂಬ:ಕೋರ್ಟ್ ಮೆಟ್ಟಿಲೇರಲು ಟಿ.ಜೆ. ಅಬ್ರಹಾಂ ಚಿಂತನೆ

ಬೆಂಗಳೂರು, ಆ.11– ಮುಡಾ ಹಗರಣ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ವಿಳಂಬ ನೀತಿ ಅನುಸರಿಸುತ್ತಿರುವ ಹಿನ್ನೆಲೆಯಲ್ಲಿ ನ್ಯಾಯಾಲಯದ ಮೊರೆ ಹೋಗಲು ಭ್ರಷ್ಟಾಚಾರ ವಿರೋಧಿ ಹೋರಾಟಗಾರ ಟಿ.ಜೆ. ಅಬ್ರಹಾಂ ಚಿಂತನೆ ನಡೆಸಿದ್ದಾರೆಂದು ತಿಳಿದು ಬಂದಿದೆ.



ಜುಲೈ 26ರಂದು ಮಂಜೂರಾತಿ ಕೋರಿ ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದು, ಅದೇ ದಿನ ಸಿಎಂಗೆ ಶೋಕಾಸ್ ನೋಟಿಸ್ ಜಾರಿ ಮಾಡಿದ್ದರು. ನೋಟಿಸ್‌ನಲ್ಲಿ ಸಿಎಂ ವಿರುದ್ಧದ ಆರೋಪಗಳು ಗಂಭೀರ ಸ್ವರೂಪದ್ದು ಎಂಬುದು ಮೇಲ್ನೋಟಕ್ಕೆ ತೋರುತ್ತಿದೆ ಎಂದು ರಾಜ್ಯಪಾಲರು ತಿಳಿಸಿದ್ದರು. ಆದರೂ, ಪ್ರಾಸಿಕ್ಯೂಷನ್‌ಗೆ ವಿಳಂಬ ನೀತಿ ಅನುಸರಿಸುತ್ತಿರುವುದೇಕೆ ಎಂಬುದು ತಿಳಿಯುತ್ತಿಲ್ಲ ಎಂದು ಅಬ್ರಹಾಂ ಹೇಳಿದ್ದಾರೆ.

ಇದೀಗ ನಾನು ವಕೀಲರೊಂದಿಗೆ ಚರ್ಚೆ ನಡೆಸಿದ್ದು, ಜನಪ್ರತಿನಿಧಿಗಳ ವಿಚಾರಣೆಗಾಗಿ ವಿಶೇಷ ನ್ಯಾಯಾಲಯ ಅಥವಾ ಹೈಕೋರ್ಟ್‌ನಲ್ಲಿ ವಿಶೇಷ ಮೊಕದ್ದಮೆ ಹೂಡಲು ಚಿಂತನೆ ನಡೆಸುತ್ತಿದ್ದೇನೆಂದು ತಿಳಿಸಿದ್ದಾರೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿ ನಾನು ಮನವಿ ಸಲ್ಲಿಸಿದ್ದೆ. ಆದರೆ, ಮನವಿಯನ್ನು ತಿರಸ್ಕರಿಸಿದ್ದರು. ಆದರೆ, ಈ ಕ್ರಮ ಸರಿಯಲ್ಲ ಎಂದು ಕೋರ್ಟ್ ಮೆಟ್ಟಿಲೇರಿದ್ದೆ. ಇದೀಗ ಮುಡಾ ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲು ನಿರ್ಧರಿಸಿದ್ದೇನೆ.

ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ನಾನು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ವಿರುದ್ಧವೂ ಹೋರಾಟ ನಡೆಸಿದ್ದೆ, ಈ ಪ್ರಕರಣದಲ್ಲಿ ಎಸ್‌ಐಟಿ ರಾಜ್ಯಪಾಲರಿಂದ ಪ್ರಾಸಿಕ್ಯೂಷನ್ ಕೋರಿತ್ತು ಎಂದು ಹೇಳಿದ್ದಾರೆ. ಏತನ್ಮಧ್ಯೆ, ಪ್ರವಾಸದಲ್ಲಿರುವ ರಾಜ್ಯಪಾಲ ಗೆಹ್ಲೋಟ್ ಅವರಕು ಭಾನುವಾರ ಸಂಜೆ ರಾಜಭವನಕ್ಕೆ ಮರಳಲಿದ್ದಾರೆಂದು ವರದಿಗಳು ತಿಳಿಸಿವೆ.

ಪ್ರತಿಭಟನೆಯಲ್ಲಿ ಭಾಗಿಯಾಗುವ ಶಿಕ್ಷಕರ ವಿರುದ್ಧ ಶಿಸ್ತುಕ್ರಮ

ಶಾಲಾ ಶಿಕ್ಷಣ ಇಲಾಖೆ ಆಯುಕ್ತೆ ಬಿ.ಬಿ.ಕಾವೇರಿ ಎಚ್ಚರಿಕೆ




ಮೈಸೂರು, ಆ.11(ಎಸ್‌ಪಿಎನ್)– ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರು, ಸಹ (ಪಿಎಸ್‌ಟಿ) ಶಿಕ್ಷಕರು ಶಾಲೆಗೆ ಗೈರುಹಾಜರಾಗಿ, ಪ್ರತಿಭಟನೆಯಲ್ಲಿ ಭಾಗವಹಿಸಿದರೆ, ಶಿಸ್ತು ಕ್ರಮ ಕೈಗೊಳ್ಳುವಂತೆ ರಾಜ್ಯದ ಎಲ್ಲಾ ಡಿಡಿಪಿಐಗಳಿಗೆ ಶಾಲಾ ಶಿಕ್ಷಣ ಇಲಾಖೆ ಆಯುಕ್ತೆ ಬಿ.ಬಿ.ಕಾವೇರಿ ಸೂಚಿಸಿದ್ದಾರೆ.

ಪಿಎಸ್‌ಟಿ ಶಿಕ್ಷಕರು ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಆ.12ರಂದು ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಹಮ್ಮಿಕೊಂಡಿರುವ ಪ್ರತಿಭಟನೆ, ಕರ್ನಾಟಕ ರಾಜ್ಯ ಸಿವಿಲ್ ಸೇವಾ (ನಡತೆ) ನಿಯಮಗಳು –2021ರ ಪ್ರಕಾರ ನೌಕರರು, ರಾಜ್ಯ ಸರ್ಕಾರದ ವಿರುದ್ಧ ಮುಷ್ಕರದಲ್ಲಿ ಪಾಲ್ಗೊಳ್ಳುವುದು ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಲಿದೆ ಎಂದು ಉಲ್ಲೇಖಿಸಿದ್ದಾರೆ.

ಮೈಸೂರಿಂದ ಶಿಕ್ಷಕರು ಭಾಗಿ: ಜು.29ರಂದು ನಡೆದ ರಾಜ್ಯ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯಕಾರಿ ಸಮಿತಿಯ ತೀರ್ಮಾನದಂತೆ ಪ್ರಾಥಮಿಕ ಶಾಲಾ ಶಿಕ್ಷಕರ(ಪಿಎಸ್‌ಟಿ) ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ರಾಜ್ಯ ಮಟ್ಟದ ಪ್ರತಿಭಟನೆಯನ್ನು ಆ.12ರಂದು ಬೆಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿದೆ.

ಮಾಜಿ ವಿದೇಶಾಂಗ ಸಚಿವ ನಟ್ವರ್ ಸಿಂಗ್ ನಿಧನ



ನವದೆಹಲಿ: ದೀರ್ಘಕಾಲ ಅನಾರೋಗ್ಯದಿಂದ ಬಳಲುತ್ತಿದ್ದ ಮಾಜಿ ವಿದೇಶಾಂಗ ಸಚಿವ ಕೆ.ನಟ್ವರ್ ಸಿಂಗ್ ಶನಿವಾರ ರಾತ್ರಿ ನಿಧನರಾಗಿದ್ದಾರೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಅವರಿಗೆ 93 ವರ್ಷ ವಯಸ್ಸಾಗಿತ್ತು. ದೆಹಲಿ ಬಳಿಯ ಗುರುಗ್ರಾಮ್‌ನ ಮೇದಾಂತ ಆಸ್ಪತ್ರೆಯಲ್ಲಿ ಕಳೆದೆರಡು ವಾರಗಳಿಂದ ದಾಖಲಾಗಿದ್ದರು. 1931ರಲ್ಲಿ ಸಿಂಗ್ ಅವರು ರಾಜಸ್ಥಾನದ ಭರತ್‌ಪುರ ಜಿಲ್ಲೆಯಲ್ಲಿ ಜನಿಸಿದ್ದರು. ಅವರು ರಾಜತಾಂತ್ರಿಕರಾಗಿ ಕಾರ್ಯನಿರ್ವಹಿಸಿದ್ದರು. ಇವರು ವಿದೇಶಿ ವ್ಯವಹಾರಗಳ ಸೂಕ್ಷ್ಮ ವಿಷಯಗಳ ಬಗ್ಗೆ ಬರೆಯುತ್ತಿದ್ದ ಲೇಖನಗಳಿಂದಲೂ ಜನಪ್ರಿಯತೆ ಗಳಿಸಿದ್ದರು. ತಮ್ಮ ವಿಶಿಷ್ಟ ವೃತ್ತಿ ಜೀವನದ ಅವಧಿಯಲ್ಲಿ ಅವರು ಅನೇಕ ಗೌರವಗಳಿಗೆ ಪಾತ್ರರಾಗಿದ್ದರು. ಅವರ ಸೇವೆಗಾಗಿ 1984ರಲ್ಲಿ ಪದ್ಮಭೂಷಣ ಪ್ರಶಸ್ತಿಯನ್ನು ನೀಡಲಾಗಿತ್ತು.

ಅನುಭವಿ ರಾಜಕಾರಣಿ ಕೆ.ನಟ್ವರ್ ಸಿಂಗ್ ಅವರು ಪ್ರಧಾನಿ ಮನಮೋಹನ್ ಸಿಂಗ್ ನೇತೃತ್ವದ ಯುಪಿಎ–1 ಸರ್ಕಾರದ 2004–05ರ ಅವಧಿಯಲ್ಲಿ ಭಾರತದ ವಿದೇಶಾಂಗ ಸಚಿವರಾಗಿದ್ದರು. 1966ರಿಂದ 1971ರವರೆಗೆ ಪ್ರಧಾನಿ ಇಂದಿರಾ ಗಾಂಧಿಯವರ ಅವಧಿಯಲ್ಲಿ ಸಿಂಗ್ ಪಾಕಿಸ್ತಾನಕ್ಕೆ ರಾಯಭಾರಿಯಾಗಿ ಸೇವೆ ಸಲ್ಲಿಸಿದ್ದರು.

ನಟ್ವರ್ ಸಿಂಗ್‌ಜೀ ಅವರ ನಿಧನದ ಸುದ್ದಿ ದುಃಖಕರ ಸಂಗತಿ. ದೇವರು ಅವರ ಕುಟುಂಬಕ್ಕೆ ಈ ನಷ್ಟವನ್ನು ಭರಿಸುವ ಶಕ್ತಿ ಮತ್ತು ಅಗಲಿದ ಆತ್ಮಕ್ಕೆ ಶಾಂತಿ ನೀಡಲಿ ಎಂದು ಕಾಂಗ್ರೆಸ್ ನಾಯಕ ರಣದೀಪ್ ಸುರ್ಜೆವಾಲಾ ಎಕ್ಸ್ ಪೋಸ್ಟ್‌ನಲ್ಲಿ ಮಾಜಿ ವಿದೇಶಾಂಗ ಸಚಿವರಿಗೆ ಸಂತಾಪ ಸೂಚಿಸಿದ್ದಾರೆ. ಸಿಂಗ್ ಅವರು 'ದಿ ಲೆಗಸಿ ಆಫ್ ನೆಹರು: ಎ ಮೆಮೋರಿಯಲ್ ಟ್ರಿಬ್ಯೂಟ್' ಮತ್ತು 'ಮೈ ಚೀನಾ ಡೈರಿ 1956–88' ಸೇರಿದಂತೆ ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ. 'ಒನ್ ಲೈಫ್ ಇಸ್ ನಾಟ್ ಎನಫ್' ಪುಸ್ತಕವು ನಟ್ವರ್ ಸಿಂಗ್ ಅವರ ಆತ್ಮಕಥೆಯಾಗಿದೆ.

ಭಾಗ್ಯಲಕ್ಷ್ಮಿ



ಮೈಸೂರು, ಆ.11– ಮೈಸೂರು ತಾಲೂಕು ಮರಟಿಕ್ಯಾತನಹಳ್ಳಿ ಗ್ರಾಮದ ಗಿರಿಗೌಡ ಅವರ ಪತ್ನಿ ಶ್ರೀಮತಿ ಭಾಗ್ಯಲಕ್ಷ್ಮಿ (55) ಅವರು ಭಾನುವಾರ ಬೆಳಗ್ಗೆ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಬೀರಿಹುಂಡಿ ಗ್ರಾಪಂ ಮಾಜಿ ಉಪಾಧ್ಯಕ್ಷೆಯೂ ಆಗಿದ್ದ ಭಾಗ್ಯಲಕ್ಷ್ಮಿ ಅವರು ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಭಾನುವಾರ ಸಂಜೆ ಮರಟಿಕ್ಯಾತನಹಳ್ಳಿ ಗ್ರಾಮದ ಅವರ ತೋಟದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಪಾರಂಪರಿಕತೆ ಅಸ್ಮಿತೆ ಸಂರಕ್ಷಣೆ ಜೊತೆಗೆ ಅಭಿವೃದ್ಧಿ ಹೊಂದುವುದು ಅಗತ್ಯ

ಗುತ್ತಿಗೆದಾರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಮತ



ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಗುತ್ತಿಗೆದಾರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಸಂಸದ ಯದುವೀರ್ ಒಡೆಯರ್ ಇನ್ನಿತರರಿದ್ದಾರೆ.

ಮೈಸೂರು,ಆ.11(ಪಿಎಂ)– ಮೈಸೂರಿನ ಪಾರಂಪರಿಕ ಅಸ್ಮಿತೆ ಸಂರಕ್ಷಣೆಯೊಂದಿಗೆ ಆಧುನಿಕ ಕಾಲಕ್ಕೆ ತಕ್ಕಂತೆ ಅಭಿವೃದ್ಧಿ ಹೊಂದಲು ಆದ್ಯತೆ ನೀಡಬೇಕಿದೆ ಎಂದು ಮೈಸೂರು–ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ವತಿಯಿಂದ ಗುತ್ತಿಗೆದಾರರ ಮಕ್ಕಳಿಗೆ ಹಮ್ಮಿಕೊಂಡಿದ್ದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಅವರು ಮಾತನಾಡಿದರು.

ಮೈಸೂರಿನ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸುವುದು ಅಗತ್ಯವಿದ್ದು, ಇದರಿಂದ ಮೈಸೂರಿನ ಪಾರಂಪರಿಕ ಕಲೆಗಳು ಉಳಿಯಲಿವೆ. ಏಕೆಂದರೆ ಮೈಸೂರಿನ ಕಲಾತ್ಮಕತೆಯನ್ನು ಈ ಕಟ್ಟಡಗಳು ಬಿಂಬಿಸಿವೆ. ಜಂಬೂಸವಾರಿ ಇದೇ ಸಯ್ಯಾಜಿ ರಾವ್ ರಸ್ತೆ ಮಾರ್ಗದಲ್ಲಿ ಬನ್ನಿಮಂಟಪ ತಲುಪಲಿದೆ. ಈ ಇಡೀ ಮಾರ್ಗದಲ್ಲಿ ಪಾರಂಪರಿಕ ಕಟ್ಟಡಗಳನ್ನು ನಾವು ಮಕ್ಕಳಿದ್ದಾಗಿಂದಲೂ ನೋಡುತ್ತಿದ್ದು, ನಮ್ಮ ಈ ಅನುಭವ ಮುಂದಿನ ಪೀಳಿಗೆಗೂ ಕೊಡಬೇಕು. ಆ ಉದ್ದೇಶದಿಂದಲೂ ಪರಂಪರೆ ಬಿಂಬಿಸುವ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಿಸುವುದು ಅಗತ್ಯ ಎಂದು ತಿಳಿಸಿದರು.

ಪ್ರಸ್ತುತ ಸುಸ್ಥಿರತೆ, ಹವಾಮಾನ ವೈಪರೀತ್ಯದ ಚರ್ಚೆಯಾಗುತ್ತಿದ್ದು, ಮೈಸೂರಿನ ಪಾರಂಪರಿಕ ಕಟ್ಟಡಗಳಲ್ಲಿ ಪರಿಸರ ಸುಸ್ಥಿರತೆ ಪದ್ಧತಿ ಕಾಣಬಹುದು. ಪಾರಂಪರಿಕ ಕಟ್ಟಡಗಳನ್ನು ನೆಲಸಮಗೊಳಿಸಿ, ಇನ್ನೊಂದು ಹೊಸ ಕಟ್ಟಡ ಮಾಡಿದರೆ ಪರಿಸರಕ್ಕೆ ಮಾರಕವಾಗುವ ಪದ್ಧತಿಗೆ ನಾಂದಿ ಹಾಡಿದಂತೆ. ಪರಿಸರ ಮತ್ತು ಪಾರಂಪರಿಕತೆ ಸಂರಕ್ಷಣೆಗೆ ಪೂರಕವಾಗಿ ನಮ್ಮ ಅಭ್ಯಾಸಗಳು ಬದಲಾಗಬೇಕು ಎಂದರು.

ಈ ನಿಟ್ಟಿನಲ್ಲಿ ಗುತ್ತಿಗೆದಾರರ ಪಾತ್ರ ದೊಡ್ಡದಿದೆ. ಸರ್ಕಾರದ ವ್ಯವಸ್ಥೆಯಲ್ಲಿ ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ವಿಚಾರದಲ್ಲಿ ಪರಿಪೂರ್ಣವಾದ ನೀತಿ ನಿಯಮಗಳು ಇಲ್ಲವಾಗಿದ್ದು, ಕೇವಲ ಹೊಸ ಕಟ್ಟಡ ನಿರ್ಮಾಣ ಅಥವಾ ನೆಲಸಮಗೊಳಿಸಿ ಅದೇ ಶೈಲಿಯಲ್ಲಿ ಮುನರ್ ನಿರ್ಮಾಣ ಮಾಡುವುದಕ್ಕೆ ಆದ್ಯತೆ ನೀಡಲಾಗಿದೆ. ಹಾಗಾಗಿ ಪಾರಂಪರಿಕ ಕಟ್ಟಡಗಳನ್ನು ಉಳಿಸುವುದಕ್ಕೆ ಪೂರಕವಾಗಿ ಸರ್ಕಾರದ ನೀತಿ ನಿಯಮಗಳಲ್ಲಿ ಬದಲಾವಣೆ ತರಬೇಕಿದ್ದು, ಈ ನಿಟ್ಟಿನಲ್ಲಿ ನಾನು ಮುಂದುವರೆಯಲಿದ್ದೇನೆ ಎಂದರು.

ಬಳಿಕ ಸಂವಾದ ನಡೆಸಿದ ಸಂಸದರು, ಪರಂಪರೆ ಸಂರಕ್ಷಣೆಯೊಂದಿಗೆ ಅಭಿವೃದ್ಧಿ ಹೊಂದಬೇಕು. ಉದಾಹರಣೆಗೆ ದಕ್ಷಿಣ ಮುಂಬೈನಲ್ಲಿ ಮೈಸೂರಿಗಿಂತ ಹೆಚ್ಚು ಪಾರಂಪರಿಕ ಕಟ್ಟಡಗಳಿದ್ದು, ಹಾಗಾಗಿ ಇದ್ದ ರಸ್ತೆ ಮಾರ್ಗದಲ್ಲೇ ಭೂಗತವಾಗಿ ಮೆಟ್ರೋ ಮಾರ್ಗ ನಿರ್ಮಿಸಲಾಗಿದೆ. ಇಂತಹ ನಿದರ್ಶನಗಳನ್ನು ಅಧ್ಯಯನ ಮಾಡಿ, ಮೈಸೂರಿನಲ್ಲಿ ಅನುಷ್ಠಾನಗೊಳಿಸುವ ಅಗತ್ಯವಿದೆ. ಇದು ಅಭಿವೃದ್ಧಿ, ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಎರಡಕ್ಕೂ ಮಾರ್ಗೋಪಾಯ ಎಂದರು.

ಜಿಲ್ಲಾ ಪಾರಂಪರಿಕ ಸಂರಕ್ಷಣಾ ಸಮಿತಿ ಸದಸ್ಯ ಡಾ.ಎನ್.ಎಸ್.ರಂಗರಾಜು ಮಾತನಾಡಿ, ಪ್ರತಿಭೆ ಇದ್ದೂ ನಾನಾ ಕಾರಣಗಳಿಂದ ಶೈಕ್ಷಣಿಕ ಸಾಧನೆ ಮಾಡಲಾಗದ ಮಕ್ಕಳನ್ನು ಗುರುತಿಸಿ ಉತ್ತೇಜನ ನೀಡುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಸೊಸೈಟಿ ಮುಂದುವರೆಯಬೇಕೆಂದು ಸಲಹೆ ನೀಡಿದರು.

ಇದಕ್ಕೂ ಮುನ್ನ ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆ ಹೊಂದಿದ ಸೊಸೈಟಿ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಅಲ್ಲದೆ, ಪ್ರತಿಭಾ ಪುರಸ್ಕಾರ ಕೊಡುಗೆ ನೀಡಿದ ದಾನಿಗಳು, ಸೊಸೈಟಿ ಪದಾಧಿಕಾರಿಗಳನ್ನೂ ಸನ್ಮಾನಿಸಲಾಯಿತು. ಶ್ರೀ ಕ್ಷೇತ್ರ ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸೊಸೈಟಿ ಅಧ್ಯಕ್ಷ ಮಹಾಲಿಂಗಂ, ಉಪಾಧ್ಯಕ್ಷ ವಿ.ಕುಮಾರ್ ಸೇರಿದಂತೆ ನಿರ್ದೇಶಕರು ಹಾಗೂ ಸದಸ್ಯರು ಹಾಜರಿದ್ದರು.

ಪ್ಯಾರಿಸ್ ಒಲಿಂಪಿಕ್ಸ್‌ಗೆ ವರ್ಣರಂಜಿತ ತೆರೆ

6 ಪದಕಗಳೊಂದಿಗೆ ಭಾರತದ ಅಭಿಯಾನ ಅಂತ್ಯ

ಪ್ಯಾರಿಸ್, ಆ.11– ಕಳೆದ 2 ವಾರಗಳಿಗೂ ಹೆಚ್ಚು ಕಾಲ ಪ್ರಣಯದೂರಿನಲ್ಲಿ ನಡೆದ ಒಲಿಂಪಿಕ್ಸ್ ಕ್ರೀಡಾಕೂಟಕ್ಕೆ ಭಾನುವಾರ ರಾತ್ರಿ ವರ್ಣರಂಜಿತ ತೆರೆ ಬಿದ್ದಿತ್ತು.

ಪ್ಯಾರಿಸ್‌ನ ಹೃದಯ ಭಾಗವಾದ 'ಸ್ಟೇಡ್ ಡೆ ಫ್ರಾನ್ಸ್ ಸ್ಟೇಡಿಯಂ'ನಲ್ಲಿ ಭಾರತೀಯ ಕಾಲಮಾನ ರಾತ್ರಿ 12.30ಕ್ಕೆ ಸಮಾರೋಪ ಸಮಾರಂಭ ನಡೆಯಿತು. ಸಾಕಷ್ಟು ವಿವಾದಗಳ ನಡುವೆ ನಡೆದ ಒಲಿಂಪಿಕ್ಸ್‌ನಲ್ಲಿ 32 ಕ್ರೀಡೆಗಳ 10 ಸಾವಿರಕ್ಕೂ ಹೆಚ್ಚು ಕ್ರೀಡಾಪಟುಗಳು ಪದಕಕ್ಕಾಗಿ ಸೆಣಸಾಡಿದರು. ಭಾರತದ ಪರ 117 ಕ್ರೀಡಾಪಟುಗಳು ಅಖಾಡಕ್ಕಿಳಿದಿದ್ದರು.

ಇಷ್ಟು ದಿನಗಳ ಕಾಲ ಪ್ರಜ್ವಲಿಸುತ್ತಿದ್ದ ಒಲಿಂಪಿಕ್ಸ್ ಜ್ಯೋತಿ ನಿಧಾನವಾಗಿ ಆರುವುದರ ಜೊತೆಗೆ ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿ ಅಧ್ಯಕ್ಷ ಥಾಮಸ್ ಬಾಚ್ ಅವರು ಪ್ಯಾರಿಸ್ ಒಲಿಂಪಿಕ್ಸ್‌ಗೆ ಮುಕ್ತಾಯ ಘೋಷಿಸಿದರು. ಮುಂದಿನ ಒಲಿಂಪಿಕ್ಸ್ 2028ರಲ್ಲಿ ಅಮೆರಿಕಾದ ಲಾಸ್ ಏಂಜಲೀಸ್‌ನಲ್ಲಿ ನಡೆಯಲಿದೆ.

ಟೂರ್ನಿಯಲ್ಲಿ ಅಮೆರಿಕಾ 40 ಚಿನ್ನ, 44 ಬೆಳ್ಳಿ, 42 ಕಂಚು ಒಳಗೊಂಡ 126 ಪದಕಗಳೊಂದಿಗೆ ಕ್ರೀಡಾಕೂಟದಲ್ಲಿ ಅಗ್ರಸ್ಥಾನ ಪಡೆದರೆ, ಚೀನಾ 40 ಚಿನ್ನ, 27 ಬೆಳ್ಳಿ, 24 ಕಂಚು ಒಳಗೊಂಡ 91 ಪದಕಗಳೊಂದಿಗೆ 2ನೇ ಸ್ಥಾನ, ಇನ್ನು ಜಪಾನ್ 20 ಚಿನ್ನ, 12 ಬೆಳ್ಳಿ, 13 ಕಂಚು ಒಳಗೊಂಡ 45 ಪದಕಗಳೊಂದಿಗೆ ತೃತೀಯ ಸ್ಥಾನ ಪಡೆದರೆ, ಭಾರತ 1 ಬೆಳ್ಳಿ, 5 ಕಂಚು ಒಳಗೊಂಡ 6 ಪದಕಗಳೊಂದಿಗೆ ಟೂರ್ನಿಯಲ್ಲಿ 71ನೇ ಸ್ಥಾನ ಪಡೆಯಿತು.

6 ಪದಕಗಳೊಂದಿಗೆ ಅಭಿಯಾನ ಅಂತ್ಯ: ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತ 5 ಕಂಚಿನ ಪದಕ ಮತ್ತೊಂದು ಬೆಳ್ಳಿ ಪದಕ ಸೇರಿದಂತೆ ಒಟ್ಟಾರೆ 6 ಪದಕ ಗಳೊಂದಿಗೆ ತನ್ನ ಅಭಿಯಾನ ಅಂತ್ಯಗೊಳಿಸಿದೆ.




2021 ರಲ್ಲಿ ನಡೆದ ಟೋಕಿಯೋ ಒಲಿಂಪಿಕ್ಸ್‌ನಲ್ಲಿ ಭಾರತ ಶ್ರೇಷ್ಠ ಪ್ರದರ್ಶನ ನೀಡಿತ್ತು. ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ನೀರಜ್ ಚೋಪ್ರಾ ಗೆದ್ದುಕೊಟ್ಟ ಚಿನ್ನ ಮತ್ತು ವೇಟ್ ಲಿಫ್ಟಿಂಗ್‌ನಲ್ಲಿ ಮೀರಾಬಾಯ್ ಚಾನು ತಂದ ಬೆಳ್ಳಿ ಮತ್ತು ನಾಲ್ಕು ಸ್ಪರ್ಧೆಗಳಲ್ಲಿ ಭಾರತ ಕಂಚು ಗೆದ್ದು ಒಟ್ಟಾರೆ 7 ಪದಕಗೊಂದಿಗೆ ತಾಯ್ನಾಡಿಗೆ ಹಿಂದಿರುಗ್ಗಿತ್ತು. 120 ವರ್ಷಗಳಿಗೂ ಹೆಚ್ಚಿನ ಇತಿಹಾಸ ಹೊಂದಿರುವ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾರತದ ಶ್ರೇಷ್ಠ ಸಾಧನೆ ಇದಾಗಿತ್ತು.

ಇದೀಗ ಪ್ಯಾರಿಸ್ ಅಂಗಣದಲ್ಲಿ ಈ ದಾಖಲೆ ಮುರಿಯುವ ಎಲ್ಲಾ ಅವಕಾಶ ಭಾರತೀಯರ ಕೈಲಿತ್ತು. 5 ಕಂಚಿನ ಪದಕಗಳ ಪೈಕಿ ಒಂದರ ಬಣ್ಣ ಬದಲಾಗಬಹುದಿತ್ತು. ಜೊತೆಗೆ ವಿವಿಧ ಸ್ಪರ್ಧೆಗಳಲ್ಲಿ ಭಾರತೀಯರು 4ನೇ ಸ್ಥಾನಕ್ಕೆ ತೃಪ್ತಿ ಪಡಬೇಕಾಯಿತು. ನಾಲ್ಕನೇ ಸ್ಥಾನ ಪಡೆಯುವುದು ಅಷ್ಟು ಸುಲಭವಲ್ಲ. ಆದರೆ ಅಲ್ಲಿ ಕೂದಲೆಳೆ ಅಂತರದಲ್ಲಿ ಭಾರತಕ್ಕೆ ಪದಕ ಕೈತಪ್ಪಿರುವುದಷ್ಟೇ ಬೇಸರ. ಪ್ಯಾರಿಸ್ ಒಲಿಂಪಿಕ್ಸ್ ಪದಕ ಪಟ್ಟಿಯಲ್ಲಿ ಭಾರತ ಈ ಬಾರಿ ಎರಡಂಕಿಯ ಸಾಧನೆ ಮೆರೆಯುವ ಅತ್ಯುತ್ತಮ ಅವಕಾಶ ಹೊಂದಿತ್ತು. ಆದರೆ ಅದೃಷ್ಟ ಕೈ ಹಿಡಿಯಲಿಲ್ಲ. ಇದರ ಹೊರತಾಗಿಯೂ ಕ್ರೀಡಾಪಟುಗಳ ಸಾಮರ್ಥ್ಯ ಮತ್ತು ಪ್ರದರ್ಶನ ಮಟ್ಟದಲ್ಲಿ ಸುಧಾರಣೆ ಆಗಿರುವುದು ಆಶಾದಾಯಕವಾಗಿದೆ.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತ ಗೆದ್ದ ಪದಕಗಳು

- **ಬೆಳ್ಳಿ ಪದಕ** – ನೀರಜ್ ಚೋಪ್ರಾ – ಅಥ್ಲೆಟಿಕ್ಸ್ – ಪುರುಷರ ಜಾವೆಲಿನ್ ಥ್ರೋ
- **ಕಂಚಿನ ಪದಕ** – ಮನು ಭಾಕರ್ – ಶೂಟಿಂಗ್ – ಮಹಿಳೆಯರ 10 ಮೀ. ಏರ್ ಪಿಸ್ತೂಲ್
- **ಕಂಚಿನ ಪದಕ** – ಮನು ಭಾಕರ್/ ಸರಬ್ಜೋತ್ ಸಿಂಗ್ – ಶೂಟಿಂಗ್ – ಮಿಶ್ರ 10 ಮೀ. ಏರ್ ಪಿಸ್ತೂಲ್
- **ಕಂಚಿನ ಪದಕ** – ಸ್ವಪ್ನಿಲ್ ಕುಸಾಲೆ – ಶೂಟಿಂಗ್ – 50 ಮೀ. ರೈಫಲ್ 3 ಪೊಸಿಷನ್
- **ಕಂಚಿನ ಪದಕ** – ಭಾರತ ಹಾಕಿ ತಂಡ – ಫೀಲ್ಡ್ ಹಾಕಿ – ಭಾರತ ಪುರುಷರ ಹಾಕಿ ತಂಡ
- **ಕಂಚಿನ ಪದಕ** – ಅಮನ್ ಸೆಹ್ರಾವತ್ – ಕುಸ್ತಿ – ಪುರುಷರ 57 ಕೆ.ಜಿ ಫ್ರೀಸ್ಟೈಲ್

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.08.2024 ಸೋಮವಾರ, ಮಳೆ ನಕ್ಷತ್ರ: ಆಶ್ಲೇಷ 03.08.2024 ರಿಂದ 12.08.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ಅಷ್ಟಮಿ, ನಕ್ಷತ್ರ: ವಿಶಾಖ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಆಮವಾತ (ರುಮಟೈಡ್ ಆರ್ಥ್ರೈಟೀಸ್) ಕುರಿತು ಉಪನ್ಯಾಸ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಸ್ ಲೇಔಟ್, ಬೆಳಗ್ಗೆ 9ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ಗಂಟೆಯಿಂದ.

■ **ಅಭಿಮಾನಿಗಳು:** ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹುಟ್ಟುಹಬ್ಬದ ಅಂಗವಾಗಿ ವಿವಿಧ ಸೇವಾ ಕಾರ್ಯಕ್ರಮಗಳು, ಬೆಳಗ್ಗೆ 9 ಗಂಟೆಗೆ ಮಹದೇಶ್ವರ ಬೆಟ್ಟದ ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ, ಚಾಮುಂಡಿಬೆಟ್ಟ ಹಾಗೂ ಮೈಸೂರು ಗರಡಿಕೇರಿ ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ, ಬೆಳಗ್ಗೆ 10 ಗಂಟೆಗೆ ಜೆಸಿಎಸ್ ಸ್ಪೋರ್ಟ್ಸ್ ಮೆಡಿಸಿನ್ ಸೆಂಟರ್ ಮತ್ತು ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ವತಿಯಿಂದ ಸರ್ಕಾರಿ ಅಂಧ ಮತ್ತು ಮೂಕ ಮಕ್ಕಳ ಪಾಠಶಾಲೆಯ ಮಕ್ಕಳಿಗೆ ಉಚಿತ ಆರೋಗ್ಯ ತಪಾಸಣೆ ಮತ್ತು ಔಷಧಿ ವಿತರಣೆ, ಮಧ್ಯಾಹ್ನ 1 ಗಂಟೆಗೆ ಮೈಸೂರು ನಗರ ಕಿವುಡ ಮತ್ತು ಮೂಕರ ಪಾಠಶಾಲೆಯ ಮಕ್ಕಳಿಗೆ ಭೋಜನ ಕಾರ್ಯಕ್ರಮ, ಉಪಸ್ಥಿತಿ: ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ, ಉದ್ಘಾಟನೆ: ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿ: ಸಂಸದ ಸುನೀಲ್ ಬೋಸ್.

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ವೀರಭದ್ರೇಶ್ವರ ಸ್ವಾಮಿಯ ಜನ್ಮೋತ್ಸವ, ಮಹಾರಥೋತ್ಸವ ಹಾಗೂ ಶ್ರಾವಣ ಮಾಸದ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಪ್ರಾಂಗಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ.

■ **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ) :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಸಂಜೆ 6 ಗಂಟೆಗೆ ವಿಶ್ರಾಂತ ಕನ್ನಡ ಪ್ರಾಧ್ಯಾಪಕರಾದ ಡಾ.ಕೆ.ಅನಂತರಾಮು ಅವರಿಂದ ಲಕ್ಷ್ಮಣ ದಂಡೇಶ ವಿರಚಿತ ಶಿವತತ್ವ ಚಿಂತಾಮಣಿ ವಿಷಯ ಕುರಿತು ಪ್ರವಚನ, ವಿದುಷಿ ಎಂ.ವಿ.ಶುಭಾ ರಾಘವೇಂದ್ರ ಅವರಿಂದ ವಾಚನ, 6.30ಕ್ಕೆ ಸಾಮೂಹಿಕ ಪ್ರಾರ್ಥನೆ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು.

■ **ಬೆಂಗಳೂರಿನ ಕರ್ನಾಟಕ ಜಾನಪದ ಅಕಾಡೆಮಿ, ಮೈಸೂರಿನ ಪ್ರಾದೇಶಿಕ ಜಾನಪದ ಮತ್ತು ಜಾನಪದ ಕಲೆಗಳ ಕಲಿಕಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ, ಏಕತೀರ ಸಾಂಸ್ಕೃತಿಕ ಸಂಘಟನೆ:** ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಜಾನಪದ ನೃತ್ಯಗಳು ಮತ್ತು ಜನಪದ ಗೀತೆಗಳ ಕಲಿಕಾ ತರಬೇತಿ ಶಿಬಿರ–2024, ಜನಪದ ಗಿತೆ ಪ್ರಕಾರಗಳು–ಕಂಸಾಳೆ, ನೀಲಗಾರರ ಸೋಬಾನೆ, ಗೀಗೀ, ಕೋಲಾಟ, ರಾಗಿ ಬೀಸೋ, ಲಾವಣಿ, ತತ್ವ ಪದಗಳು, ಜನಪದ ನೃತ್ಯ ಪ್ರಕಾರಗಳು– ಕಂಸಾಳೆ, ಪೂಜಾ ಕುಣಿತ, ಡೊಳ್ಳು ಕುಣಿತ, ಮುಳ್ಳೊ ಕುಣಿತ, ಕೋಲಾಟ, ವೀರಗಾಸೆ, ವೀರಭದ್ರ ಮತ್ತು ಪಟಾ ಕುಣಿತ, ಸ್ಥಳ: ಕಿರುರಂಗಮಂದಿರದ ಆವರಣ, ಕಲಾಮಂದಿರ, ಸಂಜೆ 4ರಿಂದ 6ಗಂಟೆವರೆಗೆ.

■ **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಮತ್ತು ಕದಳಿ ಮಹಿಳಾ ವೇದಿಕೆ:** ವಚನ–ಶ್ರಾವಣ: ಮನೆ ಮನೆಗೆ ಶ್ರಾವಣ ಮಾಸದ ಶರಣ ಸಂದೇಶ, ಚಿಂತಕ ಶಿವಕುಮಾರಸ್ವಾಮಿ ಅವರಿಂದ ಬಡತನಕ್ಕೆ ಉಂಬುವ ಚಿಂತೆ, ಉಣಲಾದರೆ ಉಡುವ ಚಿಂತೆ ವಿಷಯ ಕುರಿತು ಉಪನ್ಯಾಸ, ಸ್ಥಳ: ಬಸವೇಶ್ವರ ಮಠ, 4ನೇ ಕ್ರಾಸ್, ರಾಘವೇಂದ್ರ ನಗರ, ಸಂಜೆ 5.30ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ವಿವಿ ಗ್ರಂಥಾಲಯ:** ಡಾ.ಎಸ್.ಆರ್.ರಂಗನಾಥನ್ ಅವರ 132ನೇ ಜನ್ಮ ಶತಮಾನೋತ್ಸವ ಹಾಗೂ ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆ ಪ್ರಯುಕ್ತ ಉಪನ್ಯಾಸ ಕಾರ್ಯಕ್ರಮ, ಉದ್ಘಾಟನೆ ಮತ್ತು ಉಪನ್ಯಾಸ: ವಿಶ್ರಾಂತ ಗ್ರಂಥಪಾಲಕರಾದ ಎಂ.ಪುಟ್ಟಣ್ಣಯ್ಯ, ಉಪನ್ಯಾಸ: ಡಾ.ಎಸ್.ಆರ್.ರಂಗನಾಥನ್ ನಾ ಕಂಡಂತೆ. ಸ್ಥಳ: ಮಾನಸ ಮೀಡಿಯಾ ಸಭಾಂಗಣ, ಮೈಸೂರು ವಿವಿ ಗ್ರಂಥಾಲಯ, ಮಾನಸಗಂಗೋತ್ರಿ, ಮಧ್ಯಾಹ್ನ 3 ಗಂಟೆಗೆ.

■ **ಬಸವ ಭಾರತ ಪ್ರತಿಷ್ಠಾನ, ಸಮಸ್ತ ಬಸವಪರ ಸಂಘಟನೆಗಳ ಸಹಭಾಗಿತ್ವ :** ಬಸವ ಧರ್ಮ ಜಾಗೃತಿ, ಅಭಿಯಾನ, ಇಷ್ಟಲಿಂಗ ಧಾರಣೆ ಶಿವಯೋಗ, ವಚನ ಪಠಣ, ಶ್ರಾವಣ ಮಾಸದ ಪ್ರವಚನ, ಬಸವ ತತ್ವ ಚಿಂತಕರಾದ ಬೊಮ್ಮಲಪುರ ಬಸವಣ್ಣನವರಿಂದ ಧರ್ಮಗುರು ಬಸವಣ್ಣನವರಿಂದಲೇ ಒಂದಾಗಬೇಕಾದ ಸಮಾಜ ಕುರಿತು ಪ್ರವಚನ, ಸ್ಥಳ: ದಾರಿಪುರ ಸಮುದಾಯ ಭವನ, ಜಯಪುರ ಹೋಬಳಿ, ಸಂಜೆ 5 ಗಂಟೆಗೆ.

■ **ಜಗದ್ಗುರು ಶ್ರೀ ಮನ್ಮಧ್ವಾಚಾರ್ಯರ ಮೂಲ ಸಂಸ್ಥಾನ, ಶ್ರೀ ರಾಜೇಂದ್ರ ತೀರ್ಥರ ಪೂರ್ವಾದಿ ಮಠ, ಶ್ರೀ ಮುನಿತ್ರಯ ಪೀಠ, ಶ್ರೀ ವ್ಯಾಸರಾಜ ಮಠ (ಸೋಸಲೆ):** ಶ್ರೀ ವಿದ್ಯಾ ಕರ್ನಾಟಕ ಸಿಂಹಾಸನಾಧೀಶ್ವರರಾದ ಶ್ರೀ ಶ್ರೀ 1008 ಶ್ರೀ ವಿದ್ಯಾಶ್ರೀಶ ತೀರ್ಥ ಶ್ರೀಪಾದಂಗಳವರ 8ನೇ ಚಾತುರ್ಮಾಸ್ಯ, ಸ್ಥಳ: ಶ್ರೀ ವ್ಯಾಸರಾಜ ಮಠ, ಸೋಸಲೆ ಕ್ಷೇತ್ರ, ಸಂಜೆ 4 ಗಂಟೆಯಿಂದ.

■ **ಅವಧೂತ ದತ್ತ ಪೀಠ:** ದತ್ತ ಪೀಠಾಧಿಪತಿ ಜಗದ್ಗುರು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮತ್ತು ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಅವರಿಂದ 21ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ಶ್ರೀ ಸಚ್ಚಿದಾನಂದೇಶ್ವರ ಸ್ವಾಮಿಗೆ ಶ್ರಾವಣ ಮಾಸದ ಪ್ರಯುಕ್ತ ಏಕಾದಶಿ ರುದ್ರಾಭಿಷೇಕ, ನರಹರಿ ತೀರ್ಥರ ಆರಾಧನೆ, ಅರ್ಚಕರ ಸಭೆ, ಶ್ರೀ ದುಗ್ಗಿರಾಲಯಾಜ್ಞ ವಲ್ಯ ದಿಲೀಪ್‌ಕುಮಾರ್ ಶರ್ಮರವರಿಗೆ 'ಸ್ಮಾರ್ತ ನರಹರಿ' ಪ್ರಶಸ್ತಿ ಪ್ರದಾನ, ಬೆಳಗ್ಗೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ–ಮಂಜುಳಾ ಶಿವಾನಂದ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: "ಅಂಚೆ–ಅಂಕನ–ಆಕಾಶವಾಣಿ ಅಂಕಣ, ಪ್ರಸ್ತುತಿ: ಡಾ.ಅಮ್ಮಸಂದ್ರ ಸುರೇಶ ಹಾಗೂ ಎಂ.ಎನ್.ವಿಜಯಲಕ್ಷ್ಮಿ, ಪ್ರಾಯೋಜಕರು: ಭಾರತೀಯ ಅಂಚೆ, ಮೈಸೂರು ವಿಭಾಗ, 6.40–ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಕೆ.ಶ್ರೇಯಾ, ವ್ಯಾಖ್ಯಾನ: ಪ್ರೊ. ಮೈಸೂರು ಕೃಷ್ಣಮೂರ್ತಿ, 6.50–ರೈತರಿಗೆ ಸಲಹೆ, 7.15–ಭಾವಗೀತೆಗಳು, 9.00–ರಾಷ್ಟ್ರೀಯ ಬಾಹ್ಯಾಕಾಶ ದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ ಸರಣಿ– "ಬಾಹ್ಯಾಕಾಶ ವಿಸ್ಮಯ", 9.05–ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಮೇಲುಕೋಟೆಯ ಸುರೇಂದ್ರ ಕೌಲಗಿ ಅವರೊಂದಿಗೆ ಈಚನೂರು ಕುಮಾರ್ ಅವರು ನಡೆಸಿದ್ದ ಸಂವಾದ. 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಚಿತ್ರಾ ಬಿಲ್ವಂ– ಹಾಡುಗಾರಿಕೆ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಗೇಮ್ ಶೋ, ಪ್ರಸ್ತುತಿ: ದಿಗ್ವಿಜಯ್. ಬಿ ಮತ್ತು ಕೀರ್ತನಾ. ವಿ, 12.05–ವನಿತಾ ವಿಹಾರ–ಶ್ರಾವಣ ಸಂಭ್ರಮ ಈ ಕುರಿತು ಶಾರದಾ ಕೌದಿ ಅವರಿಂದ ಭಾಷಣ, ಸ್ವಾತಂತ್ರ್ಯ ಹೋರಾಟಗಾರ್ತಿ ಉಮಾಬಾಯಿ ಕುಂದಾಪುರ ಅವರ ಬಗ್ಗೆ ಮಾತನಾಡುತ್ತಾರೆ ಸುನಂದಾ ಹಾಲಬಾವಿ, **ಮಧ್ಯಾಹ್ನ:** 12.30–ದೇವರನಾಮ–ಸಹನ. ಆರ್, 12.45–ನಮ್ಮ ಆರೋಗ್ಯ: ಬಾಯಿ ಆರೋಗ್ಯ ಮಾಸಾಚರಣೆ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ–'ಒಸಡಿನ ಸೋಂಕು–ದೈಹಿಕ ರೋಗಗಳ ಕೇಂದ್ರಬಿಂದು' ಕುರಿತು ಮೈಸೂರಿನ ಜೆ.ಎಸ್.ಎಸ್ ದಂತ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಒಸಡು ಶಾಸ್ತ್ರ ವಿಭಾಗದ ಪ್ರೊಫೆಸರ್ ಹಾಗೂ ಮುಖ್ಯಸ್ಥರಾದ ಡಾ.ಸುಮನ್ ಬಸವರಾಜು ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 1.00–ರಾಷ್ಟ್ರೀಯ ಬಾಹ್ಯಾಕಾಶ ದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ ಸರಣಿ–"ಬಾಹ್ಯಾಕಾಶ ವಿಸ್ಮಯ", 1.20–ಭಾವಗೀತೆಗಳು, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಎಸ್.ಪಿ.ರಾಮ್–ಹಾಡುಗಾರಿಕೆ, 4.00–ಮಹಿಳಾರಂಗ: "ನಾನು ನನ್ನ ಕಂಪನಿ", ವಿಷಯ: ಕೌಶಲ್ಯ ಅಭಿವೃದ್ಧಿ ತರಬೇತುದಾರರು ಹಾಗೂ ಉದ್ಯಮಿ ರಚನಾ ಮಹೇಶ್ ಅವರೊಂದಿಗೆ ಮಾತುಕತೆ. ಪ್ರಸ್ತುತಿ: ಸಹನಾ, 4.45–ಹಿಂದಿ ಪಾಠ–ಕಿಶೋರ್ ಎಂ. ಕಾಕಡೆ, 6.50–ಕೃಷಿರಂಗ: ಕೃಷಿ ಶಿಕ್ಷಣದ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುತ್ತಾರೆ: ಚಾಮರಾಜನಗರ ತಾಲೂಕು ಹರದನಹಳ್ಳಿಯ ಕೃಷಿ ಮಹಾವಿದ್ಯಾಲಯದ ಪ್ರಾಧ್ಯಾಪಕ ಡಾ.ಜಿ.ನಾಗೇಶ್ ಹಾಗೂ ಅಂತಿಮ ಬಿ.ಎಸ್.ಸಿ ಕೃಷಿ ಪದವಿ ವಿದ್ಯಾರ್ಥಿಗಳಾದ ಪಿ.ನವ್ಯಶ್ರೀ ಹಾಗೂ ಯಕ್ಷಿತ್ ಡಿ.ಎಸ್, ಪ್ರಸ್ತುತಿ: ಎನ್.ಕೇಶವಮೂರ್ತಿ, 7.45–ಕನ್ನಡದಲ್ಲಿ ಭಾಷಣ, 8.15–ಸಂಸತ್ ಸಮೀಕ್ಷಾ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಎಸ್.ಶಶಾಂಕ್–ಕೊಳಲು ವಾದನ, 10.00–ನಾಟಕ –"ಸೀಮಾತೀತ ಸ್ವಾತಂತ್ರ್ಯ ವೀರ", ರಚನೆ–ಡಾ.ಜ್ಯೋತ್ಸ್ನಾ ಕೆ.ಕಾಮತ್, ನಿರ್ವಾಣ–ರಘುಪತಿ ಹೆಗ್ಡೆ, 10.30–ಸವಿನೆನಪು.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಆಗಸ್ಟ್ 12 ಸೋಮವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 118 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4





ಮೈಸೂರು ದಸರಾ–2024

ಬೆಂಗಳೂರಲ್ಲಿ ಇಂದು ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ಉನ್ನತ ಸಭೆ

- ಗಜಪಡೆಯ ಪಟ್ಟಿ, ಗಜಪಯಣದ ಆಹ್ವಾನ ಪತ್ರಿಕೆ ಬಿಡುಗಡೆ
- ದಸರಾ ಮಹೋತ್ಸವದ ಸಿದ್ಧತಾ ಕಾರ್ಯದ ಬಗ್ಗೆ ಮಹತ್ವದ ಚರ್ಚೆ
- ಆ.21ರ ಗಜಪಯಣದಲ್ಲಿ ಮೊದಲ ತಂಡದಲ್ಲಿ 9 ಆನೆಗಳ ಆಗಮನ



ಮೈಸೂರು, ಆ.11(ಎಂಟಿವೈ)– **ನಾಡಹಬ್ಬ ದಸರಾ ಮಹೋತ್ಸವ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ನಾಳೆ(ಆ.12) ಬೆಂಗಳೂರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ದಸರಾ ಉನ್ನತ ಮಟ್ಟದ ಸಭೆ ನಡೆಯಲಿದೆ.**

ದಸರಾ ಗಜಪಡೆಯ 14 ಆನೆಗಳ ಪಟ್ಟಿ ಹಾಗೂ ಗಜಪಯಣದ ಆಹ್ವಾನ ಪತ್ರಿಕೆಯನ್ನು ಸಭೆಯಲ್ಲಿ ಅಧಿಕೃತವಾಗಿ ಬಿಡುಗಡೆ ಮಾಡಲಾಗುತ್ತಿದೆ. ಪ್ರಸಕ್ತ ಸಾಲಿನ ದಸರಾ ಮಹೋತ್ಸವ ಅ.3ರಂದು ಆರಂಭವಾಗಿ ಅ.12 ವಿಜಯದಶಮಿಯಂದು ಜಂಬೂಸವಾರಿ ಮೆರವಣಿಗೆಯೊಂದಿಗೆ ಸಂಪನ್ನಗೊಳ್ಳಲಿದೆ. ಈ ಹಿನ್ನೆಲೆಯಲ್ಲಿ ದಸರಾ ಗಜಪಡೆ ಆಯ್ಕೆ ಪ್ರಕ್ರಿಯೆ ಪೂರ್ಣಗೊಂಡಿದ್ದು, ನಾಳಿನ ಉನ್ನತ ಮಟ್ಟದ ಸಭೆಯಲ್ಲಿ ಆನೆಗಳ ಆಹ್ವಾನ, ದಸರಾ ಮಹೋತ್ಸವದ ರೂಪು–ರೇಷೆ ಕುರಿತು ವಿಸ್ತೃತ ಚರ್ಚೆ ನಡೆಯಲಿದೆ. ಈ ಬಾರಿ ನಾಡಿನಾದ್ಯಂತ ಉತ್ತಮ ಮಳೆ ಬಿದ್ದಿದ್ದು, ಎಲ್ಲಾ ಅಣೆಕಟ್ಟೆಗಳು ತುಂಬಿ ತುಳುಕಿವೆ. ಕೃಷಿ ಚಟುವಟಿಕೆ ಉತ್ತಮವಾಗಿರುವುದರಿಂದ ಈ ಬಾರಿ ನಾಡಹಬ್ಬ ದಸರಾ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲು ಸರ್ಕಾರ ನಿರ್ಧರಿಸಿದೆ ಎಂದು ಹೇಳಲಾಗುತ್ತಿದೆ.

ಗಜಪಡೆ ಪಟ್ಟಿ ಬಿಡುಗಡೆ: ಜಂಬೂಸವಾರಿಯಲ್ಲಿ ಪಾಲ್ಗೊಳ್ಳಲು ಅಂಬಾರಿ ಆನೆ ಅಭಿಮನ್ಯು ನೇತೃತ್ವದ ಗಜಪಡೆಯನ್ನು ಈಗಾಗಲೇ ಆಯ್ಕೆ ಮಾಡಲಾಗಿದೆ. ಅರಣ್ಯ ಇಲಾಖೆಯ ಮೈಸೂರು ವನ್ಯಜೀವಿ ವಿಭಾಗವು ವಿವಿಧ ಕ್ಯಾಂಪ್‌ಗಳಿಗೆ ತೆರಳಿ 22 ಆನೆಗಳನ್ನು ಪರಿಶೀಲಿಸಿ, 18 ಆನೆಗಳನ್ನು ಗುರುತಿಸಿದೆ. ಅವುಗಳಲ್ಲಿ 14 ಆನೆಗಳು ಜಂಬೂಸವಾರಿ ಮೆರವಣಿಗೆಯಲ್ಲಿ ಪಾಲ್ಗೊಂಡರೆ, 4 ಆನೆಗಳನ್ನು ಹೆಚ್ಚುವರಿಯಾಗಿ ಕಾಯ್ದಿರಿಸಲಾಗಿದೆ. ಗಜಪಡೆಯ ಪಟ್ಟಿಯನ್ನು ನಾಳೆ ಸಿಎಂ ಬಿಡುಗಡೆ ಮಾಡಲಿದ್ದಾರೆ.

ಸಭೆಯಲ್ಲಿ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಅರಣ್ಯ ಸಚಿವ ಈಶ್ವರ್ ಬಿ.ಖಂಡ್ರೆ, ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, ಪ್ರವಾಸೋದ್ಯಮ ಸಚಿವ ಹೆಚ್.ಕೆ. ಪಾಟೀಲ್, ಅರಣ್ಯ ಇಲಾಖೆ ವತಿಯಿಂದ ಹೆಚ್‌ಒಪಿಸಿಸಿಎಫ್, ಪಿಸಿಸಿಎಫ್, ಮೈಸೂರು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಎಸ್ಪಿ ಡಾ. ವಿಷ್ಣುವರ್ಧನ್, ಪಾಲಿಕೆ ಆಯುಕ್ತ ಅಷಾದ್ ಉರ್ ರೆಹಮಾನ್, ಮೈಸೂರು ವೃತ್ತದ ಸಿಎಫ್ ಮಾಲತಿ ಪ್ರಿಯಾ, ವನ್ಯಜೀವಿ ವಿಭಾಗದ ಡಿಸಿಎಫ್ ಪ್ರಭುಗೌಡ ಸೇರಿದಂತೆ ಇನ್ನಿತರರು ಪಾಲ್ಗೊಳ್ಳಲಿದ್ದಾರೆ.

ಆ.21ಕ್ಕೆ ಗಜಪಯಣ

ಆಯ್ಕೆ ಮಾಡಿರುವ 14 ಆನೆಗಳಲ್ಲಿ ಅಂಬಾರಿ ಆನೆ ಅಭಿ ಮನ್ಯು ನೇತೃತ್ವದಲ್ಲಿ 9 ಆನೆಗಳು ಮೊದಲ ತಂಡದಲ್ಲಿ ಆ.21ರಂದು ಗಜಪಯಣದ ಮೂಲಕ ಮೈಸೂರಿಗೆ ಆಗಮಿಸಲಿವೆ. ಗಜಪಯಣದ ಆಹ್ವಾನ ಪತ್ರಿಕೆ, ಮೊದಲ ತಂಡದಲ್ಲಿ ಬರುವ ಆನೆಗಳ ವಿವರ, ಎರಡನೇ ತಂಡದಲ್ಲಿ ಬರುವ ಆನೆ ಹಾಗೂ ಕಾಯ್ದಿರಿಸಿದ ಆನೆಗಳ ವಿವರವನ್ನು ಉನ್ನತ ಮಟ್ಟದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಡುಗಡೆ ಮಾಡಲಿದ್ದಾರೆ.

ಮುಡಾದಿಂದ 40 ವರ್ಷದ ಹಿಂದೆಯೇ ಬದಲಿ ನಿವೇಶನ ಪಡೆದಿರುವ ಸಿದ್ದರಾಮಯ್ಯ!

■ ಶಾಸಕರಾಗಿದ್ದಾಗ ಸಿದ್ದರಾಮಯ್ಯನವರೇ ಕೋರಿದ್ದ ಪತ್ರ ಬಹಿರಂಗ ■ ಅಂದಿನ ಸಿಐಟಿಬಿ ಅಧ್ಯಕ್ಷರಿಂದ ಮಂಜೂರು ■ ಬಿಜೆಪಿ, ಜೆಡಿಎಸ್ ಕೈಗೆ ಮತ್ತೊಂದು ಅಸ್ತ್ರ!


ಮೈಸೂರು, ಆ.11(ಬಿಎಲ್‌ಯು)– ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಮುಡಾದಿಂದ ಬದಲಿ ನಿವೇಶನ ಪಡೆದಿರುವುದು ತಡವಾಗಿ ಬೆಳಕಿಗೆ ಬಂದಿದೆ.

ಮುಡಾ ಹಾಗೂ ವಾಲ್ಮೀಕಿ ನಿಗಮ ಹಗರಣದ ಆರೋಪ ಹೊತ್ತಿರುವ ಸಿದ್ದರಾಮಯ್ಯ ಈಗ ಬದಲಿ ನಿವೇಶನ ಪಡೆದಿರುವ ಮತ್ತೊಂದು ಪ್ರಕರಣದ ಆರೋಪಕ್ಕೆ ಗುರಿಯಾಗಿದ್ದಾರೆ.

ಸಿದ್ದರಾಮಯ್ಯ 1983ರಲ್ಲಿ ಮೊದಲ ಬಾರಿಗೆ ವಿಧಾನಸಭೆಗೆ ಆಯ್ಕೆಯಾದರು. ಆ ಸಂದರ್ಭದಲ್ಲಿ ಅವರಿಗೆ ಮೈಸೂರಿನ ಜಯನಗರ–ತೊಣಚಿಕೊಪ್ಪಲ್, 2ನೇ ಹಂತ 'ಎಂ' ಬ್ಲಾಕ್‌ನಲ್ಲಿ 50X80 ಅಳತೆಯ ನಿವೇಶನ ಸಂಖ್ಯೆ 9 ಮಂಜೂರಾಗಿತ್ತು.

ಅಂದಿನ ಮೈಸೂರು ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ, ಸಿದ್ದರಾಮಯ್ಯರಿಗೆ ಈ ನಿವೇಶನ ಮಂಜೂರು ಮಾಡಿತ್ತು. ಆದರೆ ಈ ನಿವೇಶನಕ್ಕೆ ಬದಲಾಗಿ ಬದಲಿ ನಿವೇಶನ ನೀಡುವಂತೆ ಮೇ, 8, 1984ರಲ್ಲಿ ಅಂದಿನ ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ ಅಧ್ಯಕ್ಷರಿಗೆ ಅವರು ಪತ್ರ ಬರೆದಿದ್ದರು.

ಸಿದ್ದರಾಮಯ್ಯ ಬರೆದಿರುವ ಪತ್ರದ ಒಕ್ಕಣೆ ಹೀಗಿದೆ; ಈ ಕೆಳಗೆ ರುಜು ಮಾಡಿರುವ ಸಿದ್ದರಾಮಯ್ಯ, ಶಾಸಕನಾದ ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ನನಗೆ ಜಯನಗರ–ತೊಣಚಿಕೊಪ್ಪಲ್, 2ನೇ ಹಂತ, ಎಂ–ಬ್ಲಾಕ್‌ನಲ್ಲಿ ನಿವೇಶನ ಸಂಖ್ಯೆ 9, ಅಳತೆ 50X80 ಅನ್ನು ರೂಪಾಯಿ 30ರಂತೆ ಕೊಟ್ಟಿರುವುದು ಸರಿಯಷ್ಟೆ.



ಸಿದ್ದರಾಮಯ್ಯ ಬರೆದಿರುವ ಪತ್ರ

ಸದರಿ ನಿವೇಶನಕ್ಕೆ ಬದಲಾಗಿ ಜಯನಗರ–ತೊಣಚಿಕೊಪ್ಪಲ್ 'ಜಿ' ಮತ್ತು 'ಹೆಚ್' ಬ್ಲಾಕ್‌ನಲ್ಲಿ ಖಾಲಿ ಇರುವ 50X80 ಅಳತೆವುಳ್ಳ, ನಿವೇಶನ ಸಂಖ್ಯೆ 1245 ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇದರ ಸಂಬಂಧ ಅಂದಿನ ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ ಅಧ್ಯಕ್ಷ ಬಿ.ಕೆ.ಪುಟ್ಟಯ್ಯ, ಸಿದ್ದರಾಮಯ್ಯ ಅವರಿಗೆ ಬದಲಿ ನಿವೇಶನ ಮಂಜೂರು ಮಾಡುವಂತೆ ಷರಾ ಬರೆದು ಆದೇಶ ಮಾಡಿದ್ದಾರೆ.

ಸಮರ್ಥನೆ: ಮೈಸೂರಿನ ಕೆಸರೆ ಸರ್ವೆ ನಂಬರ್ 364ರಲ್ಲಿ 3.16 ಎಕರೆಗೆ ಶೇ. 50:50 ಅನುಪಾತದಡಿ ■ 9ನೇ ಪುಟಕ್ಕೆ

ಇದೇನಾ ನಿಮ್ಮ ಶುದ್ಧ ರಾಜಕೀಯ ಜೀವನ ಸಿದ್ದರಾಮಯ್ಯನವರೇ...!

ಸಿದ್ದರಾಮಯ್ಯರ ವಿಚಾರವಾಗಿ ಒಂದು ಸಣ್ಣ ವಿಚಾರ ಸಿಕ್ಕರೂ ಮುಗಿಬೀಳುವ ಜೆಡಿಎಸ್‌ಗೆ ಈ ಬದಲಿ ನಿವೇಶನ ಪ್ರಕರಣ ಮತ್ತೊಂದು ಅಸ್ತ್ರ ಸಿಕ್ಕಂತಾಗಿದೆ. ಸಿದ್ದರಾಮಯ್ಯ ಬದಲಿ ನಿವೇಶನ ಪಡೆದಿರುವ ಪ್ರಕರಣ ಸಂಬಂಧ ಜೆಡಿಎಸ್ ಎಕ್ಸ್ ಖಾತೆಯಲ್ಲಿ, ಸಿದ್ದರಾಮಯ್ಯ ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡಿದೆ.

'ಗುಳಿಗೆ ಸಿದ್ದ ಒಳಗೆ ಮೇಯ್ದ' ಎಂಬ ಈ ಮಾತು ನಿಮ್ಮಂತಹವರನ್ನು ನೋಡಿಯೇ ಹೇಳಿರಬೇಕು ಸಿದ್ದರಾಮಯ್ಯ ಅವರೇ ಎಂದು ಜೆಡಿಎಸ್ ಲೇವಡಿ ಮಾಡಿದೆ. ನನಗೆ ಒಂದು ನಿವೇಶನವೂ ಇಲ್ಲ, ಯಾವುದೇ ಲೆಟರ್ ಬರೆದಿಲ್ಲ ಎಂದು ಸುಳ್ಳು ಹೇಳುವ ಸಿದ್ದರಾಮಯ್ಯ ಅವರೇ ಸಮಾಜವಾದಿ ಮುಖವಾಡ ತೊಟ್ಟು ನೀವು ಮಾಡಿರುವ ಈ ಅಕ್ರಮಗಳಿಗೆ ಈ ಲೆಟರ್ ಸಾಕ್ಷಿ ಎಂದು ಹೇಳಿದೆ. ಬದಲಿ ನಿವೇಶನ ಕೋರಿ ನೀವೇ ಸ್ವತಃ ಬರೆದಿರುವ ಪತ್ರ, ನಿಮ್ಮದೇ ಸಹಿ, ಇಷ್ಟು ಸಾಕಲ್ಲವೆ, ಇದು ನಿಮಗೆ ಕಪ್ಪು ಚುಕ್ಕೆ ಅಲ್ಲವೆ? ಎಂದು ಪ್ರಶ್ನಿಸಿದೆ.

ದಿನಪತ್ರಿಕೆಗಳು ಹಾಗೂ ಮಾಧ್ಯಮಗಳ ಮುಂದೆ ನಾನು ಶುದ್ಧ ಹಸ್ತ, ಸಮಾಜವಾದಿ ಎಂದು ಸತ್ಯ ಹರಿಶ್ಚಂದ್ರನಂತೆ ಮಾತನಾಡುವ ನಿಮ್ಮ ಅಸಲಿ ಬಂಡವಾಳ ಈಗ ಬಯಲಾಗಿದೆ ಎಂದು ಟೀಕಿಸಿದೆ. ದಲಿತರ ಜಮೀನು ಕಬಳಿಸಿರುವ ನೀವು ಪರಿಶಿಷ್ಟ ಸಮುದಾಯಕ್ಕೆ ವಂಚಿಸಿದ್ದೀರಿ. ಸುಳ್ಳುಗಳ ಮೇಲೆ ಸುಳ್ಳುಗಳನ್ನು ಹೇಳುತ್ತಾ ನಾಡಿನ ಜನರಿಗೂ ನಂಬಿಕೆ ದ್ರೋಹ ಎಸಗಿದ್ದೀರಿ. ಇದೇನಾ ನಿಮ್ಮ ಶುದ್ಧ ರಾಜಕೀಯ ಜೀವನ ಎಂದು ಮರು ಪ್ರಶ್ನಿಸಿದೆ. ಸಿದ್ದರಾಮಯ್ಯ ಅವರೇ ನಿಮಗೆ ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರೆಯುವ ಯಾವ ನೈತಿಕತೆಯೂ ಉಳಿದಿಲ್ಲ. ಮೊದಲು ರಾಜೀನಾಮೆ ಕೊಟ್ಟು ನಿರ್ಗಮಿಸಿ ಎಂದು ಜೆಡಿಎಸ್ ಆಗ್ರಹಿಸಿದೆ.

ಯಾವ ಕಾರಣಕ್ಕೆ ಬದಲಿ ನಿವೇಶನ...!

ನಗರಾಭಿವೃದ್ಧಿ ವಿಶ್ವಸ್ಥ ಮಂಡಳಿ ಹಾಗೂ ಹಾಲಿ ಮುಡಾ ನೀಡಿದಂತಹ ನಿವೇಶನ ಮನೆ ನಿರ್ಮಾಣಕ್ಕೆ ಯೋಗ್ಯವಿಲ್ಲ ಎಂಬುದು ರುಜುವಾತಾದರೆ ಬದಲಿ ನಿವೇಶನಕ್ಕೆ ಅರ್ಜಿ ಸಲ್ಲಿಸಲು, ಮಂಜೂರು ಮಾಡಲು ಅವಕಾಶವಿದೆ. ಇಲ್ಲವೇ ಆ ನಿವೇಶನ ಸಂಬಂಧ ಯಾವುದಾದರೂ ಕಾನೂನು ತಕರಾರು ಇದ್ದಾಗ ಕೂಡ ಬದಲಿ ನಿವೇಶನ ಪಡೆಯಲು ಅವಕಾಶವಿದೆ. ಆದರೆ ಸಿದ್ದರಾಮಯ್ಯರಿಗೆ ಮೊದಲು ಮಂಜೂರಾದ ನಿವೇಶನ ಮನೆ ನಿರ್ಮಾಣಕ್ಕೆ ಯೋಗ್ಯವಾಗಿತ್ತು ಆದರೆ ಯಾವ ಕಾರಣಕ್ಕೆ ಮತ್ತೊಂದು ಕಡೆ ಬದಲಿ ನಿವೇಶನ ಪಡೆದಿದ್ದಾರೆಂಬುದು ಇನ್ನಷ್ಟೇ ಬಹಿರಂಗವಾಗಬೇಕಿದೆ ಅಂತೂ ಸಿದ್ದರಾಮಯ್ಯ 40 ವರ್ಷದ ಹಿಂದೆಯೇ ಬದಲಿ ನಿವೇಶನ ಪಡೆದಿರುವುದು ಈಗ ಬಯಲಾಗಿದೆ.

ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚನೆ; ಸರ್ಕಾರದ ನಡೆಗೆ ಹೈಕೋರ್ಟ್ ತಾತ್ಕಾಲಿಕ ಬ್ರೇಕ್

ಚಾಮುಂಡಿ ಆಸ್ತಿಗೆ ಕೈಹಾಕಿದ ಮೂರೇ ತಿಂಗಳಲ್ಲಿ ಸಿಎಂಗೆ ಮುಡಾ ಉರುಳು!?

ಸಿಎಂ ಸಿದ್ದರಾಮಯ್ಯ ಮುಡಾ ಸಂಕಷ್ಟಕ್ಕೆ ಇದು ಕಾರಣವೇ...?

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಧರ್ಮಪತ್ನಿ ಪಾರ್ವತಿ ಅವರಿಗೆ ಮುಡಾ 14 ನಿವೇಶನ ಮಂಜೂರಾತಿ ವಿಚಾರ ವಿಪಕ್ಷಗಳಿಗೆ ದೊಡ್ಡ ಅಸ್ತ್ರವಾಗಿದೆ. ಬಿಜೆಪಿ– ಜೆಡಿಎಸ್ ಮೈಸೂರು ಚಲೋ ಮೂಲಕ ಸಿದ್ದರಾಮಯ್ಯನವರ ರಾಜೀನಾಮೆಗೆ ಆಗ್ರಹಿಸಿವೆ. ಸಿದ್ದರಾಮಯ್ಯರಿಗೆ ಮುಡಾ ಸಂಕಷ್ಟ ಎದುರಾಗಲು ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚನೆ ಕಾರಣ ಎಂಬ ಚರ್ಚೆ ಶುರುವಾಗಿದೆ. ಅಚ್ಚರಿ ಎಂಬಂತೆ ಪ್ರಾಧಿಕಾರದ ಮೂಲಕ ಚಾಮುಂಡೇ ಶ್ವರಿ ಆಸ್ತಿ ಮೇಲೆ ಸರ್ಕಾರ ಸಂಪೂರ್ಣ ಹಿಡಿತ ಸಾಧಿಸಿದ ಮೂರ್‍ನಾಲ್ಕು ತಿಂಗಳಲ್ಲಿ ಸಿಎಂಗೆ ಮುಡಾ ಹಗರಣ ಉರುಳಾಗಿದೆ ಎಂದು ಕೆಲವರು ಮಾತನಾಡಿಕೊಳ್ಳುತ್ತಿದ್ದಾರೆ. ಸಿದ್ದರಾಮಯ್ಯ ಅವರು ದಸರಾ ಮಹೋತ್ಸವ ಉದ್ಘಾಟನೆ ಇನ್ನಿತರ ವಿಶೇಷ ಕಾರಣಗಳಿದ್ದಾಗ ಮಾತ್ರ ಚಾಮುಂಡಿಬೆಟ್ಟಕ್ಕೆ ಹೋಗುತ್ತಿದ್ದರು. ಆದರೆ ಕಾಂಗ್ರೆಸ್ ಜನಾಂದೋಲನ ಸಮಾವೇಶದ ಮರುದಿನ ಚಾಮುಂಡಿಬೆಟ್ಟಕ್ಕೆ ತೆರಳಿ, ವಿಶೇಷ ಪೂಜೆ ಸಲ್ಲಿಸಿದ್ದು ಗಮನಾರ್ಹವಾಗಿದೆ



ಬೆಂಗಳೂರು, ಆ.11– ಮೈಸೂರು ರಾಜಮನೆತನದವರನ್ನು ಹೊರಗಿಟ್ಟು ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚಿಸಿದ ರಾಜ್ಯ ಸರ್ಕಾರ ಕಾಯ್ದೆಗೆ ಹೈಕೋರ್ಟ್ ತಾತ್ಕಾಲಿಕ ತಡೆ ನೀಡಿದೆ.

ರಾಜವಂಶಸ್ಥೆ ಶ್ರೀಮತಿ ಪ್ರಮೋದಾದೇವಿ ಒಡೆಯರ್ ಸಲ್ಲಿಸಿದ್ದ ರಿಟ್ ಅರ್ಜಿಯ ವಿಚಾರಣೆ ನಡೆಸಿದ ಹೈಕೋರ್ಟ್ ಏಕ ಸದಸ್ಯ ಪೀಠ, ರಾಜ್ಯ ಸರ್ಕಾರದ ನಡೆಗೆ ತಾತ್ಕಾಲಿಕ ತಡೆಯಾಜ್ಞೆ ನೀಡಿದ್ದು, ಈ ಮೂಲಕ ಪ್ರಾಧಿಕಾರದ ಕಾರ್ಯಚಟುವಟಿಕೆಗೆ ಬ್ರೇಕ್ ಹಾಕಿದಂತಾಗಿದೆ.



ಪ್ರಮೋದಾದೇವಿ

ರಾಜ್ಯ ಸರ್ಕಾರ ಕಳೆದ ಮಾರ್ಚ್ 7ರಂದು ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮದ ಹೊಸ ಕಾಯ್ದೆ ಜಾರಿಗೆ ತಂದಿತು. ಈ ಮೂಲಕ ಚಾಮುಂಡೇಶ್ವರಿ ದೇವಾಲಯದ ಮೇಲೆ ರಾಜಮನೆತನದ ಸಂಪೂರ್ಣ ಅಧಿಕಾರ ಮೊಟಕುಗೊಳ್ಳಲಿದೆ ಎನ್ನಲಾಗಿತ್ತು. ಹೀಗಾಗಿ ಈ ಕಾಯ್ದೆಯನ್ನು ಪ್ರಶ್ನಿಸಿ ಪ್ರಮೋದಾದೇವಿ ■ 9ನೇ ಪುಟಕ್ಕೆ

ಪ್ಯಾರಿಸ್ ಒಲಿಂಪಿಕ್ಸ್‌ಗೆ ವರ್ಣರಂಜಿತ ತೆರೆ

ಪ್ಯಾರಿಸ್, ಆ.11– ಕಳೆದ 2 ವಾರಗಳಿಗೂ ಹೆಚ್ಚು ಕಾಲ ಪ್ರಣಯದೂರಿನಲ್ಲಿ ನಡೆದ ಒಲಿಂಪಿಕ್ಸ್ ಕ್ರೀಡಾಕೂಟಕ್ಕೆ ಭಾನುವಾರ ರಾತ್ರಿ ವರ್ಣರಂಜಿತ ತೆರೆ ಬಿದ್ದಿತ್ತು.

ಪ್ಯಾರಿಸ್‌ನ ಹೃದಯ ಭಾಗವಾದ 'ಸ್ಟೇಡ್ ಡೆ ಫ್ರಾನ್ಸ್ ಸ್ಟೇಡಿಯಂ'ನಲ್ಲಿ ಭಾರತೀಯ ಕಾಲಮಾನ ರಾತ್ರಿ 12.30ಕ್ಕೆ ಸಮಾರೋಪ ಸಮಾರಂಭ ನಡೆಯಿತು. ಸಾಕಷ್ಟು ವಿವಾದಗಳ ನಡುವೆ ನಡೆದ ಒಲಿಂಪಿಕ್ಸ್‌ನಲ್ಲಿ 32 ಕ್ರೀಡೆಗಳ 10 ಸಾವಿರಕ್ಕೂ ಹೆಚ್ಚು ಕ್ರೀಡಾಪಟುಗಳು ಪದಕಕ್ಕಾಗಿ ಸೆಣಸಾಡಿದರು. ಭಾರತದ ಪರ 117 ಕ್ರೀಡಾಪಟುಗಳು ಅಖಾಡಕ್ಕಿಳಿದಿದ್ದರು. ಇಷ್ಟು ದಿನಗಳ ಕಾಲ ಪ್ರಜ್ವಲಿಸುತ್ತಿದ್ದ ಒಲಿಂಪಿಕ್ಸ್ ಜ್ಯೋತಿ ನಿಧಾನವಾಗಿ ಆರುವುದರ ಜೊತೆಗೆ ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿ ಅಧ್ಯಕ್ಷ ಥಾಮಸ್ ಬಾಕ್ ಅವರು ಪ್ಯಾರಿಸ್ ಒಲಿಂಪಿಕ್ಸ್‌ಗೆ ಮುಕ್ತಾಯ ಘೋಷಿಸಿದರು. ಮುಂದಿನ ಒಲಿಂಪಿಕ್ಸ್ 2028ರಲ್ಲಿ ಅಮೆರಿಕಾದ ಲಾಸ್ ಏಂಜಲೀಸ್‌ನಲ್ಲಿ ನಡೆಯಲಿದೆ.

ಪೂರ್ಣ ವರದಿ ಪುಟ–2

ಮೈಸೂರು ರಿಂಗ್ ರಸ್ತೆಯೂ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ವಾಹನಗಳಿಗೆ ವೇಗದ ಮಿತಿ ನಿಗದಿ

ವಾಹನ ಚಾಲಕರಿಗೆ ಅರಿವಾಗುವಂತೆ ಅಲ್ಲಲ್ಲಿ ಫಲಕ ಅಳವಡಿಕೆ



ಮೈಸೂರಿನ ರಿಂಗ್ ರಸ್ತೆಯಲ್ಲಿ ವಾಹನಗಳ ವೇಗದ ಮಿತಿ ಫಲಕ ಅಳವಡಿಸಿರುವುದು.

ಮೈಸೂರು, ಆ.11(ಎಂಟಿವೈ)– ಸಂಚಾರಿ ನಿಯಮ ಉಲ್ಲಂಘನೆ, ಅದರಿಂದಾಗುವ ಅನಾಹುತ ತಡೆಗೆ ಮೈಸೂರಿನ ರಿಂಗ್ ರಸ್ತೆ ಸೇರಿದಂತೆ ವಿವಿಧೆಡೆ ಪ್ರಮುಖ ರಸ್ತೆಗಳಲ್ಲಿ ಈಗಾಗಲೇ ಕೃತಕ ಬುದ್ಧಿಮತ್ತೆ(ಎಐ) ಕ್ಯಾಮರಾ ಅಳವಡಿಸಿದ್ದು, ಮಿತಿ ಮೀರಿದ ವೇಗಕ್ಕೆ ಬ್ರೇಕ್ ಹಾಕಲು ವೇಗದ ಮಿತಿ ನಿಗದಿಪಡಿಸಿ, ಅಲ್ಲಲ್ಲಿ ಫಲಕಗಳ ಅಳವಡಿಸಲಾಗಿದೆ.

ಮೈಸೂರಿನ ರಿಂಗ್ ರಸ್ತೆ, ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಸೇರಿದಂತೆ ಮೈಸೂರಿಗೆ ಸಂಪರ್ಕ ಕಲ್ಪಿಸುವ ಎಲ್ಲಾ ರಸ್ತೆಗಳಲ್ಲೂ ವಾಹನಗಳ ನಂಬರ್ ಪ್ಲೇಟ್ ಗುರುತಿಸುವ ಸ್ವಯಂಚಾಲಿತ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್(ಎಐ) ಕ್ಯಾಮರಾ ಅಳವಡಿಸಲಾಗಿದೆ. ಮಿತಿ ಮೀರಿದ ವೇಗ, ಸೀಟ್ ಬೆಲ್ಟ್, ಹೆಲ್ಮೆಟ್ ಧರಿಸದೇ ವಾಹನ ಚಾಲನೆ ಮಾಡುವ ಸವಾರರಿಗೆ ದಂಡದ ಬಿಸಿ ಮುಟ್ಟಿಸಲಾಗುತ್ತಿದೆ.

ರಿಂಗ್ ರಸ್ತೆ ಹಾಗೂ ಮೈಸೂರಿಗೆ ಸಂಪರ್ಕ ಕಲ್ಪಿಸುವ ವಿವಿಧ ರಸ್ತೆಗಳಲ್ಲಿ ವೇಗದ ಚಾಲನೆಗೆ ದಂಡ ಕಟ್ಟುವ ಪರಿಸ್ಥಿತಿಗೆ ಒಳಗಾದ ಅನೇಕ ವಾಹನ ಚಾಲಕರು ವೇಗದ ಮಿತಿ ಕುರಿತಂತೆ ಸೂಚನಾ ಫಲಕ ಅಳವಡಿಸದೇ ಇರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ್ದರು. ಪೊಲೀಸ್ ■ 9ನೇ ಪುಟಕ್ಕೆ

ಅಪಘಾತ ತಪ್ಪಿಸಲು ವೇಗದ ಮಿತಿ ಅಗತ್ಯ

ರಿಂಗ್ ರಸ್ತೆ ಸೇರಿದಂತೆ ವಿವಿಧೆಡೆ ಎಐ ಕ್ಯಾಮರಾಗಳ ಅಳವಡಿಸಲಾಗಿದ್ದು, ಅತೀ ವೇಗವಾಗಿ ಚಲಿಸುವ ವಾಹನಗಳ ದೃಶ್ಯವನ್ನು ಎಐ ಕ್ಯಾಮರಾ ಸೆರೆ ಹಿಡಿಯಲಿದೆ. ವೇಗದ ಮಿತಿ ಬಗ್ಗೆ ವಾಹನ ಚಾಲಕರಿಗೆ ಮಾಹಿತಿ ನೀಡಲು ಹಲವೆಡೆ ಫಲಕ ಅಳವಡಿಸಲಾಗಿದೆ. ರೋಡ್ ಸೇಫ್ಟಿ ಕಮಿಟಿ ಈ ವೇಗದ ಮಿತಿ ನಿರ್ಧರಿಸುತ್ತದೆ.

– ಪರಶುರಾಮಪ್ಪ, ಎಸಿಪಿ, ಸಂಚಾರ ವಿಭಾಗ

ಅರಳಕುಪ್ಪೆಯಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿ ಭತ್ತ ನಾಟಿ

ನಿಖಿಲ್ ಕುಮಾರಸ್ವಾಮಿ, ಸಿ.ಎಸ್.ಪುಟ್ಟರಾಜು, 125 ಹೆಣ್ಣಾಳು, 50 ಗಂಡಾಳು ಸಾಥ್

- ಗದ್ದೆಯ ಸುತ್ತ ಹಬ್ಬದ ವಾತಾವರಣ
- ಬಂದವರಿಗೆಲ್ಲ ರಾಗಿ ಮುದ್ದೆ, ಅವರೇಕಾಳು ಕೂಟು, ಮೊಸಪ್ಪು ಊಟ

ಚಿನಕುರಳಿ, ಆ.11– ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮತ್ತು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಪಾಂಡವಪುರ ತಾಲೂಕು ಚಿನಕುರಳಿ ಹೋಬಳಿಯ ಅರಳಕುಪ್ಪೆ–ಸೀತಾಪುರ ಗ್ರಾಮದ ಹೊರವಲಯದಲ್ಲಿ ರೈತ ಲಕ್ಷ್ಮಣ ಅವರ ಗದ್ದೆಯಲ್ಲಿ ಭತ್ತದ ನಾಟಿ ಮಾಡುವ ಮೂಲಕ ರೈತರ ಉತ್ಸಾಹ ಹೆಚ್ಚಿಸಿದರು.

2018ರ ಆಗಸ್ಟ್ 11ರಂದು, ಮುಖ್ಯಮಂತ್ರಿಯಾಗಿದ್ದ ಎಚ್.ಡಿ.ಕುಮಾರಸ್ವಾಮಿ ಇದೇ ಕೃಷಿ ಪ್ರದೇಶದಲ್ಲಿ ಭತ್ತದ ನಾಟಿ ಮಾಡಿದ್ದರು. ಇದೀಗ ಕೇಂದ್ರ ಸಚಿವರಾಗಿರುವ ಎಚ್.ಡಿ. ಕುಮಾರಸ್ವಾಮಿ ನಾಟಿ ಮಾಡುವ ಮೂಲಕ ಕೃಷಿ ಚಟುವಟಿಕೆಗೆ ಪ್ರೋತ್ಸಾಹ ನೀಡಿದ್ದಾರೆ.

ಭಾನುವಾರ ಮಧ್ಯಾಹ್ನ 11.45ಕ್ಕೆ ಬಿಳಿಶರ್ಟ್, ಬಿಳಿಪಂಚೆ ಧರಿಸಿದ್ದ ಕುಮಾರಸ್ವಾಮಿ ಕಾವೇರಿ ನದಿ ತೀರಕ್ಕೆ ತೆರಳಿ ಜೀವನದಿಗೆ ಪೂಜೆ ಸಲ್ಲಿಸಿ, ಬಾಗಿನ ಅರ್ಪಿಸಿ ಹೊಳೆ ಆಂಜನೇಯಸ್ವಾಮಿಗೆ ಪೂಜೆ ಸಲ್ಲಿಸಿದರು. ನಂತರ ಗದ್ದೆ ಬಳಿ ಬಂದು ಮಂಜುನಾಥಸ್ವಾಮಿಗೆ ಪುಷ್ಪಾರ್ಚನೆ ಮಾಡಿ, ಭತ್ತದ ರಾಶಿಗೆ ಪೂಜೆ ಸಲ್ಲಿಸಿದರು. ಬಳಿಕ ಪಂಚೆ ಎತ್ತಿಕಟ್ಟಿ ಗದ್ದೆಗಿಳಿದು ಭತ್ತದ ಸಸಿ ಹಿಡಿದು ಹೆಣ್ಣಾಳುಗೊಂದಿಗೆ ನಾಟಿ ಮಾಡಿದರು.

ಸ್ವಲ್ಪ ತಡವಾಗಿ ಆಗಮಿಸಿದ ನಿಖಿಲ್ ಕುಮಾರಸ್ವಾಮಿ ಕೂಡ ತಂದೆಗೆ ಸಾಥ್ ನೀಡಿ, ನಾಟಿ ಮಾಡಿದರು. ಎಚ್‌ಡಿಕೆ, ನಿಖಿಲ್ ಕುಮಾರಸ್ವಾಮಿ ಅವರೊಟ್ಟಿಗೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಶಾಸಕ ಎಚ್.ಟಿ.ಮಂಜು, ಮಾಜಿ ಶಾಸಕ ಕೆ.ಅನ್ನದಾನಿ, ಡಿ.ರಮೇಶ್ ನಾಟಿ ಮಾಡಿದರು. ನಂತರ ಧರ್ಮಸ್ಥಳ ಸಂಸ್ಥೆಯವರು ತಂದಿದ್ದ ಭತ್ತ ನಾಟಿ ಮಾಡುವ ಯಂತ್ರ ಏರಿದ ಸಚಿವ ಎಚ್.ಡಿ. ಕುಮಾರಸ್ವಾಮಿ, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರೊಂದಿಗೆ ಯಂತ್ರದ ಮೂಲಕವೂ ನಾಟಿ ಮಾಡುವ ಕಾರ್ಯಕ್ಕೆ ಚಾಲನೆ ನೀಡಿದರು.

ಯಂತ್ರದಲ್ಲಿ ಗದ್ದೆಯ ಒಂದು ಸುತ್ತು ಹಾಕಿ ನಾಟಿ ಮಾಡಿದರು. ಬಳಿಕ ಹೆಣ್ಣಾಳುಗಳೊಂದಿಗೆ ಕುಳಿತು ರಾಗಿಮುದ್ದೆ, ಅವರೇಕಾಳು ಕೂಟು, ಮೊಸಪ್ಪು ಸಾರು ಊಟ ಸವಿದರು. ಕೊನೆಗೆ ನಾಟಿಗೆ ತಮ್ಮೊಂದಿಗೆ ಸಹಕರಿಸಿದ ಮಹಿಳೆಯರನ್ನು ಎಚ್‌ಡಿಕೆ ಅಭಿನಂದಿಸಿ ವರಮಹಾಲಕ್ಷ್ಮಿ ಹಬ್ಬಕ್ಕೆ ಉಡುಗೊರೆ ನೀಡಿದರು.

ಭತ್ತದ ನಾಟಿಗೆ ಆಗಮಿಸಿದ್ದ ಹೆಚ್.ಡಿ. ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ ಅವರನ್ನು ನೋಡಲು ಭಾರಿ ಸಂಖ್ಯೆ ಕಾರ್ಯಕರ್ತರು ಸುತ್ತುವರಿದಿದ್ದರು. ಅವರ ಪರ ಘೋಷಣೆ ಮೊಳಗಿತು. ಯುವಕರು, ಕಾರ್ಯಕರ್ತರು ಸೆಲ್ಫಿ ■ 10ನೇ ಪುಟಕ್ಕೆ



ಅರಳಕುಪ್ಪೆ–ಸೀತಾಪುರ ಹೊರವಲಯದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಭತ್ತದ ನಾಟಿ ಮಾಡಿದರು. ಬಲಚಿತ್ರದಲ್ಲಿ ನಿಖಿಲ್‌ಕುಮಾರಸ್ವಾಮಿ, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಸಹ ನಾಟಿ ಮಾಡುತ್ತಿರುವುದನ್ನು ಕಾಣಬಹುದು.

ಒಂದೈದು ವರ್ಷ ಮುಖ್ಯಮಂತ್ರಿಯಾಗುವ ಅವಕಾಶ ಸಿಕ್ಕರೆ ರೈತರ ಸಮಸ್ಯೆಗೆ ಪರಿಹಾರ

ಈ ಸಂದರ್ಭದಲ್ಲಿ ಮಾತನಾಡಿದ ಕೇಂದ್ರ ಉಕ್ಕು ಮತ್ತು ಭಾರಿ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಐದು ವರ್ಷ ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸುವ ಅವಕಾಶ ಸಿಕ್ಕಿದರೆ ರೈತರ ಸಮಸ್ಯೆ ಬಗೆಹರಿಸುವ ಕೆಲಸ ಮಾಡುತ್ತೇನೆ ಎಂದರು.

ಮುಖ್ಯಮಂತ್ರಿಯಾಗಿ ಕೆಲಸ ಮಾಡುವುದಕ್ಕೂ, ಕೇಂದ್ರ ಸಚಿವನಾಗಿ ಕೆಲಸ ಮಾಡುವುದಕ್ಕೂ ಸಾಕಷ್ಟು ವ್ಯತ್ಯಾಸಗಳಿವೆ. ನಾನು ಮುಖ್ಯಮಂತ್ರಿಯಾಗಿ ಕೆಲಸ ಮಾಡಲು ಸಿಕ್ಕ ಕಡಿಮೆ ಅವಧಿಯಲ್ಲಿ ರೈತಪರ, ಜನಪರವಾದ ಆಡಳಿತ ನಡೆಸಿದ್ದೇನೆ. ಐದು ವರ್ಷ ಪೂರ್ಣ ಅವಧಿಗೆ ಮುಖ್ಯಮಂತ್ರಿಯಾಗಿ ಕೆಲಸ ಮಾಡಲು ಅವಕಾಶವನ್ನು ರಾಜ್ಯದ ಜನತೆ, ತಾಯಿ ಚಾಮುಂಡೇಶ್ವರಿ ಮಾಡಿಕೊಟ್ಟರೆ ರೈತರು, ಜನಸಾಮಾನ್ಯರು ಪ್ರತಿ ಕುಟುಂಬ ನೆಮ್ಮದಿಯಿಂದ ಬದುಕು ನಡೆಸುವ ಹಾಗೆ ಕೆಲಸ ಮಾಡಿ ತೋರಿಸುತ್ತೇನೆ. ಇಲ್ಲವಾದರೆ ನನ್ನ ಮುಖವನ್ನು ಈ ಮಣ್ಣಿಗೆ ತೋರಿಸೋದಿಲ್ಲ ಎಂದರು.

ಜಿಲ್ಲೆಯ ಜನತೆ ಆಶೀರ್ವಾದದಿಂದ ಗೆದ್ದು ಸಚಿವನಾಗಿದ್ದೇನೆ, ನನ್ನನ್ನು ಮಗನಾಗಿ ಸ್ವೀಕಾರ ಮಾಡಿದ್ದೀರಿ. ಕೆಲವರು ನನ್ನ ಬಗ್ಗೆ ಲಘುವಾಗಿ ಮಾತನಾಡುತ್ತಾರೆ. ಜಿಲ್ಲೆಯ ಜನತೆ ನನ್ನ ಮೇಲೆ ಅನುಮಾನ ಪಡಬೇಡಿ, ನಾನು ಡೆಲ್ಲಿಯಲ್ಲಿದ್ದರೂ ನನ್ನ ಹೃದಯ ಜಿಲ್ಲೆಯಲ್ಲಿಯೇ ಇರುತ್ತದೆ. ನನ್ನ ಅಧಿಕಾರದ ಅವಧಿಯಲ್ಲಿ ಜಿಲ್ಲೆಗೆ ಹೊಸ ಕಾರ್ಖಾನೆಗಳನ್ನು ತಂದು ಯುವಕರು, ಮಹಿಳೆಯರಿಗೆ ಉದ್ಯೋಗ ದೊರಕಿಸಿಕೊಡುವ ಕೆಲಸ ಮಾಡುತ್ತೇನೆ. ಜತೆಗೆ ನನಗೆ 500ಕ್ಕೂ ಅಧಿಕ ಮಂದಿ ನಿರುದ್ಯೋಗಿಗಳು ಅರ್ಜಿ ಸಲ್ಲಿಸಿದ್ದಾರೆ. ಅವರಿಗೆ ಬೇರೆ ಬೇರೆ ಕಾರ್ಖಾನೆಗಳಲ್ಲಿ ಕೆಲಸ ಕೊಡಿಸುವ ಪ್ರಯತ್ನ ಮಾಡುತ್ತಿದ್ದೇನೆ. ಸಿಕ್ಕಂತಹ ಕೆಲಸವನ್ನು ಯುವಕರು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಕೆಆರ್‌ಎಸ್ ಅಣೆಕಟ್ಟೆ ಭರ್ತಿಯಾದ ಹಿನ್ನೆಲೆಯಲ್ಲಿ ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು ಅವರು ಭತ್ತದ ನಾಟಿಗೆ ಚಾಲನೆ ನೀಡಲು ಎಲ್ಲಾ ರೀತಿಯ ಸಿದ್ಧತೆ ನಡೆಸಿದ್ದಾರೆ. ನಾನು ಮುಖ್ಯಮಂತ್ರಿಯಾಗಿ 2018ರಲ್ಲಿ ಭತ್ತದ ನಾಟಿ ಮಾಡಿದ್ದೆ. ರೈತರು ಸಂತಸದಿಂದ ಭತ್ತದ ನಾಟಿ ಮಾಡುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ನಮ್ಮ ರೈತರಿಗೆ ಹಿಂದೆ ಇದ್ದಂತಹ ನೆಮ್ಮದಿ ಇಲ್ಲವಾಗಿದೆ, ಆರ್ಥಿಕವಾಗಿ ಸಬಲರಾಗಿದ್ದರೂ, ಯಾವುದೇ ಯಾಂತ್ರಿಕ ಸೌಲಭ್ಯಗಳ ಕೊರತೆಯ ನಡುವೆಯೂ ನೆಮ್ಮದಿ ಜೀವನ ನಡೆಸುತ್ತಿದ್ದರು. ಇದೀಗ ಸಂಕಷ್ಟ ದಿನಗಳನ್ನು ಎದುರಿಸುವಂತಾಗಿದೆ ಇಂತಹ ಜಡ್ಡುಗಟ್ಟಿರುವ ಸರಕಾರಗಳಿಂದ ರೈತರಿಗೆ ನೆಮ್ಮದಿ ಜೀವನ ಕೊಡಲು ಸಾಧ್ಯವೇ ಎಂದು ಕಿಡಿಕಾರಿದರು.

ನಕ್ಕರೆ ಅದೇ ಸ್ವರ್ಗ

ಭಿಕ್ಷುಕ : 'ಸರ್ 20 ರೂ. ಕೊಡಿ, ಕಾಫಿ ಕುಡಿಯಬೇಕು'
ಗುಂಡ : ಯಾಕಯ್ಯ ಕಾಫಿ 10 ರೂ. ಅಲ್ವಾ?
ಭಿಕ್ಷುಕ : ಲವ್ವರ್ ಕೂಡ ಇದ್ದಾಳೆ ಸರ್!
ಗುಂಡ : 'ಭಿಕ್ಷೆ ಬೇಡ್ತಾ ಇದ್ದರೂ ಲವ್ ಮಾಡ್ತಾ ಇದ್ದೀಯಾ?
ಭಿಕ್ಷುಕ : 'ಲವ್ ಮಾಡಿದ ಮೇಲೆಯೇ ಭಿಕ್ಷೆ ಬೇಡ್ತಾ ಇದ್ದೇನೆ ಸರ್!'

ಮೈಸೂರು ಮಿತ್ರ

ಸೋಮವಾರ, 12 ಆಗಸ್ಟ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

'ತಿಳಿದವರೊಂದಿಗೆ ಅರ್ಧ ಗಂಟೆ ಕಳೆದರೆ ನಾಲ್ಕು ಪುಸ್ತಕ ಓದಿದಂತೆ, ಯೋಗಿಗಳೊಂದಿಗೆ ಅರ್ಧ ಗಂಟೆ ಕಳೆದರೆ ಅರ್ಧ ಬದುಕನ್ನೇ ದಾಟಿದಂತೆ'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಅಲ್ಪರ ಸಂಗ, ಅಭಿಮಾನ ಭಂಗ'

ನಿಮ್ಮ ಪತ್ರಗಳು

ವಯನಾಡಿನ ಕರಾಳ ಘಟನೆ ಮರುಕಳಿಸದಿರಲಿ

ಮಾನ್ಯರೆ,

ಇತ್ತೀಚೆಗಷ್ಟೇ ನಮ್ಮ ಗುಂಡ್ಲುಪೇಟೆ ತಾಲೂಕಿಗೆ ಹೊಂದಿಕೊಂಡಂತೆ ಇರುವ ನೆರೆಯ ರಾಜ್ಯ ಕೇರಳದ ವಯನಾಡಿಗೆ ಗೆಳೆಯರೊಂದಿಗೆ ಒಂದು ದಿನದ ಪ್ರವಾಸಕ್ಕೆ ಹೋಗಿ ಅಲ್ಲಿನ ಪ್ರಕೃತಿ ಸೌಂದರ್ಯವನ್ನು ಸವಿದು ಬಂದಿದ್ದೆ. ಆ ಸಿಹಿ ಘಳಿಗೆ ಮಾಸುವ ಮುನ್ನವೇ ಮೊನ್ನೆ ಮೊನ್ನೆಯಷ್ಟೆ ವಯನಾಡಿನಲ್ಲಿ ಭಾರೀ ಭೂಕುಸಿತ ಉಂಟಾಗಿ ಸಾಕಷ್ಟು ಸಾವು-ನೋವುಗಳು ಸಂಭವಿಸಿ, ಅದು ಎಂದೆಂದಿಗೂ ಮಾಸಿ ಹೋಗದಂತಹ ಕಹಿ ಘಟನೆಯಾಗಿ ಮನಸ್ಸಿನಲ್ಲಿ ಉಳಿದು ಬಿಟ್ಟಿದೆ.



ಮಾನವರು ತಮ್ಮ ದುರಾಸೆಯಿಂದ ಪ್ರಕೃತಿಯ ಒಡಲನ್ನು ಯಾವುದೇ ಎಗ್ಗಿಲ್ಲದೆ ಬಗೆದುದರ ಪರಿಣಾಮದಿಂದಾಗಿ ಇಂದು ಪ್ರಕೃತಿ ಮುನಿದು ದೇವರನಾಡನ್ನು ನರಕದ ನಾಡನ್ನಾಗಿ ಪರಿವರ್ತಿಸಿ ಬಿಟ್ಟಿರುವುದು ನಿಜಕ್ಕೂ ಅತ್ಯಂತ ದುಃಖದ ಸಂಗತಿ.

ಪ್ರಕೃತಿ ಪದೇ ಪದೆ ನಮ್ಮನ್ನು ಎಚ್ಚರಿಸುತ್ತಲೇ ಬಂದಿದೆ. ಆದರೆ ನಾವುಗಳು ಅದರಿಂದ ಎಚ್ಚರಗೊಂಡು ಪಾಠ ಕಲಿತಂತಿಲ್ಲ..! ಕಳೆದ ಕೆಲ ವರ್ಷಗಳ ಹಿಂದೆ ಇದೇ ಮಾದರಿಯಲ್ಲಿ ನಮ್ಮ ಕೊಡಗು ಜಿಲ್ಲೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹೀಗೆ ಭೂಕುಸಿತ ಉಂಟಾಗಿ ಸಾಕಷ್ಟು ಸಾವು ನೋವುಗಳು ಸಂಭವಿಸಿದ್ದವು. ಇಷ್ಟಾದರೂ ನಾವುಗಳು ಪ್ರಕೃತಿಯ ಇಂತಹ ವಿಕೋಪಗಳಿಂದ ಬುದ್ಧಿ ಕಲಿತಂತಿಲ್ಲ..! ಭವಿಷ್ಯದಲ್ಲಾದರೂ ನಾವುಗಳು ಕೇರಳದ ವಯನಾಡಿನ ಮೇಪ್ಪಾಡಿ ಹಾಗೂ ಇತರೆ ಗ್ರಾಮಗಳಲ್ಲಿ ಭಾರಿ ಭೂ ಕುಸಿತದಿಂದಾಗಿ ಉಂಟಾದ ಅಪಾರ ಸಾವು ನೋವುಗಳಿಂದಾದರೂ ಪಾಠ ಕಲಿಯಲೇಬೇಕಿದೆ. **-ಅಪುರಾ, ಅಗತಗೌಡನಹಳ್ಳಿ, ಗುಂಡ್ಲುಪೇಟೆ ತಾ.**

ಕನ್ನಡಿಗರ ಪಾಲಿಗೆ ಸಂತಸದ ಸಂಗತಿ

ಮಾನ್ಯರೆ,



ರೈಲ್ವೇ ನೇಮಕಾತಿ ಮಂಡಳಿ ನಡೆಸುವ ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳ ಕನ್ನಡದಲ್ಲಿ ಬರೆಯಲು ಅವಕಾಶ ಕಲ್ಪಿಸಿಕೊಡಲಾಗುವುದೆಂದು, ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದ್ದಾರೆ, ಇದೊಂದು ಕನ್ನಡಿಗರ ಪಾಲಿಗೆ ಸಂತಸದ ಸಂಗತಿ. ಅಲ್ಲದೇ ರೈಲ್ವೇ ಇಲಾಖೆಯಲ್ಲಿ ಬಡ್ತಿ ನೀಡಲು ನಡೆಸುವ ಸಾಮಾನ್ಯ ವಿಭಾಗ ಸ್ಪರ್ಧಾತ್ಮಕ ಪರೀಕ್ಷೆ (ಜಿಡಿಸಿಇ)ಯನ್ನೂ ಕನ್ನಡ ಭಾಷೆಯಲ್ಲೇ ನಡೆಸುವಂತೆ ರೈಲ್ವೇ ಮಂಡಳಿಗೆ ಸುತ್ತೋಲೆ ಹೊರಡಿಸಲು ಆದೇಶ ನೀಡಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ. ಇಲ್ಲಿಯ ತನಕವೂ ರೈಲ್ವೇ ಇಲಾಖೆಯಲ್ಲಿನ ಪರೀಕ್ಷೆಗಳನ್ನು ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಲ್ಲಿ ಮಾತ್ರ ನಡೆಸಲಾಗುತ್ತಿತ್ತು. ಇದರಿಂದಾಗಿ, ಇನ್ನು ಮುಂದಾದರೂ ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡಿಗರು ರೈಲ್ವೇ ಇಲಾಖೆಯಲ್ಲಿ ಉದ್ಯೋಗ ಮತ್ತು ಬಡ್ತಿ ಪಡೆಯಲು ಅವಕಾಶ ಕಲ್ಪಿಸಿದಂತಾಗಬಹುದು. ಈ ಕಾರಣಕ್ಕಾಗಿ ಸಚಿವರಿಗೆ ಕನ್ನಡಿಗರ ಪರವಾಗಿ ಅಭಿನಂದನೆಗಳು. **-ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.**

ಶಿಥಿಲ ಕಟ್ಟಡಗಳ ಬಗ್ಗೆ ಎಚ್ಚರವಿರಲಿ

ಮಾನ್ಯರೆ,

ಇತ್ತೀಚೆಗಷ್ಟೆ ಮೈಸೂರು ನಗರ ಹೃದಯ ಭಾಗದಲ್ಲಿದ್ದ ಒಲಂಪಿಯಾ ಚಿತ್ರಮಂದಿರ ಕಟ್ಟಡ ಕುಸಿತದಿಂದ ಅನಾಹುತ ಸಂಭವಿಸಿದ ವಿಷಯವನ್ನು ಗಮನಿಸಿದ್ದೇವೆ. ರಾಜ್ಯ ಮತ್ತು ದೇಶದಾದ್ಯಂತ ಕುಸಿದು ಬೀಳುವಂತಿರುವ ಕಟ್ಟಡ ಗಳನ್ನು ತೆರವುಗೊಳಿಸಲು ಕೇಂದ್ರ ಮತ್ತು ಆಯಾಯ ರಾಜ್ಯ ಸರ್ಕಾರಗಳು ಕ್ರಮ ಕೈಗೊಳ್ಳಬೇಕಿದೆ. ಏಕೆಂದರೆ ಇಂತಹ ಕೆಲವು ಕಟ್ಟಡಗಳು ಮಳೆಯಿಂದ ವಸ್ತಿಯಾಗಿ, ಹಾನಿಯಾಗಿವೆ. ಇನ್ನಿತರ ಕಾರಣಗಳಿಂದಲೂ ಯಾವ ಸಮಯದಲ್ಲಿ ಬೀಳುತ್ತವೆ ಎಂಬುದು ತಿಳಿಯುವುದಿಲ್ಲ. ಮೊನ್ನೆ ಕಟ್ಟಡ ಕುಸಿದ ಕಾರಣ ಕೆಲವರಿಗೆ ಗಾಯವಾಗಿದೆ. ಇವರ ಜೀವಕ್ಕೆ ಯಾರು ಹೊಣೆಯಾಗುತ್ತಾರೆ. ಆದ್ದರಿಂದ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಗ್ರಾಮೀಣ ಮಟ್ಟದಿಂದ ಹಿಡಿದು ನಗರಗಳಲ್ಲಿರುವ ಹಳೆಯ, ಬೀಳುವಂತಿರುವ ಕಟ್ಟಡಗಳನ್ನೂ ತೆರವುಗೊಳಿಸಿ, ಸಾಮಾನ್ಯ ಜನರ ಸಾವು-ನೋವುಗಳನ್ನು ತಪ್ಪಿಸಬೇಕಿದೆ. **-ನಾಗೇಶ್, ಮಾನಸಗಂಗೋತ್ರಿ, ಮೈಸೂರು.**

ಜನಬೆಂಬಲ ಕೋರಿಕೆ ಸಮಾವೇಶ!

ಮಾನ್ಯರೆ,

ಬಿಜೆಪಿ-ಜೆಡಿಎಸ್‌ನವರ ಮೈಸೂರು ಪಾದಯಾತ್ರೆಗೆ ಪ್ರತಿಯಾಗಿ ಮೈಸೂರಿನಲ್ಲಿ ಕಾಂಗ್ರೆಸ್ ಹಮ್ಮಿಕೊಂಡಿದ್ದ ಸಮಾವೇಶದಲ್ಲಿ ಮಾತನಾಡಿದ ಮುಖ್ಯಮಂತ್ರಿಗಳು, ಬಿಜೆಪಿ, ಜೆಡಿಎಸ್‌ನವರು ಹಗರಣಗಳ ನೆಪ ಮಾಡಿ ನನ್ನ ಸರ್ಕಾರವನ್ನು ಉರುಳಿಸಲು ಪಿತೂರಿ ನಡೆಸುತ್ತಿದ್ದಾರೆ. ಆದರೆ ನಾನು ಯಾವುದೇ ಅಕ್ರಮ ಮಾಡಿಲ್ಲ, ಹಗರಣದಲ್ಲಿ ಪಾಲ್ಗೊಂಡಿಲ್ಲ. ಬಿಜೆಪಿಯವರಂತೆ ಚೆಕ್ ಮೂಲಕ ಹಣ ಪಡೆದಿಲ್ಲ. ಹಿಂದುಳಿದ ವರ್ಗದವನು ಮುಖ್ಯಮಂತ್ರಿಯಾಗಿದ್ದೇನೆ ಅಂತಾ ಸಹಿಸದೆ ನನ್ನನ್ನು ಅಧಿಕಾರದಿಂದ ಕೆಳಗಿಳಿಸಲು ಯತ್ನಿಸುತ್ತಿದ್ದಾರೆ. ಆದ್ದರಿಂದ ನೀವು ಅಂತಹ ಸಂದರ್ಭ ಬಂದರೆ ನನ್ನ ಪರ ಹೋರಾಟ ಮಾಡಬೇಕು ಎಂದು ಬೆಂಬಲಿಗರಿಗೆ ಕರೆ ನೀಡಿದರು.! ಒಂದೆರಡು ದಿನದ ಹಿಂದೆ ವಿಧಾನಸಭಾ ಸದಸ್ಯರೊಬ್ಬರು ಸರ್ಕಾರ ಪತನವಾದರೆ ಜನ ದಂಗೆ ಹೇಳುತ್ತಾರೆ ಎಂದು ಹೇಳಿದ್ದರು. ಆ ಮೂಲಕ ಈ ಸಮಾವೇಶದ ಉದ್ದೇಶ ಸರ್ಕಾರ ಪತನವಾದರೆ ಅಥವಾ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದರೆ ಜನ ಹೋರಾಟ ಮಾಡಬೇಕು, ದಂಗೆ ಏಳಬೇಕು. ನಿಜವಾಗಿ ಅವರಿಗೆ ಸಂವಿಧಾನದ ಮೇಲೆ ನಂಬಿಕೆ ಇದ್ದರೆ ಕಾನೂನು ಹೋರಾಟ ಮಾಡಲಿ. ಅದನ್ನು ಬಿಟ್ಟು ಈ ರೀತಿ ದಂಗೆಗೆ ಕರೆ ನೀಡುವುದು ಕಾನೂನು ಸಮ್ಮತವಲ್ಲ. **-ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.**

ಮಿಸ್ಟರ್... ಮಿಸ್ಟರ್... ಮಾತು ನಿಲ್ಲಿಸಿ...!

ಮಾನ್ಯರೆ,

ಎರಡು ದಿನಗಳ ಕಾಲ ಮೈಸೂರಲ್ಲಿ ನಡೆದ ಪ್ರತ್ಯೇಕ ಮೂರು ಪಕ್ಷಗಳ ಸಮಾವೇಶದಲ್ಲಿ ಆಯಾಯ ಪಕ್ಷಗಳ ನಾಯಕರು ಪರಸ್ಪರ ಅಬ್ಬರಿಸಿ-ಬೊಬ್ಬರಿದರು. ಈ ನಾಯಕರ ವರ್ತನೆ ಅತಿರೇಕಕ್ಕೆ ಹೋಗಿದೆ. ಇವರೇನು ರಾಜ-ಮಹಾರಾಜರ ಮಕ್ಕಳೇ...! ಇಲ್ಲ ಹುಟ್ಟುತ್ತಲೇ ಆಳುವ ಅರ್ಹತೆ ಪಡೆದವರೇ! ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರಿಂದ ಅಂದರೆ ನಮ್ಮಿಂದ ಇವರೆಲ್ಲಾ ಆಯ್ಕೆಯಾದವರು. ಅದೂ ನಮ್ಮ ಸೇವೆಗಾಗಿ. ಈ ಸತ್ಯವನ್ನು ಮರೆತು ಬಾಯಿಗೆ ಬಂದಂತೆ, ಹೀನಾಮಾನವಾಗಿ ಅದೂ ಕೋಟ್ಯಾಂತರ ರೂ. ಖರ್ಚು ಮಾಡಿಕೊಂಡು ಸಾರ್ವಜನಿಕ ವೇದಿಕೆಗಳಲ್ಲಿ ಪ್ರತಾಪ ಮೆರೆಯುತ್ತಿರುವುದು ಪ್ರಜಾಪ್ರಭುತ್ವದ ಪ್ರಭುಗಳಾದ ನಮಗೆ (ಜನತೆ) ನಾಚಿಕೆಗೇಡಿನ ಸಂಗತಿ. ಇಂತಹ ರಾಜಕಾರಣಿಗಳ ಬಗ್ಗೆ ಸಮಯೋಚಿತವಾಗಿ ಸೂಕ್ತ ನಿರ್ಧಾರಕ್ಕೆ ಬರದಿದ್ದರೆ ನಮ್ಮನ್ನು ಇವರು ಕುರಿ, ಮೇಕೆ ಹಾಗೂ ಜಾನುವಾರುಗಳಿಗಿಂತ ಕಡೆಯೆಂದು ಭಾವಿಸುವುದರಲ್ಲಿ ಸಂಶಯವೇ ಇಲ್ಲ. ಎಚ್ಚರಗೊಳ್ಳು ಮತದಾರ... ಎಚ್ಚೆತ್ತು ಕೊ!. **-ನಾಗೇಂದ್ರ, ವಿಜಯನಗರ, ಮೈಸೂರು.**



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಎಂದಿಗೂ ಮರೆಯಬಾರದವರು!?



ಕಾಖಂಡಕಿ ರಾಮಾಚಾರ್ಯರು

ವಿಶ್ವಾಮಿತ್ರನ ಸಾಕುಮಗ ಗಾಲವನು ತಪಸ್ಸಿಗಾಗಿ ನಿಂತ ನೆಲವೇ ಗಾಲವ ಕ್ಷೇತ್ರ. ಕಾಲಕ್ರಮೇಣ ಅದು ಜನರ ಬಾಯಲ್ಲಿ ಗಲಗಲಿ ಆಯಿತು. ಉತ್ತರ ಕರ್ನಾಟಕದಲ್ಲಿ ಅದೊಂದು ಚಿಕ್ಕ ಊರು. ಕೃಷ್ಣೆ ಇಲ್ಲಿ ಮೈದುಂಬಿ ಹರಿಯುತ್ತಾಳೆ. ನರಸಿಂಹದೇವನೂ ಇಲ್ಲಿ ನೆಲೆಸಿದ್ದಾನೆ. ಒಂದು ಕಾಲಕ್ಕೆ ಸಂಸ್ಕೃತವು ಇಲ್ಲಿ ಸಮೃದ್ಧಿಯಾಗಿ ಬಳಕೆಯಾಗುತ್ತಿದ್ದ ಭಾಷೆ. ಅದನ್ನು ಪ್ರಭುತ್ವದಿಂದ ಬಳಸುತ್ತಿದ್ದ ಅನೇಕ ವಿದ್ವಾಂಸರು ಈ ಮಣ್ಣಿನಲ್ಲಿ ಆಗಿಹೋಗಿದ್ದಾರೆ. ಬಿಜಾಪುರ ಜಿಲ್ಲೆಯಲ್ಲಿ ಹರಿಜನ ಸೇವೆ, ಖಾದೀ ಆಂದೋಲನ ಆರಂಭವಾದುದು ಗಲಗಲಿಯಿಂದಲೇ. ವಿದ್ಯಾವಂತರಾದ ಬ್ರಾಹ್ಮಣರು ಇತರ ಪಂಗಡಗಳವರನ್ನೂ ಕೈಯಾಸರೆಯಾಗಿ ಮೇಲೆತ್ತುತ್ತಿದ್ದ ಉದಾರ ಮನಸಿನವರು. ವೀರಶೈವರು ಬಸವ ಜಯಂತಿಯನ್ನು ಆಚರಿಸುವಂತೆ ಪ್ರೇರೇಪಿಸಿದವರೂ ಅವರೇ ಆಗಿದ್ದರು.

ಅಂತಹ ಗಲಗಲಿಯ ಬ್ರಾಹ್ಮಣ ಮನೆತನವೊಂದರಲ್ಲಿ ಒಂದು ಸಿಡಿಲ ಮರಿ ಹುಟ್ಟಿತು. ನಿರ್ಭಯತೆ ಅದರ ಹುಟ್ಟುಗುಣ. ಪ್ರಾಮಾಣಿಕತೆ, ವಾಕ್ಪಟುತ್ವ, ಧರ್ಮನಿಷ್ಠೆ, ಪ್ರಖರ ದೇಶಭಕ್ತಿ, ಈಶಭಕ್ತಿ ಅದರ ಇತರ ಗುಣಗಳು. ಪುರುಷಸಿಂಹದಂತಿದ್ದ ಆತ ಮಹಾನ್ ಕ್ರಾಂತಿಕಾರಿ. ಗಲಗಲಿಯಂತಹ ಚಿಕ್ಕ ಊರಿನಲ್ಲಿ ತರುಣರೆಲ್ಲರೂ ಮೈಕೊಡವಿಕೊಂಡು ಸ್ವಾತಂತ್ರ್ಯ ಚಳುವಳಿಗೆ ಧುಮುಕುವಂತೆ ಪ್ರೇರೇಪಿಸುತ್ತಿದ್ದ ಆತನ ಪ್ರಖರ ಮಾತುಗಳ ಮೋಡಿಗೆ ಒಳಗಾಗದವರೇ ಇರಲಿಲ್ಲ. ಜೊತೆಗೆ ವೀರಶ್ರೀಯನ್ನು ಪ್ರಚೋದಿಸುವಂತಹ, ನಾಡಿನ ಬಿಡುಗಡೆಗಾಗಿ ಟೊಂಕ ಕಟ್ಟಲು ಸಿದ್ಧಗೊಳಿಸುವಂತಹ ಪದಪುಂಜಗಳನ್ನೊಳಗೊಂಡ ಸಶಕ್ತ ಕವಿತೆಗಳನ್ನು ರಚಿಸಬಲ್ಲ ಕವಿ. ಅವರ ಹಾಡುಗಳಿಂದ ನೆತ್ತರ ಬಿಸಿ ಮಾಡಿಕೊಂಡವರು ಅನೇಕ. ತಾಯ ಸೇವೆಗಾಗಿ ಆತ್ಮಾರ್ಪಣಕ್ಕೂ ಸಿದ್ಧವಿದ್ದ ಈ ಮಹಾನ್ ಚೇತನವೇ **ಕಾಖಂಡಕಿ ರಾಮಾಚಾರ್ಯರು**.

ಬ್ರಿಟಿಷರ ಸರಕಾರ ಏಕೆ ತೊಲಗಬೇಕು? ಎಂಬುದನ್ನೂ ಅರಿಯದಿದ್ದವರ ನಡುವೆ ಬಿರುಗಾಳಿಯಂತೆ ಅಬ್ಬರಿಸಿ, ತಮ್ಮ ಪ್ರಖರ ಮಾತುಗಳಿಂದ ಪ್ರಚೋದಿಸಿ, ಆ ಸಣ್ಣ ಊರಿನಿಂದ ಐವತ್ತು ಮಂದಿ ಜೈಲಿಗೆ ಹೋಗುವಂತೆ ಮಾಡಿದ ಮಹಾನ್ ಸ್ವಾತಂತ್ರ್ಯ ಯೋಧ. ಅಂತೆಯೇ ನಿಶಿತಮತಿಯ ವಿದ್ಯಾರ್ಥಿಯಾಗಿದ್ದಾಗ ಸ್ವಾತಂತ್ರ್ಯ ಸಮರದ ಗಾಳಿ ಕಿವಿ ಹೊಕ್ಕು, ಶಾಲೆಗೆ ಶರಣು ಹೊಡೆದು ಭಾರತಮಾತೆಯ ಬಂಧ ವಿಮೋಚನೆಯ ಪವಿತ್ರ ಕಾರ್ಯಕ್ಕೆ ತಮ್ಮನ್ನು ಸಮರ್ಪಿಸಿಕೊಂಡರು.

> **ಅಧಿಕಾರಶಾಹಿಯ ವಿರುದ್ಧ, ಸರಕಾರದ ದೌರ್ಜನ್ಯದ ವಿರುದ್ಧ ನಡೆದ ಹೋರಾಟದಲ್ಲಿ ಪಾತ್ರ ವಹಿಸಿದವರು. ಈ ಸಾಲಿನಲ್ಲಿ ತಮ್ಮ ಸಂಘಟಕ ಶಕ್ತಿಯಿಂದ, ರಕ್ತ ಕುದಿಸುವ ಸತ್ವಯುತ ಮಾತುಗಳಿಂದ, ಹರಿತವಾದ ಬರವಣಿಗೆಯಿಂದ, ಬಡಿದೆಬ್ಬಿಸುವ ಹಾಡುಗಳಿಂದ, ಕ್ರಾಂತಿಕಾರಕ ಚಟುವಟಿಕೆಗಳಿಂದ ಧ್ರುವತಾರೆಯಂತೆ ಎದ್ದು ತೋರುವವರು ಕಾಖಂಡಕಿ ರಾಮಾಚಾರ್ಯರು.**

ಗಾಂಧೀಜಿಯವರ ಮಾತುಗಳನ್ನು ಜನರಿಗೆ ಮನವರಿಕೆ ಮಾಡಿಕೊಟ್ಟು, ಅವರ ಉಪ್ಪಿನ ಸತ್ಯಾಗ್ರಹಕ್ಕೆ ಓಗೊಟ್ಟು, ಪಕ್ಕದ ಗ್ರಾಮ ಬಿಸನಾಳದಿಂದ ಉಪ್ಪಿನ ಮಣ್ಣನ್ನು ಗಲಗಲಿಗೆ ತಂದು, ಉಪ್ಪನ್ನು ಸಿದ್ಧಪಡಿಸಿ ಚಾವಡಿಯ ಮುಂದೆಯೇ ಅದನ್ನು ಮಾರಾಟ ಮಾಡಿ ಬ್ರಿಟಿಷ್ ಅಧಿಕಾರಿಗಳನ್ನು ಚಕಿತಗೊಳಿಸುವ ಕಾರ್ಯದಲ್ಲಿ ಮುಂದಾಳತ್ವವನ್ನು ವಹಿಸಿದವರು. ಅವರ ಮೇಲೆ ಕಣ್ಣಿಟ್ಟಿರುತ್ತಿದ್ದ ಬ್ರಿಟಿಷ್ ಪೊಲೀಸರಿಗೆ ಹಲವು ಬಾರಿ ಚಳ್ಳೆಹಣ್ಣು ತಿನಿಸಿದ್ದವರು.

ಗಲಗಲಿಯು ಅನೇಕ ದೇಶಭಕ್ತರಿಗೆ ಜನ್ಮವಿತ್ತಿದೆ. ಗಣಿ ಬಾಬುರಾವ್, ಕೌಜಲಗಿ ಹನುಮಂತರಾಯರು, ಕಾಕಾ ಕಾರ ಖಾನಿಸರು, ಬಂಡಾಚಾರ್ಯರು, ಹಬ್ಬು ರಾಘವೇಂದ್ರ ರಾಯರು, ಗೋಕೆ ಸುಬ್ಬಣ್ಣಾಚಾರ್ಯರು ಹೀಗೆ ಅನೇಕರು ಸ್ವಾತಂತ್ರ್ಯ ಸಮರದಲ್ಲಿ ಹಲವು ಪಾತ್ರಗಳನ್ನು ವಹಿಸಿ, ಕೃತಾರ್ಥರಾದವರು. ಅಧಿಕಾರಶಾಹಿಯ ವಿರುದ್ಧ, ಸರಕಾರದ ದೌರ್ಜನ್ಯದ ವಿರುದ್ಧ ನಡೆದ ಹೋರಾಟದಲ್ಲಿ ಪಾತ್ರ ವಹಿಸಿದವರು. ಈ ಸಾಲಿನಲ್ಲಿ ತಮ್ಮ ಸಂಘಟಕ ಶಕ್ತಿಯಿಂದ, ರಕ್ತ ಕುದಿಸುವ ಸತ್ವಯುತ ಮಾತುಗಳಿಂದ, ಹರಿತವಾದ ಬರವಣಿಗೆಯಿಂದ, ಬಡಿದೆಬ್ಬಿಸುವ ಹಾಡುಗಳಿಂದ, ಕ್ರಾಂತಿಕಾರಕ ಚಟುವಟಿಕೆಗಳಿಂದ ಧ್ರುವತಾರೆಯಂತೆ ಎದ್ದು ತೋರುವರು ಕಾಖಂಡಕಿ ರಾಮಾಚಾರ್ಯರು.

ಅವರ ಮಾತುಗಳನ್ನು ಕೇಳುವುದು, ಅವರು ಹೇಳಿದ್ದನ್ನು ಮಾಡುವುದೆಂದರೆ ಅಂದು ಯುವಕರಿಗೆ ಧರ್ಮಕಿಂತ ಪ್ರಿಯ. ನಮ್ಮದೊಂದು ದೇಶ, ಅದಕ್ಕಾಗಿ ನಾವು ಮಾಡುವ ಕರ್ತವ್ಯ ಏನೆಂಬುದನ್ನು ಅವರಿಗೆ ತಿಳಿಸಿ, ಕಾರ್ಯೋನ್ಮುಖರಾಗುವಂತೆ ಪ್ರೇರೇಪಿಸಿದ ಮಹಾನ್ ಶಕ್ತಿ ಅವರಾಗಿದ್ದರು. ನಿತ್ಯ ಪ್ರಭಾತ ಫೇರಿ, ಧ್ವಜವಂದನೆ, ಸಭೆ, ಸೈನಿಕರ ತರಬೇತು ಹೀಗೆ ಅವರದು ದಣಿವರಿಯದ ದುಡಿಮೆ. ಇದೆಲ್ಲವೂ ಭಾರತ ಮಾತೆಗಾಗಿ, ಅವಳ ಸೇವೆಗಾಗಿ.

ದೇಶಸೇವೆಯ ಆಂದೋಲನದಲ್ಲಿ ಧುಮುಕಿದ ದೇಶಭಕ್ತರು ಮಾಡುತ್ತಿದ್ದ ಮತ್ತೊಂದು ಕೆಲಸವೆಂದರೆ ಸರಕಾರಿ ವಿರೋಧದ ಚಟುವಟಿಕೆಗಳನ್ನು, ದೇಶಭಕ್ತರ ಸಾಹಸಗಳನ್ನು, ಕ್ರಾಂತಿಕಾರರ ಕಾರ್ಯಕ್ರಮಗಳನ್ನು ಜನಕ್ಕೆ ತಿಳಿಸುವ ಕೆಲಸ. ಅದನ್ನು ಮುಕ್ತವಾಗಿ ಮಾಡಿದರೆ, ಪೋಲಿಸರ ಕೈಗೆ ಸಿಕ್ಕಿಬೀಳಬೇಕಾಗುತ್ತಿತ್ತು. ಅದು ಗುಪ್ತವಾಗಿಯೇ ನಡೆಯಬೇಕಾಗಿತ್ತು. ರಹಸ್ಯವಾಗಿ ಕರಪತ್ರಗಳನ್ನು ಅಚ್ಚುಮಾಡಿ, ಗ್ರಾಮ ಗ್ರಾಮಕ್ಕೂ ಮುಟ್ಟಿಸುವ ಕೆಲಸ ಅವರದ್ದಾಗಿತ್ತು. ಮುದ್ರಿಸುವುದು ಎಂದರೆ, ಸೈಕ್ಲೋಸ್ಟೈಲ್ ಮಾಡುವುದು ಎಂದರ್ಥ. ಆ ಪುಟ್ಟ ಯಂತ್ರವನ್ನೂ ಹೊತ್ತುಕೊಂಡು, ರಾತ್ರೋರಾತ್ರಿ ಹಳ್ಳಿ ತಿರುಗಿ, ಕಾಡಿನ ಗುಹೆಗಳಲ್ಲಿ, ಪೊದರುಗಳಲ್ಲಿ ಅಚ್ಚು ಮಾಡಿ, ಅದು ಎಲ್ಲ ಗ್ರಾಮಗಳಿಗೂ ಮುಟ್ಟುವಂತೆ ವ್ಯವಸ್ಥೆಗೊಳಿಸಬೇಕಾಗಿತ್ತು. ಹಲವಾರು ಕರಪತ್ರಗಳು ಮುದ್ರಿತವಾಗಿ, ಅದು ಬೇರೆ ಬೇರೆ ಗ್ರಾಮಗಳಿಗೆ ತಲುಪಿ, ಜನ ಅದನ್ನು ಓದಲು ಮುಗಿಬೀಳುತ್ತಿದ್ದ ದೃಶ್ಯ ಅದೆಷ್ಟು ರೋಮಾಂಚಕಾರಿ!

ಬೆಳಗಾವಿ, ವಿಜಾಪುರ ಮುಂತಾದ ಕಡೆ ಅದು ಅಚ್ಚಾಗುತ್ತಿತ್ತು. ಅದನ್ನು ಓದಲು ನೂಕುನುಗ್ಗಲು ಹೆಚ್ಚಾದಾಗ, ಅದನ್ನು ಊರ ಚೌಕದ ಗೋಡೆಗೆ ಅಂಟಿಸಲಾಗುತ್ತಿತ್ತು. ಅದನ್ನು ಓದಲು ಮುಗಿ ಬಿದ್ದರು ಮಂದಿ. ಬ್ರಿಟಿಷ್ ಸರಕಾರದ ವಿರೋಧದ ಬರಹಕ್ಕೆ ಇಷ್ಟು ಜನ ಓದುಗರನ್ನು ಕಂಡು ಸಹಜವಾಗಿಯೇ ಪೋಲಿಸರ ಕಣ್ಣು ಕೆಂಪಾಗಿ ಆ ಕರಪತ್ರವನ್ನು ಚೂರುಚೂರಾಗಿ ಹರಿದು ಹಾಕುವರು. ಅವರು ಅಲ್ಲಿಂದ ಮುಂದೆ ಹೋದೊಡನೆ ಮತ್ತೊಂದು ಕರಪತ್ರ ಅಲ್ಲಿ ರಾರಾಜಿಸುತ್ತಿತ್ತು. ಆ ಬರಹಗಳಲ್ಲಿ ರಾಮಾಚಾರ್ಯರ ಧ್ವನಿಯನ್ನು ಗುರುತಿಸಿ ಹಿಗ್ಗುತ್ತಿದ್ದರು ಮಂದಿ.

ಇದು ಪೋಲಿಸರಿಗೆ ನಿಜಕ್ಕೂ ಒಂದು ಪಿಡುಗಾಗಿತ್ತು. ಹಳ್ಳಿಗರನ್ನು ಬೆದರಿಸಿದರು, ಹಿಡಿಯುವ ಹೆದರಿಕೆ ಹಾಕಿದರು, ಕರಪತ್ರ ಓದಿದ್ದಕ್ಕಾಗಿಯೇ ಕೆಲವರನ್ನು ಹಿಡಿದು, ನಂತರ ಬಿಡುಗಡೆಯನ್ನೂ ಮಾಡಿದ್ದರು. ಊಹ್ಞೂಂ. ರಾಮಾಚಾರ್ಯರ ಗಂಡುಭಾಷೆಯ ಬರಹವನ್ನು ನಿಲ್ಲಿಸಲು ಅವರಿಗೆ ಆಗಲೇ ಇಲ್ಲ. ರಾಮಾಚಾರ್ಯರಿಗೆ ಈ ಗುಪ್ತ ಓಡಾಟದಲ್ಲಿ ಸಹಾಯ ಮಾಡುವ ದಂಡೇ ಇತ್ತು. ಅವರನ್ನು ಬೈತಿಟ್ಟು, ಪೋಲಿಸರಿಗೆ ಕಾಣದಂತೆ ಸುರಕ್ಷಿತವಾಗಿ ಓಡಾಡುವ ಏರ್ಪಾಡು ಮಾಡಲು ಟೊಂಕ ಕಟ್ಟಿದವರಿದ್ದರು. ಆಚಾರ್ಯರನ್ನು ಹಿಡಿಯಲು ಸರಕಾರ ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಹುಡುಕುತ್ತಿತ್ತು. ಬ್ರಿಟಿಷ್ ಅಧಿಕಾರಿಗಳು ಮಲಗಿದ ಹಾಸಿಗೆಯಲ್ಲಿ, ದಿಂಬಿನಡಿ ಆ ಕರಪತ್ರಗಳು ಇರುತ್ತಿತ್ತೆಂದರೆ ಅವರ ಧೈರ್ಯ ಸಾಹಸ ಎಷ್ಟುಮಟ್ಟಿನದಾಗಿದ್ದಿರಬೇಕು?

ಇಂತಹ ಸಿಡಿಲ ಮರಿಯಾಗಿದ್ದ ರಾಮಾಚಾರ್ಯರು ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ ಅನೇಕ ದೇಶಸೇವಕರು ಮಾಡಿದಂತೆ ಸರಕಾರ ನೀಡುತ್ತಿದ್ದ ವಿಶ್ರಾಂತಿ ವೇತನಕ್ಕೆ ಕೈಯೊಡ್ಡಲಿಲ್ಲ. ಆ ಧನಕ್ಕಾಗಿ ನಾವು ಕಷ್ಟಪಟ್ಟೆವೇ? ಅಂದಿನ ಹೋರಾಟ ನಮ್ಮ ಆದ್ಯ ಕರ್ತವ್ಯ ಆಗಿತ್ತಲ್ಲವೇ?? ಎಂದ ಅವರು ಸಮಾಜದ ವಿರುದ್ಧವೂ ಬಂಡೆದ್ದರು. ಮೇಲು-ಕೀಳು, ಹೊರಗೆ ದೊಡ್ಡತನ-ಒಳಗೆ ಸಣ್ಣತನ ತೋರುವ ಯಾರೇ ಆಗಿದ್ದರೂ ಅವರ ವಿರುದ್ಧ ಸಿಡಿದೆದ್ದರು. ಅವರಿಂದ ಪ್ರಭಾವಿತರಾದವರಲ್ಲಿ ಸತ್ಯಕಾಮರೂ ಒಬ್ಬರು. ತಮ್ಮ ಬದುಕಿನ ಕೊನೆಗಾಲದಲ್ಲಿ ಜಗದೊಡೆಯನ ಶರಣಾಗತಿಯಲ್ಲಿಯೇ ಧನ್ಯತೆಯನ್ನು ಅನುಭವಿಸುತ್ತಾ ಸುಖಿಸಿದರು. 1988ರಲ್ಲಿ ತಮ್ಮ 91ನೆಯ ಹರಯದಲ್ಲಿ ಕೊನೆಯುಸಿರೆಳೆದ ಈ ವೀರ ಸೇನಾನಿಯು ಗಲಗಲಿಯಲ್ಲಿ ಸ್ಥಾಪಿಸಿದ ರಾಘವೇಂದ್ರರ ಮಠವೊಂದು ಅವರ ನೆನಪನ್ನು ಸಾರುತ್ತಿದೆ.

ರಾಜಕೀಯ ರ್‍ಯಾಲಿಗಳು, ಗಣ್ಯರ ಬಂದೋಬಸ್ತ್ ಸಂಚಾರ ನಿರ್ವಹಣೆಯಲ್ಲಿ ಪೊಲೀಸರು ಬ್ಯುಸಿ

ಸುಗಮ ವಾಹನ ಸಂಚಾರಕ್ಕೆ ಎಂಜಿ ರಸ್ತೆಯಲ್ಲಿ ಮತ್ತೆ ಕಂಟಕ!



ಮೈಸೂರಿನ ಮಹಾತ್ಮ ಗಾಂಧಿ ರಸ್ತೆಯ ತರಕಾರಿ ಮಾರುಕಟ್ಟೆ ಬಳಿ ಮತ್ತೆ ವಾಹನ ಸಂಚಾರ ಸಮಸ್ಯೆ ಉದ್ಭವಿಸಿದ್ದು, ವಾಹನ ಸವಾರರು, ಚಾಲಕರು ಈ ರಸ್ತೆಯಲ್ಲಿ ಸಾಗಲು ಹರಸಾಹಸ ಪಡುವಂತಾಗಿದೆ

ಮೈಸೂರು, ಆ.11(ಆರ್‌ಕೆ)- ಮೈಸೂರಿನಲ್ಲಿ ಕಾಂಗ್ರೆಸ್ 'ಜನಾಂದೋಲನ' ಹಾಗೂ ಬಿಜೆಪಿ-ಜೆಡಿಎಸ್ 'ಮೈಸೂರು ಚಲೋ' ಸಮಾರೋಪ ಸಮಾವೇಶಗಳ ಬಂದೋಬಸ್ತ್ ಕಾರ್ಯದಲ್ಲಿ ಪೊಲೀಸರು ಬ್ಯುಸಿಯಾಗಿರುವ ಹಿನ್ನೆಲೆಯಲ್ಲಿ ಮಹಾತ್ಮ ಗಾಂಧಿ ರಸ್ತೆಯ ತರಕಾರಿ ಮಾರುಕಟ್ಟೆ ಬಳಿ ಮತ್ತೆ ವಾಹನ ಸಂಚಾರ ಸಮಸ್ಯೆ ತಲೆದೋರಿದೆ.

ಒಂದೂವರೆ ತಿಂಗಳ ಹಿಂದಷ್ಟೇ ಜಿಲ್ಲಾಡಳಿತ ಹಾಗೂ ಮೈಸೂರು ಮಹಾನಗರಪಾಲಿಕೆ ಅಧಿಕಾರಿಗಳು ಎಂಜಿ ರಸ್ತೆಯ ಫುಟ್‌ಪಾತ್‌ನಲ್ಲಿ ತರಕಾರಿ, ಹಣ್ಣು ಮಾರುತ್ತಿದ್ದವರನ್ನು ತೆರವುಗೊಳಿಸಿ, ವಾಹನ ನಿಲುಗಡೆಗೂ ನಿರ್ಬಂಧ ವಿಧಿಸಲಾಗಿತ್ತು ಹಾಗಾಗಿ ಈ ರಸ್ತೆಯಲ್ಲಿ ವಾಹನ ಸಂಚಾರ ಸುಗಮಗೊಂಡಿತ್ತು. ಸಿದ್ಧಾರ್ಥ ಸಂಚಾರ ಠಾಣೆ ಹಾಗೂ ನಜರ್‌ಬಾದ್ ಠಾಣೆ ಪೊಲೀಸರು ನಿಗಾ ವಹಿಸಿ ಸಂಚಾರ ಸಮಸ್ಯೆ ಆಗದಂತೆ ನೋಡಿಕೊಂಡಿದ್ದರು.


ಆದರೆ, ಇತ್ತೀಚೆಗೆ ರಾಜಕೀಯ ಪಕ್ಷಗಳ ಬೃಹತ್ ಸಮಾವೇಶಗಳು, ಆಗಿಂದಾಗ್ಗೆ ಮುಖ್ಯಮಂತ್ರಿಗಳ ಮೈಸೂರು ಪ್ರವಾಸ ಹಾಗೂ ಗಣ್ಯಾತಿಗಣ್ಯರ ಮೈಸೂರು ಭೇಟಿ, ಅವರಿಗೆ ಸೂಕ್ತ ಬಂದೋಬಸ್ತ್ ಮಾಡುವತ್ತ ಪೊಲೀಸರು ಬ್ಯುಸಿಯಾಗಿರುವುದರಿಂದ ತರಕಾರಿ ವ್ಯಾಪಾರಿಗಳು ಮತ್ತೆ ಫುಟ್‌ಪಾತ್‌ಗೆ ಬಂದು ವ್ಯಾಪಾರ ಮಾಡುವುದು, ವಾಹನ ನಿಲುಗಡೆ ಮಾಡುತ್ತಿರುವುದರಿಂದ ಎಂಜಿ ರಸ್ತೆಯಲ್ಲಿ ಇದೀಗ ಯಥಾ ಪರಿಸ್ಥಿತಿ ನಿರ್ಮಾಣವಾಗಿದೆ.

ಜೂನ್ 19ರಂದು ಅಂದಿನ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ನಗರ ಪೊಲೀಸ್ ಆಯುಕ್ತರಾಗಿದ್ದ ಬಿ. ರಮೇಶ್ ಹಾಗೂ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಅಲ್ಲಿನ ತರಕಾರಿ ವ್ಯಾಪಾರಿಗಳೊಂದಿಗೆ ಸಮಾಲೋಚನೆ ನಡೆಸಿ ಎಂಜಿ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅಡಚಣೆ ಆಗದಂತೆ ಒಳಭಾಗಕ್ಕೆ ವ್ಯಾಪಾರ ಸ್ಥಳಾಂತರ ಮಾಡಿಸುವುದರೊಂದಿಗೆ ವಾಹನಗಳ ನಿಲುಗಡೆಗೂ ಸೂಕ್ತ ಜಾಗ ಕಲ್ಪಿಸುವಲ್ಲಿ ಯಶಸ್ವಿಯಾಗಿದ್ದರು. ಪರಿಣಾಮ ಅಲ್ಲಿನ ಕೆಳ ಸೇತುವೆಯಿಂದ ಮಾಲ್ ಆಫ್ ಮೈಸೂರ್‌ವರೆಗೆ ಆಗಿಂದಾಗ್ಗೆ ಉಂಟಾಗುತ್ತಿದ್ದ ಟ್ರಾಫಿಕ್ ಜಾಮ್ ನಿವಾರಣೆ ಆಗಿ ವಾಹನ ಸವಾರರು ಸರಾಗವಾಗಿ ಸಂಚಾರ ಮಾಡುವಂತಾಗಿತ್ತು. ಜೊತೆಗೆ ಸಿದ್ಧಾರ್ಥನಗರ ಸಂಚಾರ ಪೊಲೀಸರು ನಿರಂತರವಾಗಿ ಗಸ್ತು ನಡೆಸಿ ಫುಟ್‌ಪಾತ್‌ಗೆ ವ್ಯಾಪಾರಸ್ಥರು ಬರದಂತೆ ನಿಗಾ ವಹಿಸುತ್ತಿದ್ದರು.

ಜುಲೈ 4ರಂದು ನಗರ ಪೊಲೀಸ್ ಆಯುಕ್ತರು ಎಂಜಿ ರಸ್ತೆಯ ತರಕಾರಿ ಮಾರುಕಟ್ಟೆ ಬಳಿ ಎರಡೂ ಬದಿಗಳಲ್ಲಿ ವಾಹನ ನಿಲುಗಡೆಯನ್ನು ನಿಷೇಧ ಮಾಡಿ ಆದೇಶ ಹೊರಡಿಸಿದ್ದರು. ಅಲ್ಲಿಂದ ಈವರೆಗೆ ಆ ಭಾಗದಲ್ಲಿ ವಾಹನ ನಿಲ್ಲಿಸದಿರುವುದು ಹಾಗೂ ವ್ಯಾಪಾರಸ್ಥರು ಫುಟ್‌ಪಾತ್‌ಗೆ ಬಾರದಿದ್ದರಿಂದ ಸಂಚಾರ ಸುಗಮವಾಗಿತ್ತು. ಆದರೆ, ಇದೀಗ ಮತ್ತೆ ಹಳೇ ಪರಿಸ್ಥಿತಿ ತಲೆದೋರಿದೆ. ಆಂಬುಲೆನ್ಸ್, ತುರ್ತು ವಾಹನಗಳು ಸೇರಿದಂತೆ ಸಾರ್ವಜನಿಕರು ಸಂಚರಿಸಲು ತೀವ್ರ ತೊಂದರೆ ಉಂಟಾಗಿದ್ದು, ಈ ಬಗ್ಗೆ ಪ್ರಶ್ನಿಸಿದಾಗ ಮೈಸೂರು ಮಹಾನಗರಪಾಲಿಕೆ ಹಾಗೂ ಸಂಚಾರ ಪೊಲೀಸ್ ಅಧಿಕಾರಿಗಳು, ತಾವು ಗಣ್ಯಾತಿಗಣ್ಯರತ್ತ ನಿಗಾ ವಹಿಸುವುದರತ್ತ ತೊಡಗಿಕೊಂಡಿದ್ದೇವೆ. ಹಾಗಾಗಿ ಆ ಕಡೆ ಗಮನಹರಿಸಲು ಸಾಧ್ಯವಾಗಿಲ್ಲ. ಪರಿಣಾಮ, ಫುಟ್ ಪಾತ್‌ನಲ್ಲಿ ವ್ಯಾಪಾರ ಮಾಡುತ್ತಿರುವುದು, ಅಲ್ಲಿಯೇ ವಾಹನಗಳನ್ನು ನಿಲ್ಲಿಸಿಕೊಂಡು ತರಕಾರಿ ಇಳಿಸುವುದು ಮತ್ತು ತುಂಬುವುದನ್ನು ಮಾಡುತ್ತಿದ್ದಾರೆ. ಬಿಡುವು ಮಾಡಿಕೊಂಡು ಅದರತ್ತ ಗಮನಹರಿಸುವುದಾಗಿ ಹೇಳಿದ್ದಾರೆ.

ಇಂದು, ನಾಳೆ, ವಿದ್ಯುತ್ ವ್ಯತ್ಯಯ

ಮೈಸೂರು,ಆ.11-ಅಗ್ರಹಾರ ಫೀಡರ್‌ನ ವ್ಯಾಪ್ತಿಯಲ್ಲಿ ತುರ್ತು ಕಾಮಗಾರಿ ನಿಮಿತ್ತ ಆ.12ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಶಂಕರ ಮಠ, ಉತ್ತರಾಧಿಮಠ, ಅಗ್ರಹಾರ, ರಾಮಾನುಜ ರಸ್ತೆ 1ನೇ ಕ್ರಾಸ್‌ನಿಂದ 4ನೇ ಕ್ರಾಸ್‌ವರೆಗೆ, ಸುಣ್ಣದಕೇರಿ, ತ್ಯಾಗರಾಜ ರಸ್ತೆ, ಹೊಸಕೇರಿ ಹಾಗೂ ಸುತ್ತಮುತ್ತ ಮತ್ತು ಗದ್ದಿಗೆ ಶಾಖಾ ವ್ಯಾಪ್ತಿಯ ಹಸ್ಬಾಳು, ಜಿ.ವಿ.ಗುಡಿ, ಫಾರಂ ಗೇಟ್, ದೈತನಕೆರೆ ಕಾವಲ್, ಮಾರನಹಳ್ಳಿ ಮತ್ತು ಪೆರಿಯಾರ್‌ದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.



ಹಾಗೆಯೇ ಮುರುಡಗಳ್ಳಿ ಫೀಡರ್‌ನ ವ್ಯಾಪ್ತಿಯಲ್ಲಿ ತುರ್ತು ಕಾಮಗಾರಿ ನಿಮಿತ್ತ ಆ.13ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ತಳೂರು, ದೂರ, ದೊಡ್ಡಕಾಟೂರು, ಮುರುಡಗಳ್ಳಿ, ಹಳ್ಳಿಕೆರೆ ಹುಂಡಿ ಹಾಗೂ ಸುತ್ತಮುತ್ತ ಮತ್ತು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಕಾವೇರಿ ಆಸ್ಪತ್ರೆ, ಯರಗನಹಳ್ಳಿ, ವಿದ್ಯಾನಗರ, ರಾಘವೇಂದ್ರ ಬಡಾವಣೆ, ಟೆರಿಷಿಯನ್ ಕಾಲೇಜು ಹಾಗೂ ಸುತ್ತಮುತ್ತ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಕಂಪ್ಯೂಟರ್ ಕಲಿಕಾ ಕಾರ್ಯಾಗಾರ

ಮೈಸೂರು: ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟೆಬಲ್ ಟ್ರಸ್ಟ್ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಹಿರಿಯ ನಾಗರಿಕರಿಗಾಗಿ ಕಂಪ್ಯೂಟರ್ ಕಲಿಕಾ ಕಾರ್ಯಾಗಾರ ಆಯೋಜಿಸಿದೆ. 40 ಗಂಟೆಗಳ ಕಾರ್ಯಾಗಾರದಲ್ಲಿ ನುರಿತ ತರಬೇತುದಾರರಿಂದ ಕನ್ನಡ ನುಡಿ ಬೆರಳಚ್ಚು, ಕಂಪ್ಯೂಟರ್ ಫಂಡಮೆಂಟಲ್ಸ್, ಟೈಪಿಂಗ್ ಸ್ಕಿಲ್ ಮುಂತಾದವುಗಳ ಕುರಿತು ಪ್ರಾಯೋಗಿಕ ತರಬೇತಿ ನೀಡಲಾಗುತ್ತದೆ. ಅರ್ಜಿ ಹಾಗೂ ಪ್ರವೇಶಾತಿಗಾಗಿ ಸಂಪರ್ಕಿಸಿ 9964790 442, 8310306882

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com


ಬೋಗಾದಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯರು ಹಾಗೂ
ಚಾಮುಂಡೇಶ್ವರಿ ಕ್ಷೇತ್ರದ ಯುವ ಮುಖಂಡರಾದ
ಶ್ರೀ ಪಿ.ದಿನೇಶ್‌ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ತಾಯಿ ಚಾಮುಂಡೇಶ್ವರಿ ಆಯಿಸ್ಸು, ಆರೋಗ್ಯ, ಯಶಸ್ಸು,
ಅಧಿಕಾರ ಕರುಣಿಸಲಿ ಎಂದು ಹಾರೈಸುತ್ತಾ
ಕೆಂಚೇಗೌಡರು
ಮಾಜಿ ಸದಸ್ಯರು, ಗ್ರಾ.ಪಂ. ಬೋಗಾದಿ
ಹೊನ್ನಗಿರಿಗೌಡರು
ಮುಖಂಡರು, ಬೋಗಾದಿ
ಪಿ.ದಿನೇಶ್‌ರವರು
ಉದ್ಯಮಿ ಶ್ರೀ ರಾಘವೇಂದ್ರ ಟೈಲ್ಸ್ ಮೈಸೂರು
ಶ್ರೀ ಚಾಮುಂಡೇಶ್ವರಿ ಟೈಲ್ಸ್ ಬೆಂಗಳೂರು
ಹಾಗೂ
ಗ್ರಾಮ ಪಂಚಾಯಿತಿ ಮಾಜಿ ಸದಸ್ಯರು, ಬೋಗಾದಿ
ಮೊ : 9448821247
ಹೆಚ್. ಸ್ವಾಮಿ
ಮಧುಕುಮಾರ್‌ಗೌಡ
ಮಹೇಶ್
ಬಿ.ಸಿ.ಎಂ. ಟ್ರೇಡರ್ಸ್
ಎಸ್. ರಾಘವೇಂದ್ರ
ರಾಘವೇಂದ್ರ ಸ್ಟೀಲ್ಸ್
ಶುಭಕೋರುವವರು :
ಯ॥ ಲೇ. ದಾಸೇಗೌಡ ಉರ್ಫ್ ಹೊನ್ನೇಗೌಡ
ಮತ್ತು ಲೇ. ಪುಟ್ಟೇಗೌಡ ಉರ್ಫ್ ಜಂಗುಮೇಗೌಡರ
ಕುಟುಂಬ ವರ್ಗ, ಸ್ನೇಹಿತರು ಮತ್ತು ಬೋಗಾದಿ ಗ್ರಾಮಸ್ಥರು

ತಮ್ಮ ಮೇಲೆಯೇ ದಾಳಿಗೆ ಮುಂದಾದ ಕುಖ್ಯಾತ ರೌಡಿಗೆ 'ಗುಂಡಿನ' ಪಾಠ

● 3 ಕೊಲೆ, 3 ಕೊಲೆ ಯತ್ನ, 2 ರಾಬರಿ ಸೇರಿದಂತೆ 12 ಪ್ರಕರಣಗಳಲ್ಲಿ ಬೇಕಾಗಿದ್ದ ರೌಡಿ ಸೆರೆ ● ಆಸ್ಪತ್ರೆಗೆ ದಾಖಲು ● ಮಳವಳ್ಳಿ ಬಳಿ ಪೊಲೀಸರ ಯಶಸ್ವಿ ಕಾರ್ಯಾಚರಣೆ


ರೌಡಿಶೀಟರ್ ಮುತ್ತುರಾಜ್

ಮಂಡ್ಯ, ಆ.11– ಕಾರ್ಯಾಚರಣೆ ವೇಳೆ ಪೊಲೀಸರ ಮೇಲೆಯೇ ಮಾರಕಾಸ್ತ್ರಗಳಿಂದ ದಾಳಿ ಮಾಡಿದ ಕುಖ್ಯಾತ ರೌಡಿಶೀಟರ್ ಕಾಲಿಗೆ ಗುಂಡು ಹಾರಿಸಿ ಬಂಧಿಸಿರುವ ಘಟನೆ ಭಾನುವಾರ ಬೆಳ್ಳಂಬೆಳಗ್ಗೆ ಮಳವಳ್ಳಿ ತಾಲೂಕು ಚಿಕ್ಕ ಮುಲಗೂಡು ಬಳಿ ನಡೆದಿದೆ.

ಹಲಗೂರು ಭಾಗದ ರೌಡಿಶೀಟರ್ ಮುತ್ತುರಾಜ್ ಅಲಿಯಾಸ್ ಡಕ್ಕ ಕಾಲಿಗೆ ಗುಂಡೇಟು ತಿಂದು, ಈಗ ಪೊಲೀಸರ ಅತಿಥಿಯಾಗಿದ್ದಾನೆ. ಕೊಲೆ, ಕೊಲೆ ಯತ್ನ ಹಾಗೂ ರಾಬರಿ ಚಟುವಟಿಕೆಗಳು ಸೇರಿದಂತೆ 12ಕ್ಕೂ ಹೆಚ್ಚು ಪ್ರಕರಣಗಳಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿದ್ದ ಮುತ್ತುರಾಜ್ ಅಲಿಯಾಸ್ ಡಕ್ಕ ಮಳವಳ್ಳಿ ತಾಲೂಕು ಚಿಕ್ಕಮುಲಗೂಡು ಬಳಿ ಇರುವ ಖಚಿತ ಮಾಹಿತಿ ಮೇರೆಗೆ ಭಾನುವಾರ ಬೆಳಗಿನಜಾವ ಪೊಲೀಸರು ಆತನನ್ನು ಬಂಧಿಸಲು ತೆರಳಿದ್ದರು. ಈ ವೇಳೆ ಪೊಲೀಸ್ ಸಿಬ್ಬಂದಿ ಸಿದ್ದರಾಜು ಮೇಲೆ ಮಾರಕಾಸ್ತ್ರದಿಂದ ದಾಳಿ ಮಾಡಿದ್ದಾನೆ.


ಸಿಪಿಐ ಶ್ರೀಧರ್

ಈ ವೇಳೆ ಹಲಗೂರು ವೃತ್ತದ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀಧರ್ ಗಾಳಿಯಲ್ಲಿ ಒಂದು ಸುತ್ತು ಗುಂಡು ಹಾರಿಸಿ ಶರಣಾಗುವಂತೆ ಎಚ್ಚರಿಕೆ ನೀಡಿದ್ದಾರೆ. ಆದರೂ ಪೊಲೀಸರ ಮೇಲೆ ಹಲ್ಲೆಗೆ ಮುಂದಾದಾಗ ಆತ್ಮರಕ್ಷಣೆಗಾಗಿ ಆತನ ಬಲಗಾಲಿಗೆ ಪೊಲೀಸರು ಗುಂಡು ಹಾರಿಸಿದ್ದಾರೆ. ಇದರಿಂದ ಗಾಯಗೊಂಡು ಓಡಲಾಗದೆ ಕೆಳಗೆ ಬಿದ್ದ ರೌಡಿ ಶೀಟರ್‌ನನ್ನು ಪೊಲೀಸರು ತಮ್ಮ ವಶಕ್ಕೆ ಪಡೆದರು.

ಆರೋಪಿಯನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಮಿಮ್ಸ್ ಆಸ್ಪತ್ರೆಗೆ ದಾಖಲು ಮಾಡಲಾಗಿದ್ದು, ಈತನ ವಿರುದ್ಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಆಸ್ಪತ್ರೆಯಲ್ಲಿ ಬಿಗಿ ಬಂದೋಬಸ್ತ್ ಮಾಡಲಾಗಿದೆ.

ಪ್ರಕರಣದ ಹಿನ್ನೆಲೆ: ಹಲಗೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಜುಲೈ 30 ರಂದು ಕಾಂತರಾಜು ಎಂಬಾತನ ಕೊಲೆ ನಡೆದಿತ್ತು. ಈ ಸಂಬಂಧ ಪ್ರಕರಣ ದಾಖಲಾಗಿತ್ತು. ಸಿಪಿಐ ಶ್ರೀಧರ್ ಈ ತನಿಖೆ ಆರಂಭಿಸಿದ್ದರು. ಪ್ರಕರಣದಲ್ಲಿ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿತ್ತು. ತನಿಖೆ ವೇಳೆ ಕಾಂತರಾಜು ಕೊಲೆಗೆ ಮುತ್ತುರಾಜ ಅಲಿಯಾಸ್ ಡಕ್ಕ ಸುಪಾರಿ ನೀಡಿರುವ ಬಗ್ಗೆ ಆರೋಪಿಗಳು ಬಾಯ್ಬಿಟ್ಟಿದ್ದರು. ಆ ಹಿನ್ನೆಲೆಯಲ್ಲಿ ಆತನ ಬಂಧನಕ್ಕೆ ಪೊಲೀಸರು ಶೋಧ ಕೈಗೊಂಡಿದ್ದರು.

ಮುತ್ತುರಾಜ್ ಅಲಿಯಾಸ್ ಡಕ್ಕ 12ಕ್ಕೂ ಹೆಚ್ಚು ಪ್ರಕರಣದಲ್ಲಿ ಆರೋಪಿಯಾಗಿದ್ದಾನೆ. 3 ಕೊಲೆ, 3 ಕೊಲೆಗೆ ಯತ್ನ, 2 ರಾಬರಿ ಪ್ರಕರಣ ಸೇರಿ ಹಲವು ಪ್ರಕರಣಗಳಲ್ಲಿ ಭಾಗಿಯಾಗಿರುವ ಬಗ್ಗೆ ಮಾಹಿತಿ ಲಭ್ಯವಾಗಿದೆ. ಇನ್ನಷ್ಟು ಪ್ರಕರಣಗಳಲ್ಲಿ ಭಾಗಿಯಾಗಿರುವ ಶಂಕೆಯೂ ಇದೆ. ಆರೋಪಿ ಡಕ್ಕ ಹಲವು ಹುಡುಗರ ಗುಂಪು ಕಟ್ಟಿಕೊಂಡು ಅಪರಾಧ ಚಟುವಟಿಕೆಯಲ್ಲಿ ಸಕ್ರಿಯನಾಗಿದ್ದ ಎನ್ನಲಾಗಿದೆ. 2019 ರಿಂದ ರೌಡಿ ಚಟುವಟಿಕೆಯಲ್ಲಿದ್ದು ಇಸ್ಪೀಟ್ ಜೂಜಾಟ ದಂಧೆಗೂ ಇಳಿದಿದ್ದ ಎನ್ನಲಾಗಿದೆ.

ಬಾಂಗ್ಲಾದಲ್ಲಿ ಹಿಂದೂಗಳ ಮೇಲೆ ದೌರ್ಜನ್ಯ ಖಂಡಿಸಿ ಬೆಂಗಳೂರಲ್ಲಿ ಪ್ರತಿಭಟನೆ

ರಸ್ತೆಬದಿ ಭಿತ್ತಿಪತ್ರ ಹಿಡಿದು ಹಿಂದೂಗಳ ರಕ್ಷಣೆಗೆ ಕ್ರಮ ಕೈಗೊಳ್ಳಲು ಆಗ್ರಹ

ಬೆಂಗಳೂರು, ಆ.11– ಬಾಂಗ್ಲಾ ದೇಶದಲ್ಲಿ ಅಲ್ಪಸಂಖ್ಯಾತ ಹಿಂದೂಗಳ ಸುರಕ್ಷತೆ ಮತ್ತು ಮಾನವ ಹಕ್ಕುಗಳ ಸಂರಕ್ಷಣೆಗೆ ಭಾರತ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಬೆಂಗಳೂರಿನ ಹಲವೆಡೆ ಪ್ರತಿಭಟನೆ ನಡೆಸಲಾಗುತ್ತಿದೆ.


ಬೆಂಗಳೂರು ಜೆ.ಪಿ.ನಗರದಲ್ಲಿ ರಸ್ತೆಯುದ್ದಕ್ಕೂ ಮಾನವ ಸರಪಳಿ ನಿರ್ಮಿಸಿ, ಘೋಷಣಾ ಫಲಕ ಪ್ರದರ್ಶಿಸಿ ಪ್ರತಿಭಟಿಸಲಾಯಿತು.

ಬಾಂಗ್ಲಾದಲ್ಲಿ ವಿದ್ಯಾರ್ಥಿಗಳ ಆಂದೋಲನ ರೂಪದಲ್ಲಿ ಆರಂಭಗೊಂಡ ದಂಗೆಯಿಂದ ಇಡೀ ದೇಶ ಅರಾಜಕತಾವಾದಿಗಳ ಕೈವಶವಾಗಿದೆ. ಅಲ್ಲಿನ ಅಲ್ಪಸಂಖ್ಯಾತ ಹಿಂದೂಗಳ ಮೇಲಿನ ಹಿಂಸಾಚಾರ ಮಿತಿಮೀರಿದೆ. ಚಿತ್ರಹಿಂಸೆ ನೀಡುವುದಲ್ಲದೆ ಅತ್ಯಾಚಾರ ವೆಸಗಲಾಗುತ್ತಿದೆ. ಪ್ರತಿಕ್ಷಣವನ್ನೂ ಭಯದಿಂದ ಕಳೆಯುವಂತಹ ದುಸ್ಥಿತಿ ನಿರ್ಮಾಣವಾಗಿದೆ. ತಕ್ಷಣ ಅಲ್ಲಿನ ಹಿಂದೂಗಳ ಸುರಕ್ಷತೆಗೆ ಭಾರತ ಮುಂದಾಗಬೇಕು. ಪ್ರಧಾನಿ ಮೋದಿ ಅವರು ಈ ನಿಟ್ಟಿನಲ್ಲಿ ಗಂಭೀರ ಕ್ರಮ ಕೈಗೊಳ್ಳಬೇಕು ಎಂದು ಸಾವಿರಾರು ಜನ ಬೀದಿಗಿಳಿದು ಒತ್ತಾಯಿಸುತ್ತಿದ್ದಾರೆ.

ಜಯನಗರ ಹಾಗೂ ಜೆ.ಪಿ.ನಗರ ನಿವಾಸಿಗಳು ಸ್ವಯಂ ಪ್ರೇರಣೆಯಿಂದ ರಾಗಿಗುಡ್ಡದ ಬಳಿ ರಸ್ತೆಯ ಇಕ್ಕೆಲಗಳಲ್ಲಿ ಘೋಷಣಾ ಫಲಕಗಳನ್ನು ಪ್ರದರ್ಶಿಸುವ ಮೂಲಕ ಬಾಂಗ್ಲಾದಲ್ಲಿನ ಅಲ್ಪಸಂಖ್ಯಾತ ಹಿಂದೂಗಳಿಗೆ ಸ್ಥೈರ್ಯ ತುಂಬುವುದರ ಜೊತೆಗೆ ಭಾರತ ಸರ್ಕಾರದ ಗಮನ ಸೆಳೆದಿದ್ದಾರೆ. ಕಿಲೋ ಮೀಟರ್‌ಗಳಷ್ಟು ದೂರ ರಸ್ತೆ ಬದಿ ಮಾನವ ಸರಪಳಿ ಮಾದರಿ ನಿರ್ಮಿಸಿ, ಮೌನ ಪ್ರತಿಭಟನೆ ಮಾಡಿದ್ದಾರೆ.

ಬಾಂಗ್ಲಾದೇಶದ ನುಸುಳುಕೋರರನ್ನು ಗಡಿಪಾರು ಮಾಡಬೇಕು. ಬಾಂಗ್ಲಾ ಹಿಂದುಗಳಿಗೆ ರಕ್ಷಣೆ ನೀಡಬೇಕು ಎಂದು ನೂರಾರು ಮಂದಿ ಸಹಿ ಮಾಡಿದ ಆಗ್ರಹ ಪತ್ರವನ್ನು ಪೊಲೀಸ್ ಅಧಿಕಾರಿಗಳಿಗೆ ನೀಡಿದರು. ಹಿಂದೂಗಳು ಜಿಹಾದಿಗಳ ಕಿರುಕುಳಕ್ಕೆ ಬಲಿಯಾಗುತ್ತಿದ್ದಾರೆ. ಮಧ್ಯಂತರ ಸರ್ಕಾರದಿಂದಾಗಿ ಭಾರತ ವಿರೋಧಿ ಜಿಹಾದಿಗಳ ಚಟುವಟಿಕೆ ಉಲ್ಬಣಗೊಳ್ಳುವ ಸಾಧ್ಯತೆಯಿದೆ. ಹಿಂದೂಗಳು ಎರಡನೇ ದರ್ಜೆ ನಾಗರಿಕರಾಗಿ ಭಯದ ವಾತಾವರಣದಲ್ಲಿ ಬದುಕುತ್ತಿದ್ದಾರೆ. ಭಾರತ ಸರ್ಕಾರ ಮಧ್ಯ ಪ್ರವೇಶಿಸಿ, ಹಿಂದೂಗಳ ರಕ್ಷಣೆ ಮಾಡಬೇಕು ಎಂದು ಮನವಿ ಮಾಡಿದ್ದಾರೆ.

ಇಂದು ಮೈಸೂರಿನಲ್ಲಿ ಪ್ರತಿಭಟನೆ

ಮೈಸೂರು: ಬಾಂಗ್ಲಾದಲ್ಲಿ ಅಲ್ಪಸಂಖ್ಯಾತ ಹಿಂದೂಗಳ ಮೇಲಿನ ದೌರ್ಜನ್ಯ ಖಂಡಿಸಿ, ಮೈಸೂರಿನ ವಿವಿಧೆಡೆ ಸೋಮವಾರ ಪ್ರತಿಭಟನೆ ನಡೆಸಲುದ್ದೇಶಿಸಲಾಗಿದೆ. ಚಾಮರಾಜ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಧ್ಯಕ್ಷ ದಿನೇಶ್ ಗೌಡ ಹಾಗೂ ಹಿಂದೂ ಸಂಘಟನೆಯ ಭರತ್ ಸಹಯೋಗದಲ್ಲಿ ಸೋಮವಾರ ಸಂಜೆ ಒಂಟಿಕೊಪ್ಪಲು ಕೆಆರ್‌ಎಸ್ ರಸ್ತೆ ಜಂಕ್ಷನ್, ಚಂದ್ರಮೌಳೇಶ್ವರ ದೇವಸ್ಥಾನ, ಹೆಬ್ಬಾಳು ಬಸವನಗುಡಿ ವೃತ್ತ ಹಾಗೂ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ವೃತ್ತ(ಮೆಟ್ರೋಪೋಲ್ ಸರ್ಕಲ್)ದಲ್ಲಿ ಮಾನವ ಸರಪಳಿ ನಿರ್ಮಿಸಿ, ಘೋಷಣಾ ಫಲಕಗಳನ್ನು ಪ್ರದರ್ಶಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ನಗರದ ಹಲವು ಸಂಘಟನೆಗಳು ಪ್ರತ್ಯೇಕ ಸ್ಥಳಗಳಲ್ಲಿ ಪ್ರತಿಭಟಿಸಲು ಮುಂದಾಗಿವೆ.

ಲೊಕಾರ್ನೊ ಫಿಲ್ಮ್ ಫೆಸ್ಟಿವಲ್: ಪ್ರಶಸ್ತಿ ಹೆಸರು ಹೇಳಲಾಗದೆ ಪರದಾಡಿದ ನಟ ಶಾರುಕ್



ಇಟಲಿ, ಆ.11–ಲೊಕಾರ್ನೊ ಫಿಲ್ಮ್ ಫೆಸ್ಟಿವಲ್–2024ರ ಜೀವಮಾನ ಸಾಧನೆ ಪ್ರಶಸ್ತಿಯನ್ನು (ಪಾರ್ಡೊ ಅಲ್ಲಾ ಕ್ಯಾರಿಯರಾ ಅಸ್ಕೋನಾ–ಲೊಕಾರ್ನೊ ಟೂರಿಸಂ) ಬಾಲಿವುಡ್ ನಟ ಶಾರುಕ್‌ಖಾನ್ ಅವರಿಗೆ ನೀಡಿ ಗೌರವಿಸಲಾಗಿದೆ. ಈ ಪ್ರಶಸ್ತಿ ಪಡೆದ ಮೊದಲ ಭಾರತೀಯ ನಟ ಎಂಬ ಹೆಗ್ಗಳಿಕೆಗೆ ಶಾರುಕ್ ಖಾನ್ ಪಾತ್ರರಾಗಿದ್ದಾರೆ.

ವೇದಿಕೆ ಮೇಲೆ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಶಾರುಕ್, ಪ್ರಶಸ್ತಿಯ ಹೆಸರು ಹೇಳಲು ಬಾರದೆ ಪರದಾಡಿದ್ದಾರೆ. ಹೆಸರು ಹೇಳಲು ಬಾರದೆ ಇರುವುದನ್ನು ವೇದಿಕೆಯ ಮೇಲೆ ಒಪ್ಪಿಕೊಂಡಿದ್ದಾರೆ.

ನನ್ನ ಸಾಧನೆಯನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗಿದೆ. ಈ ಪ್ರಶಸ್ತಿಯ ಹೆಸರು ಹೇಳಲು ನಾನು ಪ್ರಯತ್ನಿಸುತ್ತಿದ್ದೇನೆ... ಎಂದು ಹೇಳಿ ನಕ್ಕಿದ್ದಾರೆ.

ಭಾಷಣದ ಕೊನೆಯಲ್ಲಿ ಮತ್ತೊಮ್ಮೆ ಪ್ರಶಸ್ತಿಯ ಹೆಸರು ಉಚ್ಚರಿಸಲು ಶಾರುಕ್ ಪ್ರಯತ್ನಿಸಿದ್ದಾರೆ. ಕೊನೆಯಲ್ಲಿ 'ಅರಿವೆದರ್ಸಿ (ಇಟಾಲಿಯನ್ ಭಾಷೆಯಲ್ಲಿ ಗುಡ್‌ಬೈ) ಹಾಗೆ ಈ ಪ್ರಶಸ್ತಿಗೆ ಚಿಕ್ಕ ಹೆಸರನ್ನು ಇಡಬಹುದೆ?' ಎಂದು ನಗುತ್ತಾ ಕೇಳಿದ್ದಾರೆ.

ಜೀವನಮಾನ ಸಾಧನೆ ಪ್ರಶಸ್ತಿಗೆ ಶಾರುಕ್ ಅವರನ್ನು ಆಯ್ಕೆ ಮಾಡಿರುವ ಕುರಿತು ಮಾತನಾಡಿದ ಲೊಕಾರ್ನೊ ಚಲನಚಿತ್ರೋತ್ಸವದ ನಿರ್ದೇಶಕ ಜಿಯೋನಾ ಎ. ನಝಾರೊ, ಶಾರುಕ್ ಖಾನ್ ಒಬ್ಬ ಉತ್ತಮ ಕಲಾವಿದರಾಗಿದ್ದಾರೆ. ತಮ್ಮ ಕೆಲಸದ ಮೂಲಕ ಎಷ್ಟೋ ಜನರ ಕನಸು ಮತ್ತು ಭರವಸೆಗಳನ್ನು ನನಸು ಮಾಡಿದ್ದಾರೆ. ಹಾಗಾಗಿಯೇ ಈ ಪ್ರಶಸ್ತಿಗೆ ಶಾರುಕ್ ಖಾನ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದರು.

ಕೆಎಸ್‌ಆರ್‌ಟಿಸಿ ಬಸ್–ಎಲೆಕ್ಟ್ರಿಕ್ ಸ್ಕೂಟರ್ ಅಪಘಾತ: ರೈಲ್ವೆ ಉದ್ಯೋಗಿ ಸಾವು

ಮೈಸೂರು, ಆ.11(ಬಿಎಲ್‌ಯು)– ಎಲೆಕ್ಟ್ರಿಕ್ ಸ್ಕೂಟರ್, ಕೆಎಸ್‌ಆರ್‌ಟಿಸಿ ಬಸ್ ನಡುವೆ ಸಂಭವಿಸಿದ ಅಪಘಾತದಲ್ಲಿ ಸ್ಕೂಟರ್ ಸವಾರ ಮೈಸೂರಿನ ರೈಲ್ವೆ ಉದ್ಯೋಗಿ ಮೃತಪಟ್ಟಿರುವ ಘಟನೆ ನಗರದಲ್ಲಿ ಭಾನುವಾರ ಸಂಭವಿಸಿದೆ. ನಗರದ ಕ್ಯಾತಮಾರನಹಳ್ಳಿಯ ಶಿವಕುಮಾರ್(59) ಮೃತ ದುರ್ದೈವಿ. ಇಂದು ಬೆಳಗ್ಗೆ ದೇವರಾಜ ಅರಸ್ ರಸ್ತೆಯಿಂದ ಜೆಎಲ್‌ಬಿ ರಸ್ತೆ ಕಡೆಗೆ ಶಿವಕುಮಾರ್ ಎಲೆಕ್ಟ್ರಿಕ್ ಸ್ಕೂಟರ್‌ನಲ್ಲಿ ಹೋಗುತ್ತಿದ್ದರು. ನಿಧಾನವಾಗಿಯೇ ಹೋಗುತ್ತಿದ್ದ ಶಿವಕುಮಾರ್ ಇದ್ದಕ್ಕಿದ್ದಂತೆ ಎಕ್ಸಲೇಟರ್ ಜೋರಾಗಿ ಒತ್ತಿದ್ದಾರೆ. ಇದರಿಂದ ವೇಗವಾಗಿ ಮುನ್ನುಗ್ಗಿದ ಸ್ಕೂಟರ್ ಮುಂದೆ ಹೋಗುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್‌ಗೆ ಡಿಕ್ಕಿ ಹೊಡೆದಿದೆ.


ಶಿವಕುಮಾರ್

ತೀವ್ರವಾಗಿ ಗಾಯಗೊಂಡ ಶಿವಕುಮಾರ್ ಅವರನ್ನು ತಕ್ಷಣವೇ ಕೆ.ಆರ್.ಆಸ್ಪತ್ರೆಗೆ ದಾಖಲು ಮಾಡಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ. ರೈಲ್ವೆ ಉದ್ಯೋಗಿಯಾಗಿರುವ ಶಿವಕುಮಾರ್ ಇದೇ ನವೆಂಬರ್‌ನಲ್ಲಿ ನಿವೃತ್ತಿ ಹೊಂದುತ್ತಿದ್ದರು. ಈ ಸಂಬಂಧ ದೇವರಾಜ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಎಲೆಕ್ಟ್ರಿಕ್ ಸ್ಕೂಟರ್ ಸವಾರರಿಗೆ ಒಂದು ಸಲಹೆ

ಇತ್ತೀಚಿಗೆ ಜನರು ಹೆಚ್ಚಾಗಿ ಎಲೆಕ್ಟ್ರಿಕ್ ಸ್ಕೂಟರ್ ಖರೀದಿಸುತ್ತಿದ್ದಾರೆ. ಆದರೆ ಅದರ ಚಾಲನೆಯ ವೇಗದ ಶೈಲಿ ಬಹಳಷ್ಟು ಜನರಿಗೆ ತಿಳಿಯದೆ ಅಪಘಾತಗಳಾಗುತ್ತಿವೆ. ಎಲೆಕ್ಟ್ರಿಕ್ ದ್ವಿಚಕ್ರ ವಾಹನದಲ್ಲಿ ವೇಗಕ್ಕೆ ಸಂಬಂಧಿಸಿದಂತೆ ಆಯ್ಕೆಗಳನ್ನು ನೀಡಲಾಗಿರುತ್ತದೆ. ಎಕೋ, ರೈಡ್, ಸ್ಪೋರ್ಟ್ಸ್ ಹಾಗೂ ರ‍್ಯಾಪ್ ಆಯ್ಕೆಗಳಿರುತ್ತದೆ. ಎಕೋ ಅಥವಾ ರೈಡ್ ಆಯ್ಕೆ ಮಾಡಿಕೊಂಡು ಚಾಲನೆ ಮಾಡಿದಾಗ ವಾಹನ ಅಷ್ಟಾಗಿ ವೇಗದಿಂದ ಹೋಗುವುದಿಲ್ಲ. ಆದರೆ ಇದರ ಬಗ್ಗೆ ಬಹಳಷ್ಟು ಜನರಿಗೆ ಮಾಹಿತಿ ಇರುವುದಿಲ್ಲ. ಸ್ಪೋರ್ಟ್ ಅಥವಾ ರ‍್ಯಾಪ್ ಆಯ್ಕೆ ಮಾಡಿಕೊಂಡು ಚಾಲನೆ ಮಾಡಿದಾಗ ಎಕ್ಸಲೇಟರ್ ಅನ್ನು ಸ್ವಲ್ಪವೇ ಕೊಟ್ಟರೂ ಅತಿ ವೇಗವಾಗಿ ಓಡುತ್ತದೆ. ಅಷ್ಟೆ ಅಲ್ಲದೆ ವಾಹನ ಕೂಡ ಜಂಪ್ ಆಗುತ್ತದೆ. ಇದರ ಬಗ್ಗೆ ಮಾಹಿತಿ ಇಲ್ಲದೆ ಸ್ಕೂಟರ್ ಓಡಿಸುವ ಬಹಳಷ್ಟು ಮಂದಿ ಎಲೆಕ್ಟ್ರಿಕ್ ವಾಹನ ಸವಾರರು ಅಪಘಾತಕ್ಕೀಡಾಗುತ್ತಿದ್ದಾರೆ. ಮೈಸೂರಿನ ದೇವರಾಜ ಅರಸ್ ರಸ್ತೆ ಹಾಗೂ ಜೆಎಲ್‌ಬಿ ರಸ್ತೆ ಜಂಕ್ಷನ್‌ನಲ್ಲಿ ಅಪಘಾತದಿಂದಲೇ ಮೃತಪಟ್ಟ ಶಿವಕುಮಾರ್ ಈ ಕಾರಣದಿಂದಲೇ ಮೃತಪಟ್ಟಿದ್ದಾರೆ ಎನ್ನಲಾಗಿದೆ.

ಶಿವಕುಮಾರ್ ಎಕ್ಸಲೇಟರ್ ಹೆಚ್ಚಾಗಿ ಕೊಟ್ಟಾಗ ವಾಹನ ವೇಗವಾಗಿ ಚಾಲನೆಯಾಗಿದೆ. ಈ ವೇಳೆ ಗಾಬರಿಗೊಂಡ ಶಿವಕುಮಾರ್ ಕಾಲನ್ನು ಒದರಿದ್ದಾರೆ. ಇದರಿಂದ ನಿಯಂತ್ರಣ ಕಳೆದುಕೊಂಡು ಬಸ್‌ಗೆ ಡಿಕ್ಕಿ ಹೊಡೆದಿದ್ದಾರೆ. ಈ ದೃಶ್ಯಗಳು ಜಂಕ್ಷನ್‌ನಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಆದ ಕಾರಣ ಎಲೆಕ್ಟ್ರಿಕ್ ವಾಹನ ಚಾಲನೆ ಮಾಡುವ ಸವಾರರು ವೇಗದ ಆಯ್ಕೆ ಬಗ್ಗೆ ಮಾಹಿತಿ ಪಡೆದು ಅದರಂತೆ ಚಾಲನೆ ಮಾಡಿದರೆ ಅಪಘಾತದಿಂದ ಪಾರಾಗಬಹುದು.

ಅವರೆಕಾಳು ಮುದ್ದೆ ಊಟದ ಅನ್ನ ದಾಸೋಹ


ಮೈಸೂರು ವಿಜಯನಗರದ ಶ್ರೀ ಯೋಗಾನರಸಿಂಹ ಸ್ವಾಮಿ ದೇವಾಲಯದಲ್ಲಿ ಶನಿವಾರ ಶ್ರಾವಣ ಮಾಸದ ಪ್ರಯುಕ್ತ ಸುಮಾರು 12 ಸಾವಿರ ಭಕ್ತರಿಗೆ ಮಂಡ್ಯ ಜಿಲ್ಲೆ ನಿವಾಸಿಗಳು, ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು ಮತ್ತು ಪುಣ್ಯಕೋಟಿ ಸೇವಾ ಟ್ರಸ್ಟ್ ವತಿಯಿಂದ 'ಅವರೆಕಾಳು ಮುದ್ದೆ ಊಟ'ದ ಅನ್ನ ದಾಸೋಹ ಆಯೋಜಿಸಿದ್ದರು. ಯೋಗಾನರಸಿಂಹಸ್ವಾಮಿ ದೇವಾಲಯದ ಸಂಸ್ಥಾಪಕರು ಹಾಗೂ ನಾಡೋಜ ಶ್ರೀ ಭಾಷ್ಯಂ ಸ್ವಾಮೀಜಿ, ದೇವಾಲಯದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ದಾಸೋಹಕ್ಕೆ ಚಾಲನೆ ನೀಡಿದರು. ಮುದ್ದೆ, ಅವರೆಕಾಳು ಸಾಂಬಾರು ಮತ್ತು ಸಿಹಿ ಪಾಯಸ ದಾಸೋಹದ ವಿಶೇಷವಾಗಿತ್ತು. ಈ ವೇಳೆ ರೋಟರಿ ಕ್ಲಬ್ ಆಫ್ ಹೆರಿಟೇಜ್ ಮೈಸೂರು ಅಧ್ಯಕ್ಷ ರಾಜೇಶ್, ಮಾಜಿ ಅಧ್ಯಕ್ಷ ವೆಂಕಟೇಶ್, ಪುಣ್ಯಕೋಟಿ ಟ್ರಸ್ಟ್ ಅಧ್ಯಕ್ಷ ಹನುಮಂತೇಶ, ಕಾರ್ಯದರ್ಶಿ ಸುಂದರ್‌ರಾಜ್, ಪ್ರಭಾಕರ್ ಉಪಸ್ಥಿತರಿದ್ದರು.

ಕೆಆರ್‌ಎಸ್‌ಗೂ ಸ್ಟಾಪ್ ಲಾಕ್ ಗೇಟ್ ಅಳವಡಿಕೆ ಅಗತ್ಯ: ಎಚ್‌ಡಿಕೆ



ಮಂಡ್ಯ: ತುಂಗಭದ್ರಾ ಜಲಾಶಯದಲ್ಲಿ ದೊಡ್ಡ ಅನಾಹುತವಾಗಿದೆ. ಜಲಾಶಯದ 60 ಟಿಎಂಸಿ ನೀರು ಖಾಲಿಯಾಗುತ್ತದೆ. ಟಿ.ಬಿ.ಡ್ಯಾಂ ಬೋರ್ಡ್ ಟೆಕ್ನಿಕಲ್ ವಿಚಾರದಲ್ಲಿ ಕಾಟಾಚಾರದ ವರದಿ ಕೊಟ್ಟಿವೆ. ಅದಕ್ಕಾಗಿ ಇಂತಹ ಪರಿಸ್ಥಿತಿ ಬಂದಿದೆ. ಇದು ರೈತರ ಬದುಕಿನ ಆಶಾಭಾವನೆಗೆ ಧಕ್ಕೆ ತಂದಿದೆ ಎಂದು ಕೇಂದ್ರ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದರು.

ಕೆಆರ್‌ಎಸ್ ಅಣೆಕಟ್ಟೆ ವಿಚಾರದಲ್ಲೂ ಸರ್ಕಾರ ಎಚ್ಚೆತ್ತುಕೊಳ್ಳಬೇಕು. ಕೆಆರ್‌ಎಸ್ ಡ್ಯಾಂ ಕಟ್ಟುವಾಗ 'ಸ್ಟಾಪ್ ಲಾಕ್ ಗೇಟ್' ಇಲ್ಲದ ಕಾರಣ ಅದನ್ನು ಅಳವಡಿಸಿಲ್ಲ. ತುಂಗಭದ್ರಾ ಪರಿಸ್ಥಿತಿ ಗಮನಿಸಿದರೆ, ದೂರದೃಷ್ಟಿಯಿಂದ ಕೆಆರ್‌ಎಸ್‌ಗೆ ಸ್ಟಾಪ್ ಲಾಕ್ ಗೇಟ್ ಹಾಕಬೇಕು ಎಂದು ಒತ್ತಾಯಿಸಿದರು.

ಮಾರ್ಕ್ಸ್‌ವಾದವು ವಿಜ್ಞಾನವನ್ನು ಆವರಿಸಿರುವ ತತ್ವಶಾಸ್ತ್ರ

ಎಸ್‌ಯುಸಿಐ(ಕಮ್ಯುನಿಸ್ಟ್) ಕೇಂದ್ರ ಸಮಿತಿಯ ಪಾಲಿಟ್ ಬ್ಯೂರೋ ಸದಸ್ಯ ಅಮಿತಾಬ್ ಚಟರ್ಜಿ ಅಭಿಮತ

ಮೈಸೂರು, ಆ.11(ಜಿಎ)–ಮಾರ್ಕ್ಸ್‌ವಾದವು ಕೇವಲ ಆರ್ಥಿಕ, ರಾಜಕೀಯ ಸಿದ್ಧಾಂತ ಮಾತ್ರವಲ್ಲದೇ ವೈಯಕ್ತಿಕ ಜೀವನಕ್ಕೂ ದಾರಿ ತೋರಿಸುವ ಸತ್ಯಾಧಾರಿತ ತತ್ವಶಾಸ್ತ್ರವಾಗಿದ್ದು, ವಿಜ್ಞಾನವನ್ನು ಆಧರಿಸಿದೆ ಎಂದು ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ಕೇಂದ್ರ ಸಮಿತಿಯ ಪಾಲಿಟ್ ಬ್ಯೂರೋ ಸದಸ್ಯ ಅಮಿತಾಬ್ ಚಟರ್ಜಿ ಹೇಳಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಭಾಂಗಣದಲ್ಲಿ ಎಸ್‌ಯುಸಿಐ (ಕಮ್ಯುನಿಸ್ಟ್)ಪಕ್ಷದ ಸಂಸ್ಥಾಪಕ ಕಾಮ್ರೇಡ್ ಶಿವದಾಸ್ ಘೋಷ್ ಅವರ 48ನೇ ಸ್ಮರಣಾ ವರ್ಷಾಚರಣೆಯ ಅಂಗವಾಗಿ ನಡೆದ ಬೆಂಗಳೂರು, ಮೈಸೂರು, ತುಮಕೂರು, ಚಿತ್ರದುರ್ಗ, ಹಾಸನ ಸೇರಿದಂತೆ ವಲಯ ಮಟ್ಟದ ಸಾರ್ವಜನಿಕ ಸಭೆಯಲ್ಲಿ ಅವರು ಮಾತನಾಡಿದರು.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಭಾಂಗಣದಲ್ಲಿ ಎಸ್‌ಯುಸಿಐ (ಕಮ್ಯುನಿಸ್ಟ್)ಪಕ್ಷದ ಸಂಸ್ಥಾಪಕ ಕಾಮ್ರೇಡ್ ಶಿವದಾಸ್ ಘೋಷ್ ಅವರ 48ನೇ ಸ್ಮರಣಾ ವರ್ಷಾಚರಣೆಯಲ್ಲಿ ಗೌರವ ಸಲ್ಲಿಸಲಾಯಿತು.

ಭಾರತದಲ್ಲಿ ವೇದಾಂತ, ದ್ವೈತ, ಅದ್ವೈತ ಹೀಗೆ ಹಲವಾರು ಸಿದ್ಧಾಂತಗಳನ್ನು ಬಿಟ್ಟು ಶಿವದಾಸ್ ಘೋಷ್ ಅವರು ಮಾರ್ಕ್ಸ್‌ವಾದವನ್ನು ಆಯ್ಕೆ ಮಾಡಿಕೊಂಡರು. ಏಕೆಂದರೆ ಮಾರ್ಕ್ಸ್‌ವಾದವು ವಿಜ್ಞಾನವನ್ನು ಆಧರಿಸಿದೆ ಮತ್ತು ಕೇವಲ ಆರ್ಥಿಕ, ರಾಜಕೀಯ ಥಿಯರಿ ಮಾತ್ರವಲ್ಲದೇ ವೈಯಕ್ತಿಕ ಜೀವನಕ್ಕೂ ದಾರಿ ತೋರಿಸುವ ಸತ್ಯಾಧಾರಿತ ತತ್ವಶಾಸ್ತ್ರವಾಗಿದ್ದ ಕಾರಣ ಇಂದಿನ ಎಲ್ಲಾ ಸಮಸ್ಯೆಗಳ ವಿರುದ್ಧ ಹೋರಾಡುವ ಏಕೈಕ ಅಸ್ತ್ರ ಮಾರ್ಕ್ಸ್‌ವಾದ ಎಂದರು.

ಮಾರ್ಕ್ಸ್‌ವಾದದ ತತ್ವಶಾಸ್ತ್ರದ ಅಡಿಯಲ್ಲಿ ಮಾತ್ರವೇ ಬಂಡವಾಳಶಾಹಿ ವಿರೋಧಿ ಸಮಾಜವಾದಿ ಕ್ರಾಂತಿಯನ್ನು ನೆರವೇರಿಸಲು ಸಾಧ್ಯ ಎಂದು ಶಿವದಾಸ್ ಘೋಷ್ ತೋರಿಸಿಕೊಟ್ಟರು. ಮಾರ್ಕ್ಸ್‌ವಾದವು ಹೇಳುವ ಹಾಗೆ ನಾಯಕತ್ವವನ್ನು ಕುರುಡಾಗಿ ಅನುಸರಿಸಬಾರದು. ಬದಲಾಗಿ ಸೈದ್ಧಾಂತಿಕವಾಗಿ ಗಟ್ಟಿಗೊಳಿಸಿಕೊಳ್ಳುವ ಮೂಲಕ ಪಕ್ಷವನ್ನು ಆಂತರಿಕವಾಗಿ ಬಲಪಡಿಸುವ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕೆಂದು ಕರೆ ನೀಡಿದರು.

ಎಸ್‌ಯುಸಿಐನ ರಾಜ್ಯ ಸೆಕ್ರೆಟೇರಿಯೇಟ್ ಸದಸ್ಯ ಎಂ.ಎನ್.ಶ್ರೀರಾಮ್ ಮಾತನಾಡಿ, 1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದಿರುವುದು ಬಂಡವಾಳಶಾಹಿಗಳಿಗೆ ಹೊರತು, ಈ ದೇಶದ ದುಡಿಯುವ ವರ್ಗಕ್ಕಲ್ಲ ಎಂಬುದನ್ನು ಗ್ರಹಿಸಬೇಕು. ಇದರ ಪರಿಣಾಮವೇ ಸಾಮಾನ್ಯ ಜನರು ರೈತ, ಕಾರ್ಮಿಕರ ಮೇಲಿನ ಶೋಷಣೆಯು ಮುಂದುವರೆಯುತ್ತಿದೆ. ಯಾವ ಪಕ್ಷಗಳು ಕೂಡ ಇದರ ವಿರುದ್ಧ ಮಾತನಾಡುತ್ತಿಲ್ಲ ಹೊರತಾಗಿ, ತಾವೇ ಭ್ರಷ್ಟಾಚಾರದಲ್ಲಿ ಮುಳುಗಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಇತ್ತೀಚೆಗೆ ಶಿಕ್ಷಣ ಕ್ಷೇತ್ರದಲ್ಲಿ ನೀಟ್ ಸೇರಿದಂತೆ ಹಲವಾರು ಪರೀಕ್ಷೆಗಳಲ್ಲಿ ಬಹಳ ದೊಡ್ಡ ಹಗರಣ ನಡೆದಿದೆ. ಮುಡಾ ಹಗರಣದಲ್ಲಿ ಎಲ್ಲಾ ಪಕ್ಷಗಳು ಭಾಗಿದಾರರೇ ಆಗಿದ್ದಾರೆ. ಹಾಗಾಗಿ ಸಮಾಜದಲ್ಲಿ ಮೂಲಭೂತ ಬದಲಾವಣೆಯ ಅವಶ್ಯಕತೆ ಇದೆ. ಅಂತಹ ಸಮಾಜವಾದಿ ಕ್ರಾಂತಿ ನೆರವೇರಿಸಲು ಈ ಯುಗದ ಕಾರ್ಮಿಕ ವರ್ಗದ ಮಹಾನ್ ನಾಯಕ ಕಾಮ್ರೇಡ್ ಶಿವದಾಸ್ ಘೋಷ್ ಅವರ ವಿಚಾರಗಳ ಆಧಾರದ ಮೇಲೆ ಚಳುವಳಿಗಳನ್ನು ಬೆಳಸಬೇಕಿದೆ ಎಂದರು. ಎಸ್‌ಯುಸಿಐ (ಕಮ್ಯುನಿಸ್ಟ್) ಪಕ್ಷದ ರಾಜ್ಯ ಸಮಿತಿ ಸದಸ್ಯರೂ ಆದ ಜಿಲ್ಲಾ ಕಾರ್ಯದರ್ಶಿ ಬಿ.ರವಿ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಸಮಿತಿ ಸದಸ್ಯ ವಿ.ಜ್ಞಾನಮೂರ್ತಿ, ವಿ.ಎನ್.ರಾಜಶೇಖರ್, ಜಿ.ಶಶಿಕುಮಾರ್, ಜಿಲ್ಲಾ ಸಮಿತಿಯ ಪಿ.ಎಸ್.ಸಂಧ್ಯಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

> “ಭಾರತ ಸ್ವಾತಂತ್ರ್ಯ ಗಳಿಸುವ ಮುಂಚೆಯಿಂದಲೂ ಎಡಪಕ್ಷಗಳು ಅಸ್ತಿತ್ವದಲ್ಲಿದ್ದವು. ಭಾರತದ ಪರಿಸ್ಥಿತಿಯ ಕುರಿತು ಸ್ವಾತಂತ್ರ್ಯದ ನಂತರವೂ ಅರೆ ಊಳಿಗಮಾನ್ಯ, ಅರೆ ವಸಾಹತುಶಾಹಿ ವ್ಯವಸ್ಥೆಯು ಅಸ್ತಿತ್ವದಲ್ಲಿದೆ ಎಂದು ತಪ್ಪು ವಿಶ್ಲೇಷಣೆ ನೀಡಿದ್ದಾರೆ. ಆದರೆ ಕಾಮ್ರೇಡ್ ಶಿವದಾಸ್ ಘೋಷ್ ಅವರು ಊಳಿಗಮಾನ್ಯ ಪದ್ಧತಿ ಹೋಗಿ ಹೊಸ ವ್ಯವಸ್ಥೆಯು ರಚನೆಯಾಗಲಿದೆ ಎಂದು ಪ್ರತಿಪಾದಿಸಿದ್ದರು. ಅದೇ ಈಗ ದೇಶಾದ್ಯಂತ ಬೇರೂರಿರುವ ಬಂಡವಾಳಶಾಹಿ ವ್ಯವಸ್ಥೆ. ಪ್ರಸ್ತುತ ಅದು ಸಾಮ್ರಾಜ್ಯವಾದದ ಹಂತಕ್ಕೆ ಬೆಳೆದಿದೆ ಎಂಬ ಸತ್ಯವನ್ನು ತೋರಿಸಿಕೊಟ್ಟಿದ್ದಾರೆ.
> –ಅಮಿತಾಬ್ ಚಟರ್ಜಿ

ದೇಶ - ವಿದೇಶ

ರಷ್ಯಾ ಮೇಲೆ ಆಕ್ರಮಣ: ಪರೋಕ್ಷವಾಗಿ ಒಪ್ಪಿದ ಝೆಲೆನ್‌ಸ್ಕಿ

ಕೀವ್: ರಷ್ಯಾದ ಕುರ್ಸ್ಕ್ ಪ್ರದೇಶದ ಮೇಲೆ ಉಕ್ರೇನ್ ಸೇನೆ ಆಕ್ರಮಣ ಕೈಗೊಂಡ ಆರು ದಿನಗಳ ಬಳಿಕ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಮೌನ ಮುರಿದಿದ್ದಾರೆ. ಈ ಸಂಬಂಧ ಪ್ರತಿಕ್ರಿಯಿಸಿರುವ ಝೆಲೆನ್‌ಸ್ಕಿ, 'ಇದೀಗ ನಮ್ಮ ಸೇನೆವು ಆಕ್ರಮಣಕಾರರ ಪ್ರದೇಶಕ್ಕೆ ನುಗ್ಗಿದೆ' ಎಂದು ಹೇಳುವ ಮೂಲಕ ಉಕ್ರೇನ್‌ನ ಸೇನಾ ಆಕ್ರಮಣವನ್ನು ಪರೋಕ್ಷವಾಗಿ ಒಪ್ಪಿಕೊಂಡಿದ್ದಾರೆ. ಉಕ್ರೇನ್ ಪಡೆಯ ಸಹಸ್ರಾರು ಸೈನಿಕರು ರಷ್ಯಾದ ವಿರುದ್ಧದ ದಾಳಿಯಲ್ಲಿ ಪಾಲ್ಗೊಂಡಿದ್ದಾರೆ ಎಂದು ಉಕ್ರೇನ್‌ನ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.



ರಷ್ಯಾದ ದೌರ್ಬಲ್ಯವನ್ನು ತೋರಿಸುವುದು ಮತ್ತು ಅದನ್ನು ಅಸ್ಥಿರಗೊಳಿಸುವುದು ಉಕ್ರೇನ್‌ನ ಉದ್ದೇಶವಾಗಿದೆ. 'ನಾವು ಆಕ್ರಮಣಕಾರಿಯಾಗಿದ್ದು, ಶತ್ರುಗಳ ಸ್ಥಾನವನ್ನು ವಶಪಡಿಸಿಕೊಳ್ಳುತ್ತಿದ್ದೇವೆ. ಈ ಮೂಲಕ ರಷ್ಯಾಕ್ಕೆ ಗರಿಷ್ಠ ನಷ್ಟ ಉಂಟುಮಾಡುವುದು ಹಾಗೂ ತನ್ನ ಗಡಿಯನ್ನೇ ರಕ್ಷಿಸಿಕೊಳ್ಳಲಾಗದ ರಷ್ಯಾದ ಪರಿಸ್ಥಿತಿಯನ್ನು ಇನ್ನಷ್ಟು ಅಸ್ಥಿರಗೊಳಿಸುವುದು ನಮ್ಮ ಗುರಿಯಾಗಿದೆ' ಎಂದು ಅವರು ವಿವರಿಸಿದ್ದಾರೆ.

ಮಧ್ಯಪ್ರದೇಶ: ತರಬೇತಿ ವಿಮಾನ ಪತನ, ಇಬ್ಬರು ಪೈಲಟ್‌ಗೆ ಗಾಯ!

ಗುನಾ: ಮಧ್ಯಪ್ರದೇಶದಲ್ಲಿ ತರಬೇತಿ ವಿಮಾನವೊಂದು ಪತನವಾಗಿದ್ದು, ಅದೃಷ್ಟವಶಾತ್ ಇಬ್ಬರು ಪೈಲಟ್‌ಗಳು ಗಾಯಗೊಂಡಿದ್ದು, ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮಧ್ಯಪ್ರದೇಶದ ಗುನಾದಲ್ಲಿ ಈ ಘಟನೆ ನಡೆದಿದ್ದು, ಭಾನುವಾರ ಖಾಸಗಿ ವಿಮಾನಯಾನ ಅಕಾಡೆಮಿಯ ತರಬೇತಿ ವಿಮಾನವು ಏರ್‌ಸ್ಟ್ರಿಪ್‌ನಲ್ಲೇ ಪತನಗೊಂಡಿದೆ. ಖಾಸಗಿ ವಿಮಾನಯಾನ ಅಕಾಡೆಮಿಯ ಎರಡು ಆಸನಗಳ ಸೆಸ್ನಾ 152 ವಿಮಾನವು ಮಧ್ಯಾಹ್ನ 1.30ರ ಸುಮಾರಿಗೆ ಪತನಗೊಂಡಿದೆ ಎಂದು ಗುನಾ ಕ್ಯಾಂಟ್ ಪೊಲೀಸ್ ಠಾಣೆಯ ಉಸ್ತುವಾರಿ ದಿಲೀಪ್ ರಜೋರಿಯಾ ತಿಳಿಸಿದ್ದಾರೆ. ಇಂಜಿನ್ ವೈಫಲ್ಯದಿಂದ ವಿಮಾನ ಪತನಗೊಂಡಿರುವ ಶಂಕೆ ವ್ಯಕ್ತವಾಗಿದ್ದು. ಅಪಘಾತಕ್ಕೂ ಮುನ್ನ ಅವರು ಸುಮಾರು 40 ನಿಮಿಷಗಳ ಕಾಲ ಹಾರಾಟ ನಡೆಸಿದ್ದರು ಎಂದು ಅವರು ತಿಳಿಸಿದ್ದಾರೆ. ಇಬ್ಬರೂ ಪೈಲಟ್‌ಗಳನ್ನು ಇಲ್ಲಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ವಿಮಾನವನ್ನು ತಪಾಸಣೆ ಮತ್ತು ನಿರ್ವಹಣೆಗಾಗಿ ಕೆಲವು ದಿನಗಳ ಹಿಂದೆ ಇಲ್ಲಿಗೆ ತರಲಾಗಿತ್ತು ಎಂದು ಅಧಿಕಾರಿ ತಿಳಿಸಿದ್ದಾರೆ.



ಸೈಯದ್ ರೆಫಾತ್ ಅಹ್ಮದ್ ಬಾಂಗ್ಲಾ ಮುಖ್ಯ ನ್ಯಾಯಮೂರ್ತಿ

ಢಾಕಾ: ಬಾಂಗ್ಲಾದೇಶದ ನೂತನ ಮುಖ್ಯ ನ್ಯಾಯಮೂರ್ತಿಯಾಗಿ ಸೈಯದ್ ರೆಫಾತ್ ಅಹ್ಮದ್ ಭಾನುವಾರ ಪ್ರಮಾಣವಚನ ಸ್ವೀಕರಿಸಿದರು. ನ್ಯಾಯಾಂಗ ವ್ಯವಸ್ಥೆಯಲ್ಲೂ ಬದಲಾವಣೆಗೆ ಪ್ರತಿಭಟನಾಕಾರರು ಒತ್ತಾಯಿಸಿದ ನಂತರ ಒಬೈದುಲ್ ಹಸನ್ ಮುಖ್ಯ ನ್ಯಾಯಮೂರ್ತಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಇದಾದ ಒಂದು ದಿನದ ನಂತರ ಸೈಯದ್ ರೆಫಾತ್ ಅಹ್ಮದ್ ನೂತನ ಮುಖ್ಯ ನ್ಯಾಯಮೂರ್ತಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಅಧ್ಯಕ್ಷ ಶಹಾಬುದ್ದೀನ್ ನ್ಯಾಯಮೂರ್ತಿ ಅಹ್ಮದ್ ಅವರನ್ನು ಬಾಂಗ್ಲಾದೇಶದ 25ನೇ ಮುಖ್ಯ ನ್ಯಾಯಮೂರ್ತಿಯಾಗಿ ನೇಮಿಸಿದ್ದಾರೆ. ವಿದ್ಯಾರ್ಥಿಗಳು ಮತ್ತು ಇತರ ಪ್ರತಿಭಟನಾಕಾರರ ಹೊಸ ಪ್ರತಿಭಟನೆಗಳ ಹಿನ್ನೆಲೆಯಲ್ಲಿ ಢಾಕಾ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊಫೆಸರ್ ಡಾ.ಮಕ್ಸುದ್ ಕಮಾಲ್ ಮತ್ತು ಬಾಂಗ್ಲಾ ಅಕಾಡೆಮಿ ಮಹಾನಿರ್ದೇಶಕ ಪ್ರೊಫೆಸರ್ ಡಾ ಎಂಡಿ ಹರುನ್–ಉರ್–ರಶೀದ್ ಅಸ್ಕಾರಿ ಸೇರಿದಂತೆ ಬಾಂಗ್ಲಾದೇಶದ ಹಲವಾರು ಉನ್ನತ ಅಧಿಕಾರಿಗಳು ತಮ್ಮ ಹುದ್ದೆಗಳಿಗೆ ರಾಜೀನಾಮೆ ನೀಡಿದ್ದಾರೆ.



ನನ್ನ ಮೊಬೈಲ್, ವಾಟ್ಸಪ್ ಹ್ಯಾಕ್ ಮಾಡಲಾಗಿದೆ

ಮುಂಬೈ: ನನ್ನ ಮೊಬೈಲ್ ಮತ್ತು ವ್ಯಾಟ್ಸ್‌ಆ್ಯಪ್ ಅನ್ನು ಹ್ಯಾಕ್ ಮಾಡಲಾಗಿದೆ ಎಂದು ಎನ್‌ಸಿಪಿ ಶರದ್ ಪವಾರ್ ಪಕ್ಷದ ಸಂಸದೆ ಸುಪ್ರಿಯಾ ಸುಳೆ ಆರೋಪಿಸಿದ್ದಾರೆ.




'ನನ್ನ ಮೊಬೈಲ್, ವ್ಯಾಟ್ಸ್‌ಆ್ಯಪ್ ಹ್ಯಾಕ್ ಮಾಡಲಾಗಿದೆ'. ದಯವಿಟ್ಟು ಯಾರು ನನಗೆ ಕರೆ ಮಾಡಬೇಡಿ ಅಥವಾ ಸಂದೇಶ ಕಳುಹಿಸಬೇಡಿ ಎಂದು ಎನ್‌ಸಿಪಿ (ಶರದ್ ಪವಾರ್ ಬಣ) ಸಂಸದೆ ಸುಪ್ರಿಯಾ ಸುಳೆ ಟ್ವೀಟ್ ಮೂಲಕ ಮಾಹಿತಿ ನೀಡಿದ್ದಾರೆ.

ಅಂತೆಯೇ ಮೊಬೈಲ್ ಹ್ಯಾಕ್ ಆಗಿರುವ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದು, ಪೊಲೀಸರು ತನಿಖೆ ನಡೆಸಿದ್ದಾರೆ ಎಂದು ತಿಳಿಸಿದ್ದಾರೆ.

ಪೊಲೀಸ್ ದೂರಿನಲ್ಲಿರುವಂತೆ ಆನ್‌ಲೈನ್ ಮೂಲಕ ಸುಪ್ರಿಯಾ ಸುಳೆ ಅವರ ಫೋನ್ ಮತ್ತು ವ್ಯಾಟ್ಸ್‌ಆ್ಯಪ್ ಅನ್ನು ಹ್ಯಾಕ್ ಮಾಡಲಾಗಿದೆ ಎಂದು ತಿಳಿದುಬಂದಿದೆ.

ಜೋ ಬೈಡನ್ 'ಮರೆವು' ಗಂಭೀರ ಸ್ಥಿತಿಗೆ

ವಾಷಿಂಗ್‌ಟನ್: ಜೋ ಬೈಡನ್ ನೆನಪಿನ ಶಕ್ತಿ ಬಗ್ಗೆ ರಿಪಬ್ಲಿಕನ್ ಪಕ್ಷದ ಸದಸ್ಯರೂ ಕಳವಳ ವ್ಯಕ್ತಪಡಿಸಿದ್ದರು. ಈಗ ಬೈಡನ್ ನೆನಪಿನ ಶಕ್ತಿ ಕುಗ್ಗಿದೆಯೇ ಎಂಬ ಅನುಮಾನ ಬಲಗೊಳ್ಳುವಂತಹ ಮತ್ತೊಂದು ಘಟನೆ ಶ್ವೇತಭವನದಲ್ಲಿ ನಡೆದಿದೆ.



ಶ್ವೇತಭವನದಲ್ಲಿ ಟೆಕ್ಸಾಸ್ ರೇಂಜರ್ಸ್ ವರ್ಲ್ಡ್ ಸೀರಿಸ್ ವಿಕ್ಟರಿ ಕಾರ್ಯಕ್ರಮ ನಡೆಯುತ್ತಿತ್ತು. ಇದರಲ್ಲಿ ಜೋ ಬೈಡನ್ ಭಾಗಿಯಾಗಿದ್ದರು. ಅಮೆರಿಕಾ ಅಧ್ಯಕ್ಷರಿಗೆ ಟೆಕ್ಸಾಸ್ ರೇಂಜರ್ಸ್ ತಂಡ ನೆನಪಿನ ಕಾಣಿಕೆಯಾಗಿ ಪರ್ಸನಲೈಸ್ಡ್ ಜೆರ್ಸಿ ಹಾಗೂ ಕೌ ಬಾಯ್ ಬೂಟ್‌ಗಳನ್ನು ಉಡುಗೊರೆಯಾಗಿ ನೀಡಿತ್ತು. ಉಡುಗೊರೆ ಸ್ವೀಕರಿಸಿದ ಬಳಿಕ ಜೋ ಬೈಡನ್ ಏನು ಮಾಡಬೇಕೆಂಬುದು ತೋಚದೆ, ಈಗ ನಾನೇನು ಮಾಡಬೇಕು ಎಂದು ಪ್ರಶ್ನಿಸಿದ್ದಾರೆ. ಇನ್ನು ಬೈಡನ್ ಸ್ವೀಕರಿಸಿದ್ದ ಜೆರ್ಸಿಯನ್ನು ತೆಗೆದುಕೊಂಡು ಹೋಗಲು ಬಂದ ಸಹಾಯಕ ಸಿಬ್ಬಂದಿ ಬೈಡನ್ ಆಡಿದ ಮಾತು ಕೇಳಿ ಕಕ್ಕಾಬಿಕ್ಕಿಯಾದ ಘಟನೆಯೂ ನಡೆದಿದೆ. ಜೆರ್ಸಿಯನ್ನು ಜೋಪಾನವಾಗಿ ತೆಗೆದುಕೊಂಡು ಹೋಗಲು ಬಂದ ಸಿಬ್ಬಂದಿಗೆ ಜೋ ಬೈಡನ್, ನನ್ನ ಜೆರ್ಸಿಯನ್ನೇಕೆ ಕಸಿಯುತ್ತಿದ್ದೀರಾ? ಎಂದು ಪ್ರಶ್ನಿಸಿದ್ದಾರೆ.

ಸರೋದ್ ಮಾಂತ್ರಿಕ ಪಂಡಿತ್ ರಾಜೀವ ತಾರಾನಾಥರಿಗೆ

ಸಂಗೀತ ಸಾಮಾಜಿಕ ಋಣದ ಆಚರಣೆಯಾಗಿತ್ತು

ಸ್ಮರಣೆ ಕಾರ್ಯಕ್ರಮದಲ್ಲಿ ಸಾಹಿತಿ ಡಾ.ಜಯಂತ್ ಕಾಯ್ಕಿಣಿ ನುಡಿ ನಮನ

ಮೈಸೂರು,ಆ.11(ಪಿಎಂ)- ಸಂಗೀತವನ್ನು ಸಾಮಾಜಿಕ ಋಣದ ಆಚರಣೆಯೆಂದು ನಂಬಿದ್ದ ಶ್ರೇಷ್ಠ ಚಿಂತಕರು ಸರೋದ್ ಮಾಂತ್ರಿಕ ಪಂಡಿತ್ ರಾಜೀವ ತಾರಾನಾಥ್ ಎಂದು ಸಾಹಿತಿ ಡಾ.ಜಯಂತ್ ಕಾಯ್ಕಿಣಿ ಹೇಳಿದರು.

ಮೈಸೂರಿನ ಕಲಾಮಂದಿರದಲ್ಲಿ ಪಂಡಿತ್ ರಾಜೀವ ತಾರಾನಾಥ್ ಫೌಂಡೇಷನ್ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ಆಶ್ರಯದಲ್ಲಿ 'ಖ್ಯಾತ ಸರೋದ್ ವಿದ್ವಾಂಸ ಪಂಡಿತ್ ರಾಜೀವ ತಾರಾನಾಥ್ ಅವರಿಗೆ ನಮನ' ಶೀರ್ಷಿಕೆಯಡಿ ಭಾನುವಾರ ಹಮ್ಮಿಕೊಂಡಿದ್ದ ಸಂಸ್ಮರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಂಗೀತ ಎನ್ನುವುದು ಅವರಿಗೆ ಸಾಮಾಜಿಕ ಋಣದ ಆಚರಣೆಯಾಗಿದ್ದ ಹಿನ್ನೆಲೆಯಲ್ಲಿ ಸಾಮಾಜಿಕ ಬಾಂಧವ್ಯಕ್ಕೆ ಧಕ್ಕೆ ಉಂಟು ಮಾಡುವಂತಹ ಸನ್ನಿವೇಶಗಳನ್ನು ಅವರು ಸಹಿಸುತ್ತಿರಲಿಲ್ಲ. ಮಾನವೀಯ ಮೌಲ್ಯ ಬಿತ್ತುವ ಹಾಗೂ ಪರರ ಸುಖ ದುಃಖಗಳಿಗೆ ಸ್ಪಂದಿಸುವುದೇ ನೈಜ ಸಂಗೀತ ಎಂಬ ಉದಾತ್ತ ಚಿಂತನೆಯನ್ನು ರಾಜೀವ ತಾರಾನಾಥ್ ಹೊಂದಿದ್ದರು. ಯಾವುದೇ ವಿಷಯವನ್ನು ಸಂಗೀತದ ಜೊತೆಗೆ ಕೊಟ್ಟರೆ ಅದು ಮನಸ್ಸಿನಲ್ಲಿ ಉಳಿಯುತ್ತದೆ ಎಂಬುದು ಅವರ ನಂಬಿಕೆಯಾಗಿತ್ತು ಎಂದು ಸ್ಮರಿಸಿದರು.

'ಜೀವದ ಗೆಳೆಯ ಹೀಗಿದ್ದರು' ಕುರಿತು ಮಾತನಾಡಿದ ಸಾಹಿತಿ ಡಾ.ವಿಜಯಾ, 70ರ ದಶಕದಿಂದ ನಾನು ರಾಜೀವ ತಾರಾನಾಥ್ ಅವರೊಂದಿಗೆ ಒಡನಾಟ ಹೊಂದಿದ್ದೆ. ಅವರು ಸಂಗೀತ ಮಾತ್ರವಲ್ಲದೇ ಸಾಹಿತ್ಯ ಕೃಷಿಯಲ್ಲೂ ಸಮರ್ಥರಿದ್ದರು.



ಮೈಸೂರಿನ ಕಲಾಮಂದಿರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸರೋದ್ ಮಾಂತ್ರಿಕ ಪಂಡಿತ್ ರಾಜೀವ ತಾರಾನಾಥ್ ಸಂಸ್ಮರಣೆ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.

ಅವರದು ಧೀಮಂತ ವ್ಯಕ್ತಿತ್ವ. ಮೈಸೂರಿನಲ್ಲಿ ವಿಶ್ವ ಕನ್ನಡ ಸಮ್ಮೇಳನದ ಸಂಪೂರ್ಣ ಜವಾಬ್ದಾರಿ ವಹಿಸಿಕೊಂಡು ಯಶಸ್ವಿಗೊಳಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಬೃಂದಾವನದ ಕಾರಂಜಿಗೆ ಸಂಗೀತ ಸಂಯೋಜನೆ ಮಾಡಿದವರು ಇವರೇ. ತಾವು ಇದ್ದ ಕಡೆ ಕಟ್ಟುವ ಕೆಲಸ ಮಾಡುತ್ತಿದ್ದ ಸ್ವಭಾವ ಅವರದು ಎಂದು ಹೇಳಿದರು.

ದೆಹಲಿಯಲ್ಲಿ ರಾಜೀವ ತಾರಾನಾಥ್ ಅವರು ಸರೋದ್ ವಾದನ ಕಾರ್ಯಕ್ರಮ ನೀಡುವಾಗ ಕೊನೆ ಹಂತದಲ್ಲಿ ಸರೋದ್ ವಾದ್ಯದ ತಂತಿಗಳು ಕಳಚಿ ಹೋದವು. ಆಗ ಅವರು ತಲೆ ತಗ್ಗಿಸಿ ಕಣ್ಣೀರು ಹಾಕುತ್ತಾರೆ. ಇದೇ ಸಂದರ್ಭದಲ್ಲಿ ಬಾಬರಿ ಮಸೀದಿ ಧ್ವಂಸ ಮಾಡಲಾಗಿರುತ್ತದೆ. ಅದು ಯಾವ ಸಂದೇಶವೋ ಗೊತ್ತಿಲ್ಲ. ಈ ಕ್ಷಣದಲ್ಲಿ ಅವರು ಬಿಕ್ಕಳಿಸಿ ಕಣ್ಣೀರು ಹಾಕಿದ್ದರು. ಇದನ್ನು ಅವರೇ ಸ್ವತಃ ನನ್ನೊಂದಿಗೆ ಹಂಚಿಕೊಂಡಿದ್ದರು. ತಳ ಸಮುದಾಯಗಳು ಹಾಗೂ ಮುಸ್ಲಿಂ ಸಮುದಾಯಗಳ ಬಗ್ಗೆ ಅತೀವ ಪ್ರೀತಿ, ಕಳಕಳಿ ಹೊಂದಿದ್ದರು ಎಂದು ನುಡಿದರು.

ಸಂಗೀತ ಯಾವಾಗಲೂ ವರ್ತಮಾನಕ್ಕೆ ಸ್ಪಂದಿಸಬೇಕು. ಆಯಾಯ ಸಂದರ್ಭದಲ್ಲಿನ ತಲ್ಲಣಗಳಿಗೆ ಪ್ರತಿಕ್ರಿಯೆ ನೀಡಬೇಕೆ ಹೊರತು ಅದರ ಉದ್ದೇಶ ಕೇವಲ ಮನರಂಜನೆಯಲ್ಲ ಎಂಬ ಶ್ರೇಷ್ಠ ಚಿಂತನೆ ಅವರದ್ದಾಗಿತ್ತು. ಗುಜರಾತ್ ಹತ್ಯಾಕಾಂಡ ಖಂಡಿಸಿ ಬೆಂಗಳೂರಿನಲ್ಲಿ ಆಯೋಜಿಸಿದ್ದ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಅವರು, ಲೋಕದಲ್ಲಿ ಯಾರೂ ಯಾರನ್ನೂ ಹಿಂಸೆ ಮಾಡಬಾರದು ಎಂಬ ಉದಾತ್ತ ಸಂದೇಶ ಕೊಟ್ಟಿದ್ದರು. ನನ್ನ ಮಕ್ಕಳ ಜೊತೆಯಲ್ಲಿ ಅವರಿಗೂ ಕೈ ತುತ್ತು ಹಾಕಿದ್ದೇನೆ. ನನಗೆ ಅವರು ಬದುಕುವುದನ್ನು ಕಲಿಸಿದರು ಎಂದು ಭಾವುಕರಾದರು.

'ಎರಡು ವಿಭಿನ್ನ ಧಾರೆಗಳು' ಕುರಿತು ವಿದ್ವಾನ್ ಟಿ.ಎಂ.ಕೃಷ್ಣ ಮಾತನಾಡಿ, ಸಮಾಜದ ತಲ್ಲಣಗಳಿಗೆ ನಮ್ಮ ರಾಗ, ಘರಾನಾ ಸ್ಪಂದಿಸಬೇಕು. ಅಂತೆಯೇ ಇದ್ದವರು ರಾಜೀವ ತಾರಾನಾಥ್. ಅವರು ತಮ್ಮ ಕುಟುಂಬ ಮತ್ತು ಅನುಭವದ ಹಿನ್ನೆಲೆಯಲ್ಲಿ ಶಾಸ್ತ್ರೀಯ ಸಂಗೀತ ಪ್ರಪಂಚಕ್ಕೆ ಹೊಸತನ ತಂದರು. ನ್ಯಾಯದ ಪರವಾಗಿ ವಿಮರ್ಶಾತ್ಮಕ ಬದುಕು ಮಾಡುವವರು ವ್ಯವಸ್ಥೆಯ ವಿರುದ್ಧ ಈಜುವುದು ಸಹಜ. ಅಂತೆಯೇ ಬದುಕಿದವರು ಪಂಡಿತ್ ರಾಜೀವ ತಾರಾನಾಥ ಎಂದು ಸ್ಮರಿಸಿದರು.

ತಬಲಾ ವಾದಕ ಪಂಡಿತ್ ನಯನ್ ಘೋಷ್ ಮಾತನಾಡಿ, ರಾಜೀವ ತಾರಾನಾಥ್ ಅವರೊಂದಿಗೆ 100ಕ್ಕೂ ಹೆಚ್ಚು ಸಂಗೀತ ಕಛೇರಿ ನೀಡಿದ್ದೇನೆ. ಅವರ ಹಾಗೂ ನನ್ನ ನಡುವೆ ವಯಸ್ಸಿನ ಅಂತರವಿದ್ದರೂ ಅವರು ನನ್ನೊಂದಿಗೆ ಸ್ನೇಹಿತರಂತೆ ಇದ್ದರು. ಅವರು ಬಹುಮುಖ ಪ್ರತಿಭೆ. ಅವರ ಸಂಗೀತ ಪಯಣ ಅದ್ಭುತ. ಸರೋದ್ ಸಂಗೀತದ ಸಮಷ್ಟಿ ಭಾವ ಅವರಿಗೆ ತಿಳಿದಿತ್ತು ಎಂದರು.

ಇದಕ್ಕೂ ಮುನ್ನ ರಾಜೀವ ತಾರಾನಾಥ್ ಸಂಗೀತ ಸಂಯೋಜನೆ ನೀಡಿರುವ 'ಕುರಿ ನಾಟಕ'ದ ಗೀತೆಗಳನ್ನು ರಂಗಾಯಣ ಮಾಜಿ ನಿರ್ದೇಶಕ ಜನಾರ್ಧನ್ (ಜನ್ನಿ) ಸಾದರಪಡಿಸಿದರು. ಪ್ರಾರಂಭದಲ್ಲಿ ರಾಜೀವ ತಾರಾನಾಥ್ ಅವರ ಕುರಿತಂತೆ ಅಂಶನ್ ಕುಮಾರ್ ಅವರ ನಿರ್ದೇಶನದ 'ಎ ಲೈಫ್ ಇನ್ ಮ್ಯೂಸಿಕ್' ಸಾಕ್ಷ್ಯಚಿತ್ರದ ತುಣುಕುಗಳನ್ನು ಪ್ರಸಾರ ಮಾಡಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಡಾ.ಧರಣಿದೇವಿ ಮಾಲಗತ್ತಿ ಅಧ್ಯಕ್ಷತೆ ವಹಿಸಿದ್ದರು. ಪ್ರೊ.ಕೃಷ್ಣ ಮನವಳ್ಳಿ ಕಾರ್ಯಕ್ರಮ ನಿರೂಪಿಸಿದರು.

ಕುರಿ ಕಾಯುತ್ತಿದ್ದ ಮಹಿಳೆ ಮಾಂಗಲ್ಯ ಸರ ಕದ್ದ ಖದೀಮರು

ದಾರಿ ಕೇಳುವ ನೆಪದಲ್ಲಿ ನಂಬರ್ ಪ್ಲೇಟ್ ಇಲ್ಲದ ಕಾರಲ್ಲಿ ಕಾರ್ಯಾಚರಣೆ

ಮೈಸೂರು, ಆ.11(ಎಸ್‌ಬಿಡಿ)- ಸಂಖ್ಯಾಫಲಕವಿಲ್ಲದ ಕಾರಿನಲ್ಲಿ ಬಂದು ಕುರಿ ಮೇಯಿಸುತ್ತಿದ್ದ ಮಹಿಳೆಯ ಚಿನ್ನದ ಮಾಂಗಲ್ಯ ಸರ ಕಿತ್ತುಕೊಂಡು ಹೋಗಿರುವ ಘಟನೆ ಮೈಸೂರು ತಾಲೂಕು, ಕೋಟೆಹುಂಡಿ ಗ್ರಾಮದ ಬಳಿ ಶನಿವಾರ ನಡೆದಿದೆ.

ಕೋಟೆಹುಂಡಿ ಗ್ರಾಮದ ಪ್ರೇಮಾ ಅವರು ಶನಿವಾರ ಮಧ್ಯಾಹ್ನ 3 ಗಂಟೆಯಲ್ಲಿ ಊರಿನ ಹೊರವಲಯದಲ್ಲಿ ಕುರಿ-ಮೇಕೆಗಳನ್ನು ಮೇಯಿಸುತ್ತಿದ್ದಾಗ ಹೆಚ್.ಡಿ.ಕೋಟೆ ರಸ್ತೆ ಕಡೆಯಿಂದ ಬಂದ ಬಿಳಿ ಬಣ್ಣದ ಕಾರು ಅವರ ಬಳಿ ನಿಂತಿದೆ. ಕಾರಿನಲ್ಲಿದ್ದವರು ಈ ರಸ್ತೆ ಯಾವ ಊರಿಗೆ ಹೋಗುತ್ತದೆ ಎಂದು ಕೇಳಿದ್ದಾರೆ. ಅವರ ಅನುಮಾನಾಸ್ಪದ ವರ್ತನೆ ಗಮನಿಸಿದ ಪ್ರೇಮಾ ನೀವು ರಸ್ತೆ ಗೊತ್ತಿಲ್ಲದೆ ಬಂದಿದ್ದೀರಾ? ಎಂದು ಪ್ರಶ್ನಿಸಿದ್ದಾರೆ.

ಬಳಿಕ ಅಲ್ಲಿಂದ ಹೊರಟ ಕಾರು ಸ್ವಲ್ಪ ದೂರ ಮುಂದಕ್ಕೆ ಹೋಗಿ ನಿಂತಿದೆ. ಅಲ್ಲಿ ಓರ್ವ ಇಳಿದುಕೊಂಡಿದ್ದು, ಮತ್ತಿಬ್ಬರು ಕಾರಿನಲ್ಲೇ ರಿವರ್ಸ್ ಬಂದು ಪ್ರೇಮಾ ಬಳಿ ನಿಲ್ಲಿಸಿದ್ದಾರೆ. ಆಗ ಮತ್ತೋರ್ವ ಕಾರಿನಿಂದಿಳಿದು ಏಕಾಏಕಿ ಪ್ರೇಮಾ ಅವರ ಮಾಂಗಲ್ಯ ಸರ ಕಿತ್ತುಕೊಳ್ಳಲು ಪ್ರಯತ್ನಿಸಿದ್ದಾನೆ. ಪ್ರತಿರೋಧ ತೋರಿದ ಅವರು ಎರಡೂ ಕೈಗಳಿಂದ ಸರವನ್ನು ಬಿಗಿಯಾಗಿ ಹಿಡಿದುಕೊಂಡಿದ್ದಾರೆ. ಪರಿಣಾಮ ಸರ ತುಂಡಾಗಿ ಸ್ವಲ್ಪ ಭಾಗ ಕಳ್ಳನ ಕೈಸೇರಿದೆ. ತಕ್ಷಣ ಮೂವರೂ ಕಾರಿನಲ್ಲಿ ಪರಾರಿಯಾಗಿದ್ದಾರೆ.

ಈ ಸಂಬಂಧ ಜಯಪುರ ಪೊಲೀಸ್ ಠಾಣೆಗೆ ದೂರು ನೀಡಿರುವ ಪ್ರೇಮಾ, ಸುಮಾರು 80 ಸಾವಿರ ರೂ. ಮೌಲ್ಯದ 20 ಗ್ರಾಂ ಚಿನ್ನದ ಸರವನ್ನು ಕಳ್ಳರು ಕಿತ್ತುಕೊಂಡು ಹೋಗಿದ್ದಾಗಿ ತಿಳಿಸಿದ್ದಾರೆ.



PUBLIC NOTICE

My clients have agreed to purchase, the below mentioned Schedule Property from (1) Smt. C. Uma @ Uma, daughter of Late P.R. Chandrashekar and Late Subbalakshmi and wife of Sri. B.S. Ashok Kumar, aged about 59 years, residing at No, 12, 3rd Block, Andrahalli Main Road, D Group Employees Layout, Lingadeeranahalli, Viswadeenam, Yashwanthpura, Bengaluru-560091, (2) Smt. P. C. Usha, daughter of Late P.R. Chandrashekar and Late Subbalakshmi aged about 56 years, residing at EWS 191, 1st Stage, Near Water tank, Kuvempunagar, Mysore- 570023, (3) Smt. Suma P.C., daughter of Late P.R. Chandrashekar and Late Subbalakshmi and wife of Sri. Harish P.M. and aged about 50 years, residing at No. 6, 7th Main, 3rd Cross, Javaregowda Park, Saraswathipuram, Mysore- 570009. The Owners have represented that they are the absolute joint owners of the Schedule Property having absolute, clear, marketable right, title and interest therein and that there are no other person/s having any right, claim over the Schedule Property apart from them. The Owners have represented that they have not entered into any Agreement for Sale/ MoU/ Development Agreement/Sale Deed with any other person/s with regard to the Schedule Property. Any person/s having any objection or claims shall with documentary evidence lodge their objections/ claims within 7 (seven) days from the date of this notice to my office at situated at No. 1063/71A, F-3A, 2nd Main, 8th Cross, Vidyaranyapuram, Mysore- 570 008, failing which my client shall proceed with the above-mentioned transaction, without any reference and regard to such purported claim, interest, which shall be deemed to waive off for all claims and purposes.

SCHEDULE PROPERTY

All that piece and parcel of House Property bearing EWS No.191 KHB, situated at Jayanagar Thonachi Koppal I Phase Extension (JT Koppal I Stage), Kuvempunagar, Chamaraja Mohalla, Mysore, measuring East to West: 20 Feet (6.096012 Meters) and North to South: 45 Feet (13.716027 Meters), totally measuring 900 Square Feet (83.613070 Square Meters), bearing PID No. 17-3-581-186 (Old No. 191 EWS) with a built up area of 27.8709 square meters constructed with Red oxide flooring and Mangalore tiles ceiling. The Building has electricity, water and sanitary connections. EAST BY: Property No. 192 ; WEST BY: Property No. 190 ; NORTH BY: Road ; SOUTH BY: Property No. 208.

Sd/- Smt. Sri Laxmi Y.S., Advocate, KAR/627/2016, Address: No. 1063/71A, F-3A, 2nd Main, 8th Cross, Vidyaranyapuram, Mysore-570 008.
Mob: 9743476614.
Place: Mysore, Date: 11-08-2024

ಬೆಳಗಾವಿ ಬಳಿ ರೆಸಾರ್ಟ್‌ನಲ್ಲಿ ಬಿಜೆಪಿ ಅತೃಪ್ತ ನಾಯಕರ ಸಭೆ

ಮಾಜಿ ಸಂಸದ ಪ್ರತಾಪ್ ಸಿಂಹ ಕೂಡ ಭಾಗಿ



ರೆಸಾರ್ಟ್‌ನಲ್ಲಿ ಸಭೆ ನಡೆಸುತ್ತಿರುವ ಬಿಜೆಪಿ ಅತೃಪ್ತ ನಾಯಕರು

ಬೆಳಗಾವಿ, ಆ.11- ಬೆಳಗಾವಿ ತಾಲೂಕಿನ ಕಿಣಯೇ ಗ್ರಾಮದ ಬಳಿಯ ರೆಸಾರ್ಟ್‌ನಲ್ಲಿ ಬಿಜೆಪಿ ಅತೃಪ್ತ ನಾಯಕರು ಭಾನುವಾರ ಸಭೆ ನಡೆಸಿದರು.

ಶಾಸಕರಾದ ರಮೇಶ ಜಾರಕಿಹೊಳಿ, ಬಸನಗೌಡ ಪಾಟೀಲ ಯತ್ನಾಳ್, ಮಾಜಿ ಸಂಸದರಾದ ಅಣ್ಣಾಸಾಹೇಬ ಜೊಲ್ಲೆ, ಪ್ರತಾಪ ಸಿಂಹ, ಜಿ.ಎಂ.ಸಿದ್ಧೇಶ್ವರ, ಮಾಜಿ ಸಚಿವರಾದ ಅರವಿಂದ ಲಿಂಬಾವಳಿ, ಕುಮಾರ ಬಂಗಾರಪ್ಪ ಮತ್ತಿತರರು ಪಾಲ್ಗೊಂಡಿದ್ದರು.

'ಮುಡಾ' ಹಗರಣ ವಿರೋಧಿಸಿ ಬಿಜೆಪಿ ನಾಯಕರು ಬೆಂಗಳೂರಿನಿಂದ ಮೈಸೂರಿನವರೆಗೆ ನಡೆಸಿದ ಪಾದಯಾತ್ರೆ ಮುಗಿದ ಬೆನ್ನಲ್ಲೇ, ಈ ಸಭೆ ನಡೆಸಿರುವುದು ಬಿಜೆಪಿ ವಲಯದಲ್ಲಿ ಸಂಚಲನ ಮೂಡಿಸಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮತ್ತು ಬಿ.ಎಸ್. ಯಡಿಯೂರಪ್ಪ ವಿರುದ್ಧ ಅಸಮಾಧಾನಗೊಂಡ ನಾಯಕರು ಈ ಸಭೆ ನಡೆಸಿದ್ದಾರೆ. ಇಬ್ಬರೂ ನಾಯಕರ ವಿರುದ್ಧ ಪಕ್ಷದ ಹೈಕಮಾಂಡ್‌ಗೆ ದೂರು ನೀಡಲು ಯೋಜಿಸಿದ್ದಾರೆ ಎಂಬ ಮಾಹಿತಿ ಹರಿದಾಡಿತು. ಆದರೆ, ಸಭೆ ಮುಗಿದ ನಂತರ ಹೊರಬಂದ ನಾಯಕರು, 'ಇದು ಪಕ್ಷದ ಭಿನ್ನಮತೀಯ ಚಟುವಟಿಕೆಯಲ್ಲ' ಎಂದರು.

ಬಳ್ಳಾರಿಯವರೆಗೆ ಪಾದಯಾತ್ರೆಗೆ ನಿರ್ಧಾರ: ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ, ಪರಿಶಿಷ್ಟರ ಕಲ್ಯಾಣಕ್ಕಾಗಿ ಮೀಸಲಿಟ್ಟ ಅನುದಾನ ದುರ್ಬಳಕೆಗೆ ಸಂಬಂಧಿಸಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಾಗಲಕೋಟೆ ಜಿಲ್ಲೆಯ ಕೂಡಲಸಂಗಮದಿಂದ ಬಳ್ಳಾರಿಯವರೆಗೆ ಗಣೇಶ ಚತುರ್ಥಿ ನಂತರ ಪಾದಯಾತ್ರೆ ನಡೆಸಲು ಬಿಜೆಪಿ ನಾಯಕರು ನಿರ್ಧರಿಸಿದರು.

ಪಾದಯಾತ್ರೆಗೂ ಮುನ್ನ, ಪಕ್ಷದ ಹೈಕಮಾಂಡ್ ಜತೆ ಒಂದು ಸುತ್ತಿನ ಮಾತುಕತೆ ನಡೆಸೋಣ. ಬೆಂಗಳೂರಿನಲ್ಲಿ ಇನ್ನಷ್ಟು ನಾಯಕರು ಸೇರಿಕೊಂಡು ಮತ್ತೊಂದು ಹಂತದ ಸಭೆ ಮಾಡೋಣ ಎಂದರು.


ಮುಡಾ ವಿರುದ್ಧ ನಡೆದ ಪಾದಯಾತ್ರೆ ಮೈಸೂರಿಗೆ ಮಾತ್ರ ಸೀಮಿತವಾದದ್ದು. ಆದರೆ, ನಾವು ಮಾಡುತ್ತಿರುವ ಹೋರಾಟ ಇಡೀ ರಾಜ್ಯಕ್ಕೆ ಸಂಬಂಧಿಸಿದ್ದು. ಇದಕ್ಕೆ ಕೇಂದ್ರದ ನಾಯಕರನ್ನು ಆಹ್ವಾನಿಸಲು ಚಿಂತನೆ ನಡೆಸಿದ್ದೇವೆ ಎಂದು ಹೇಳಿದರು.

ಇದು ಯಾರೋ ಒಬ್ಬರನ್ನು ಹೀರೋ ಮಾಡಲು ಮಾಡುತ್ತಿರುವ ಹೋರಾಟವಲ್ಲ' ಎಂದು ಯತ್ನಾಳ ಹೇಳುವ ಮೂಲಕ ವಿಜಯೇಂದ್ರ ಅವರನ್ನು ಪರೋಕ್ಷವಾಗಿ ಟೀಕಿಸಿದರು.


ವಿದೇಶ ಪ್ರವಾಸ



ಉನ್ನತ್ತ ವಿದ್ಯಾಭ್ಯಾಸಕ್ಕಾಗಿ ಅಮೇರಿಕಾಗೆ ಪ್ರವಾಸ
ಇವರ ಪ್ರವಾಸ ಸುಖಕರವಾಗಿರಲಿ ಎಂದು ಶುಭಕೋರುವವರು
ಎಮ್.ಐ.ಕೋರಿ ಮತ್ತು ಆರ್.ಎಮ್.ಕೋರಿ (ಆರ್.ಎಂ.ಪಿ) ಮತ್ತು ಕೋರಿ ಕುಟುಂಬ, ಬೆಳಗಾವಿ, ಕೆ.ವಿ.ಶಂಕರಮ್ಮ ಮೈಸೂರು.
ರಾಹುಲ್ ಕೋರಿ



ಸಾ.ರಾ.ಮಹೇಶ್‌ಗೆ ಹುಟ್ಟುಹಬ್ಬದ ಶುಭಾಶಯ...



ಮಾಜಿ ಸಚಿವರೂ ಆದ ಜೆಡಿಎಸ್ ಮುಖಂಡ ಸಾ.ರಾ.ಮಹೇಶ್ ಅವರಿಗೆ ಮಾಜಿ ಮಹಾಪೌರ ಸಂದೇಶ್‌ಸ್ವಾಮಿ ಹುಟ್ಟುಹಬ್ಬದ ಶುಭ ಕೋರಿದರು. ಈ ವೇಳೆ ಮಾಜಿ ಮೇಯರ್ ರವಿಕುಮಾರ್, ಪಾಲಿಕೆ ಮಾಜಿ ಸದಸ್ಯ ಎಸ್.ಬಿ.ಎಂ.ಮಂಜು ಇದ್ದರು.

ಪಿಎಚ್.ಡಿ ಪದವಿ



ಮೈಸೂರು, ಆ.11- ಡಾ. ಎಂ. ಡ್ಯಾನಿಯಲ್ ಅವರ ಮಾರ್ಗ ದರ್ಶನದಲ್ಲಿ ಜಯಶೀಲಾ ಅವರು ತತ್ತ್ವಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಲಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವ (ಪರೀಕ್ಷಾಂಗ) ಸಚಿವರು ತಿಳಿಸಿದ್ದಾರೆ






ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮತಿ ಸಣ್ಣಮ್ಮ ನವರು
ರಾತ್ರಿ 9.30ಕ್ಕೆ ಕಂಸಾಳೆ ಪದ ಏರ್ಪಡಿಸಲಾಗಿದೆ.

ಇವರು ದಿ: 02.08.2024 ಶುಕ್ರವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ: 12.08.2024 ಸೋಮವಾರ ಮಧ್ಯಾಹ್ನ 1.30ಕ್ಕೆ ಮೃತರ ಸ್ವಗೃಹ ಕೆಂಪಿಸಿದ್ದನ ಹುಂಡಿ ಗ್ರಾಮ|| ಛತ್ರ ಹೋ|| ನಂಜನಗೂಡು ತಾ|| ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಮಹೇಶ ಸಹಾಯಕ ನಿರ್ದೇಶಕರು, ಭೂ ಮಾಪನ ಇಲಾಖೆ ಕುಟುಂಬವರ್ಗದವರು ಹಾಗೂ ಕೆಂಪಿಸಿದ್ದನಹುಂಡಿ ಗ್ರಾಮಸ್ಥರು.



ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಕೃಷಿ ಇಲಾಖೆ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಪಿರಿಯಾಪಟ್ಟಣ

ದೂರವಾಣಿ : 08223-274205 , Email: adappatna@rediffmail.com

ಸಂಖ್ಯೆ: ಸಕೃನಿ/ಪಿ.ಪ/ಲೆಕ್ಕ-2/ವಾ.ಬಾ/ಟೆಂ.ಪ್ರ/2024-25 ದಿನಾಂಕ: 07.08.2024

ಟೆಂಡರ್ ಪ್ರಕಟಣೆ

2024-25 ನೇ ಸಾಲಿಗೆ ಸಹಾಯಕ ಕೃಷಿ ನಿರ್ದೇಶಕರು, ಪಿರಿಯಾಪಟ್ಟಣ ರವರ ಕಛೇರಿಯ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಇಲಾಖಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಂಬಂಧ ಪ್ರವಾಸ ಕೈಗೊಳ್ಳಲು ಹೊರಗುತ್ತಿಗೆ ಆಧಾ ರದ ಮೇಲೆ ಒಂದು ವಾಹನದ (ಕಾರು) ಅವಶ್ಯಕತೆ ಇದ್ದು, ಅಧಿಕೃತ (ನೋಂದಾಯಿತ) ಟ್ರಾವೆಲ್ ಏಜೆನ್ಸಿಗಳಿಂದ ವಾಹನ ಸರಬರಾಜು ಮಾಡಬಯಸುವ ಟೆಂಡರ್‌ದಾರರು (ಟ್ರಾವೆಲ್ ಏಜೆನ್ಸಿಗಳು) ಮೊಹರು ಮಾಡಿದ ಲಕೋಟೆಯಲ್ಲಿ ದರಪಟ್ಟಿಯನ್ನು ನಿಬಂಧನೆಗಳಿಗೆ ಒಳಪಟ್ಟು ಆಹ್ವಾನಿಸಲಾಗಿದೆ.

1	ಟೆಂಡರ್ ಅರ್ಜಿ ಬೆಲೆ	ರೂ. 100/-
2	ಟೆಂಡರ್ ಅರ್ಜಿ ವಿತರಿಸುವ ದಿನಾಂಕ	14-08-2024 ರಿಂದ 28-08-2024 ರವರೆಗೆ ಸಂಜೆ 3.00 ಗಂಟೆಯೊಳಗೆ
3	ಭರ್ತಿ ಮಾಡಿದ ಟೆಂಡರ್ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ	28-08-2024 ಸಂಜೆ 3.00 ಗಂಟೆಯೊಳಗೆ
4	ಟೆಂಡರ್ ತೆರೆಯುವ ದಿನಾಂಕ	28-08-2024 ಸಂಜೆ 4.00 ಗಂಟೆಗೆ
5	ಟೆಂಡರ್ ತೆರೆಯುವ ಸ್ಥಳ	ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಪಿರಿಯಾಪಟ್ಟಣ .
6	ಇ.ಎಂ.ಡಿ. ಮೊಬಲಗು (ಡಿ.ಡಿ) (ಒಂದು ವಾಹನಕ್ಕೆ)	ರೂ. 8500/-
7	ಡಿ.ಡಿ. ತೆಗೆಯಬೇಕಾದ ವಿಳಾಸ	ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಪಿರಿಯಾಪಟ್ಟಣ

ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಪಿರಿಯಾಪಟ್ಟಣ ಇವರ ಹೆಸರಿನಲ್ಲಿ ರೂ. 100/- ನೀಡಿ ಟೆಂಡರ್ ಅರ್ಜಿಯನ್ನು ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಪಿರಿಯಾಪಟ್ಟಣ ಇವರಿಂದ ಪಡೆಯಬಹುದು. ಟೆಂಡರಿನ ಷರತ್ತುಗಳ ಇನ್ನಿತರೆ ವಿವರಗಳನ್ನು ಈ ಕಛೇರಿ ವತಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/- ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಪಿರಿಯಾಪಟ್ಟಣ



ಬಿಟ್ಟಂಗಾಲದಲ್ಲಿ ಸಂಭ್ರಮದ ಕೆಸರುಗದ್ದೆ ಕ್ರೀಡಾಕೂಟ



ಬಿಟ್ಟಂಗಾಲದಲ್ಲಿ ನಡೆದ ಕೆಸರು ಗದ್ದೆ ಕ್ರೀಡಾಕೂಟದಲ್ಲಿ ಗಮನ ಸೆಳೆದ ಹಗ್ಗಜಗ್ಗಾಟ ಸ್ಪರ್ಧೆ.

ಮಡಿಕೇರಿ, ಆ.11–ಕೊಡಗಿನ ಕೃಷಿಯೊಂದಿಗೆ ಸಂಸ್ಕೃತಿ ಮಿಡಿತ ಹೊಂದಿದ್ದು, ಮರೆಯಾಗುತ್ತಿರುವ ಕೃಷಿ ಪರಂಪರೆ ಬಗ್ಗೆ ಅಭಿಮಾನ ಮೂಡಿಸುವುದು ಮತ್ತು ಕೊಡವ ಸಮುದಾಯಗಳ ಬಾಂಧವ್ಯ ಬೆಸೆಯುವ ನಿಟ್ಟಿನಲ್ಲಿ ಆಯೋಜಿಸಿದ್ದ ಕೆಸರುಗದ್ದೆ ಕ್ರೀಡಾಕೂಟ ಬಿಟ್ಟಂಗಾಲದಲ್ಲಿ ಸಂಭ್ರಮದಿಂದ ನಡೆಯಿತು.

ಜಬ್ಬೂಮಿ ಸಂಘಟನೆ, ರೂಟ್ಸ್ ಆಫ್ ಕೊಡಗು ಹಾಗೂ ವಿವಿಧ ಸಂಘಟನೆಗಳ ಜಂಟಿ ಆಶ್ರಯದಲ್ಲಿ ಬಿಟ್ಟಂಗಾಲ ಗ್ರಾಮದ ನಾಯಡ ಕುಟುಂಬ ಹಾಗೂ ಮುರುವಂಡ ಮಿಥುನ್ ಅಣ್ಣಯ್ಯ ಹಾಗೂ ಪೊನ್ನಕಚ್ಚಿರ ಪುನೀತ್ ಅವರ ಗದ್ದೆಯಲ್ಲಿ ನಡೆದ ಕ್ರೀಡಾಕೂಟದಲ್ಲಿ ನೂರಾರು ಕಿರಿಯರು, ಹಿರಿಯರು ಭಾಗವಹಿಸಿ, ಪ್ರೇಕ್ಷಕರ ಪ್ರೋತ್ಸಾಹದೊಂದಿಗೆ ಕೆಸರು ಗದ್ದೆಯಲ್ಲಿ ಎದ್ದು, ಬಿದ್ದು ಕ್ರೀಡಾ ಉತ್ಸಾಹ ಪ್ರದರ್ಶಿಸಿದರು.

ನಾಟಿ ಸ್ಪರ್ಧೆಯಲ್ಲಿ 6 ವರ್ಷದ ಮಕ್ಕಳಿಂದ ಹಿಡಿದು ಹಿರಿಯ ನಾಗರಿಕರು ಭಾಗವಹಿಸಿ ಸಂಭ್ರಮಿಸಿದರು. ಕಾರ್ಯಕ್ರಮದ ಆರಂಭದಲ್ಲಿ ಸಾಂಪ್ರದಾಯಿಕವಾಗಿ ಗೆಜ್ಜೆತಂಡ್ ಎದುರು ಪುಡಿಯೊಕ್ಕಡ ಹರೀಶ್ ಮೂಲಕ 'ತಪ್ಪಡ್ಕ' ಕಟ್ಟಿ ಕಾರ್ಯಕ್ರಮದ ಯಶಸ್ಸು, ಕೊಡಗಿನ ಪ್ರಕೃತಿ, ಜೀವಜಲ, ಪರಂಪರೆಯ ಗತವೈಭವ ಮರುಕಳಿಸಿ, ಅದರ ಸಂರಕ್ಷಣೆಯಾಗಲಿ ಎಂದು ಪ್ರಾರ್ಥಿಸಲಾಯಿತು.

ಮಹಿಳೆಯರು, ಪುರುಷರು, ಶಾಲಾ ಮಕ್ಕಳಿಗೆ ಹಗ್ಗಜಗ್ಗಾಟ, ಕೆಸರುಗದ್ದೆ ಓಟ, ನಡಿಗೆ, ಕೈಪ್ರಳಿ ಹಾಗೂ ಕೈಕಣೆ ನಡಿಗೆ ಗಮನ ಸೆಳೆಯಿತು. ವಿಶೇಷವಾಗಿ ವಿರಾಜಪೇಟೆ ಪ್ರಗತಿ ಶಾಲಾ ಮಕ್ಕಳಿಂದ ಪ್ರಾಯೋಗಿಕ ನಾಟಿ ಮಾಡಲಾಯಿತು. ಜಿಲ್ಲೆಯ ವಿವಿಧ ಶಾಲಾ ಹಾಗೂ ಇತರ ಭಾಗಗಳಿಂದ ಆಗಮಿಸಿದ ಕ್ರೀಡಾ ಸಕ್ತರು ಕ್ರೀಡಾಕೂಟದಲ್ಲಿ ಭಾಗವಹಿಸಿದ್ದರು.

ಪುಚ್ಚಿಮಂಡ ಬಬ್ಲು ಹಾಗೂ ಮಾಚೆಟ್ಟಿರ ಸುನಿಲ್ ತಂಡ ಕೋವಿಯಲ್ಲಿ 12 ಸುತ್ತು ಗುಂಡು ಹಾರಿಸುವ ಮೂಲಕ ಕ್ರೀಡಾಕೂಟಕ್ಕೆ ಚಾಲನೆ ನೀಡಿತು. ನಾಯಡ ಶ್ಯಾಮ್ ಸೋಮಣ್ಣ, ಜಬ್ಬೂಮಿ ಸಂಘಟನೆ ಮತ್ತು ರೂಟ್ಸ್ ಆಫ್ ಕೊಡಗು ಪ್ರಮುಖರು ನಾಟಿ ಸ್ಪರ್ಧೆಗೆ ಚಾಲನೆ ನೀಡಿದರು. ಇದೇ ವೇಳೆ ಸತತವಾಗಿ ಭತ್ತದ ಕೃಷಿ ಮಾಡುತ್ತಿರುವ ಬುಟ್ಟಿಯಂಡ ಪಟ್ಟು ಅಯ್ಯಪ್ಪ, ಬುಟ್ಟಿಯಂಡ ಚಿಮ್ಮಿ ಪೂಣಚ್ಚ, ಪುಚ್ಚಿಮಂಡ ಈಶ್ವರ ಮುತ್ತಪ್ಪ, ಬೊಪ್ಪಂಡ ರವಿ, ಪೊನ್ನಕಚ್ಚಿರ ಕುಶ ಬಿದ್ದಪ್ಪ, ಕುಪ್ಪಂಡ ಉತ್ತಯ್ಯ ಅವರನ್ನು ಸನ್ಮಾನಿಸಲಾಯಿತು.

ಜಬ್ಬೂಮಿ ಸಂಚಾಲಕ ಚೊಟ್ಟೆಕ್‌ಮಾಡ ರಾಜೀವ್ ಬೋಪಯ್ಯ, ಮಚ್ಚಮಾಡ ಅನೀಶ್ ಮಾದಪ್ಪ ಮಾಚಂಗಡ ಸಚಿನ್, ಉಳುವಂಗಡ ಲೋಹಿತ್ ಭೀಮಯ್ಯ, ಮಲ್ಲಪನೆರ ವಿನು ಚಿಣ್ಣಪ್ಪ, ಪಾಲೆಂಗಡ ಅಮಿತ್ ಭೀಮಯ್ಯ, ಗುಡಿಯಂಗಡ ನಿಖಿಲ್, ಚೇಂದಂಡ ಶಮ್ಮಿ ಮಾದಯ್ಯ, ಅಚ್ಚಾಂಡಿರ ಕುಶಾಲಪ್ಪ, ಅಪ್ಪಂಡೇರಂಡ ಯಶ್ವತ್, ಸುನಿಲ್, ಉಪಸ್ಥಿತರಿದ್ದರು.

ಕಗ್ಗೋಡ್ಲುವಿನಲ್ಲಿ ಕೆಸರು ಗದ್ದೆ ಓಟದ ಸ್ಪರ್ಧೆ



ಕಗ್ಗೋಡ್ಲುವಿನಲ್ಲಿ ಏರ್ಪಡಿಸಿದ್ದ ಕೆಸರು ಗದ್ದೆ ಓಟದ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಪ್ರೌಢಶಾಲಾ ವಿದ್ಯಾರ್ಥಿಗಳು.

ಮಡಿಕೇರಿ, ಆ.11–ಗ್ರಾಮೀಣ ಕ್ರೀಡಾ ಕೂಟವಾದ ರಾಜ್ಯ ಮಟ್ಟದ ಕೆಸರು ಗದ್ದೆ ಓಟದ ಸ್ಪರ್ಧೆ ಸಮೀಪ ಕಗ್ಗೋಡ್ಲುವಿನಲ್ಲಿ ಸಂಭ್ರಮದಿಂದ ನಡೆಯಿತು.

ಜಿಲ್ಲಾ ಪಂಚಾಯಿತಿ, ಜಿಲ್ಲಾಡಳಿತ, ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಯೂತ್ ಹಾಸ್ಟೆಲ್ ಅಸೋಸಿಯೇಶನ್ ಆಫ್ ಇಂಡಿಯಾದ ಮಡಿಕೇರಿ ಘಟಕ, ಕೊಡಗು ಜಿಲ್ಲಾ, ವಿರಾಜಪೇಟೆ ಮತ್ತು ಸೋಮವಾರಪೇಟೆ ತಾಲೂಕು ಯುವ ಒಕ್ಕೂಟ ಹಾಗೂ ಕಗ್ಗೊಡ್ಲು ಕಾವೇರಿ ಯುವಕ ಸಂಘದ ಸಂಯುಕ್ತಾಶ್ರಯದಲ್ಲಿ ಕಗ್ಗೋಡ್ಲುವಿನ ದಿವಂಗತ ಸಿ.ಡಿ. ಬೋಪಯ್ಯ ಅವರ ಗದ್ದೆಯಲ್ಲಿ ಓಟದ ಸ್ಪರ್ಧೆ ಆಯೋಜಿಸಲಾಗಿತ್ತು.

ಪುರುಷ ಮತ್ತು ಮಹಿಳೆಯರ ಹಗ್ಗಜಗ್ಗಾಟ, ಪುರುಷರ ವಾಲಿಬಾಲ್, ಮಹಿಳೆಯರು, ಪ್ರೌಢಶಾಲಾ ಬಾಲಕ–ಬಾಲಕಿಯರ ಹಗ್ಗಜಗ್ಗಾಟ, ನಾಟಿ ಸ್ಪರ್ಧೆ ಏರ್ಪಡಿಸಲಾಗಿತ್ತು. ಜಿಲ್ಲೆಯ ವಿವಿಧ ಶಾಲಾ ವಿದ್ಯಾರ್ಥಿಗಳು ಕ್ರೀಡಾಕೂಟದಲ್ಲಿ ಸಂಭ್ರಮಿಸಿದರು. ಹಗ್ಗಜಗ್ಗಾಟ ಸ್ಪರ್ಧೆ ಗಮನ ಸೆಳೆಯಿತು.

ಕ್ರೀಡಾ ಇಲಾಖೆ ಅಧಿಕಾರಿ ವಿಸ್ಮಯಿ, ನೆಹರು ಯುವ ಕೇಂದ್ರದ ಅಧಿಕಾರಿ ಕೆ.ಟಿ.ಕೆಉಲ್ಲಾಸ್ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು. ಜಿಲ್ಲಾ ಯುವ ಒಕ್ಕೂಟದ ಅಧ್ಯಕ್ಷ ಪಿ.ಪಿ.ಸುಕುಮಾರ್, ತಾಲೂಕು ಅಧ್ಯಕ್ಷ ಬಾಳಾಡಿ ದಿಲೀಪ್ ಕುಮಾರ್, ಹಾಕತ್ತೂರು ಗ್ರಾಮ ಸದಸ್ಯ ಪೊನ್ನಚ್ಚನ ಲವಕುಮಾರ್, ಯೂತ್ ಹಾಸ್ಟೆಲ್ ಅಧ್ಯಕ್ಷ ಐಯ್ಯಣ್ಣ, ಪ್ರಮುಖರಾದ ರಾಜೇಶರ್, ಮಡಿಕೇರಿ, ವಿರಾಜಪೇಟೆ, ಸೋಮವಾರಪೇಟೆ ತಾಲೂಕು ಯುವ ಒಕ್ಕೂಟದ ಪದಾಧಿಕಾರಿಗಳು ಮತ್ತಿತರರು ಭಾಗವಹಿಸಿದ್ದರು.

ಬುದ್ಧಿವಂತಿಕೆಯಿಂದ ಸರ್ವತೋಮುಖ ಬೆಳವಣಿಗೆ



ವಿರಾಜಪೇಟೆ ಸರ್ಕಾರಿ ಪಪೂ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಾರ್ವಜನಿಕ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕಿ ಕೆ.ಮಂಜುಳಾ ಅವರನ್ನು ಸನ್ಮಾನಿಸಲಾಯಿತು.

ವಿರಾಜಪೇಟೆ, ಆ.11–ಬುದ್ಧಿವಂತಿಕೆಯಿಂದ ವ್ಯಕ್ತಿಯ ಸರ್ವತೋಮುಖ ಬೆಳವಣಿಗೆ ಸಾಧ್ಯ. ಆದ್ದರಿಂದ ವಿದ್ಯಾರ್ಥಿಗಳು ಮನಸನ್ನು ನಿಯಂತ್ರಣದಲ್ಲಿಟ್ಟುಕೊಂಡು ಶಿಕ್ಷಣದ ಕಡೆಗೆ ಹೆಚ್ಚು ಗಮನ ಹರಿಸಬೇಕು ಎಂದು ಸಾರ್ವಜನಿಕ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕಿ ಕೆ.ಮಂಜುಳಾ ಹೇಳಿದರು.

ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿ ಸಂಘ, ರಾಷ್ಟ್ರೀಯ ಸೇವಾ ಯೋಜನೆ, ರೋವರ್, ಮಾದಕ ದ್ರವ್ಯ ವಿರೋಧಿ ಘಟಕ ಹಾಗೂ ಇಎಲ್‌ಸಿ ಘಟಕಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲಾ ಕೆಲಸಗಳಿಗೂ ಸಮಯವೇ ಮುಖ್ಯ. ಪ್ರತಿಯೊಬ್ಬರಲ್ಲೂ ಒಂದೊಂದು ಪ್ರತಿಭೆ ಇರುತ್ತದೆ. ವಿದ್ಯಾರ್ಥಿಗಳು ಕಲಿಕೆಯಲ್ಲಿ ಚಲವಂತರಾಗಬೇಕು. ಮುಖ್ಯವಾಗಿ ಮಾದಕ ದ್ರವ್ಯದಿಂದ ದೂರವಿರಬೇಕು. ಸರ್ಕಾರದ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಂಡು ಉತ್ತಮ ಸಮಾಜ ಸೇವಕರಾಗಬೇಕು ಎಂದರು.

ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಚಿಲ್ಲವಂಡ ಕಾವೇರಪ್ಪ ಮಾತನಾಡಿ, ವಿದ್ಯಾರ್ಥಿಗಳು ಪಾಠದ ಕಡೆಗೆ ಹೆಚ್ಚು ಗಮನ ಹರಿಸುವ ಮೂಲಕ ಬದುಕು ರೂಪಿಸಿಕೊಳ್ಳಲು ಜೀವನದಲ್ಲಿ ಗುರಿ ಮುಟ್ಟುವಂತಾಗಬೇಕು. ವಿದ್ಯಾರ್ಥಿಗಳು ತಮ್ಮ ಪೋಷಕರ ಕಷ್ಟಗಳನ್ನು ಅರಿತು ಭವಿಷ್ಯ ರೂಪಿಸಿಕೊಳ್ಳಲು ಶ್ರಮಿಸಬೇಕು ಎಂದು ಸಲಹೆ ನೀಡಿದರು.

ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಪಿ.ಎಸ್.ಪೆರಿಗ್ರೀನ್ ಮಚಾಡೋ, ಪ್ರಾಂಶುಪಾಲೆ ಎನ್.ಕೆ.ಜೋತಿ, ಉಪನ್ಯಾಸಕ ಬಿ.ಎಂ.ನಳಂದ ಮಾತನಾಡಿದರು. ಇದೇ ವೇಳೆ ಕೆ.ಮಂಜುಳಾ ಅವರನ್ನು ಸನ್ಮಾನಿಸಲಾಯಿತು. ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು. ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಕಿರು ಕಾಣಿಕೆ ನೀಡಲಾಯಿತು. ಉಪನ್ಯಾಸಕರಾದ ಆರ್.ವಿನೋದ್ ಕುಮಾರ್, ಪಿ.ಎ.ಸುಜಾತ, ಪವಿತ್ರ ಕುಮಾರಿ, ಎಸ್.ಪಿ.ರೈಮಂಡ್ ಮತ್ತಿತರರಿದ್ದರು.

ದೈಹಿಕ, ಮಾನಸಿಕ ಆರೋಗ್ಯಕ್ಕೆ ಕ್ರೀಡೆ, ವ್ಯಾಯಾಮ ಸಹಕಾರಿ



ಕೆ.ಆರ್.ಪೇಟೆ ನಾಲ್ವಡಿ ಕೃಷ್ಣರಾಜ ಒಡೆಯರ್ ತಾಲೂಕು ಕ್ರೀಡಾಂಗಣದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಅಗ್ರಹಾರಬಾಚಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹಭಾಗಿತ್ವದಲ್ಲಿ ನಡೆದ ಕಸಬಾ ಹೋಬಳಿ–1 ಮಟ್ಟದ ಕ್ರೀಡಾಕೂಟವನ್ನು ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಕೆ.ಶಿವರಾಮೇಗೌಡ ಉದ್ಘಾಟಿಸಿದರು.

ಕೆ.ಆರ್.ಪೇಟೆ,ಆ.11– ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಕ್ರೀಡೆಗಳು ಹಾಗೂ ವ್ಯಾಯಾಮ ಸುಲಭವಾದ ಮಾರ್ಗಗಳಾಗಿವೆ. ಕ್ರೀಡೆ ಮತ್ತು ವ್ಯಾಯಾಮ ಸ್ಪರ್ಧಾತ್ಮಕ ಭಾವನೆ, ಸ್ನೇಹಪರ ಭಾವನೆ, ಶಿಸ್ತು, ಆತ್ಮಸ್ಥೈರ್ಯ, ಕೌಶಲ್ಯತೆಯನ್ನು ಮೂಡಿಸಿ ಶಾರೀರಿಕ ಸಂಪತ್ತನ್ನು ಹಾಗೂ ಬೌದ್ಧಿಕ ಸಾಮರ್ಥ್ಯವನ್ನು ವೃದ್ಧಿಸುತ್ತದೆ. ಹಾಗಾಗಿ ವಿದ್ಯಾರ್ಥಿಗಳು ಸೋಲು–ಗೆಲುವಿಗಿಂತ ಕ್ರೀಡೆಯಲ್ಲಿ ಭಾಗವಹಿಸುವುದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದು ಎಂದು ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಕೆ.ಶಿವರಾಮೇಗೌಡ ಹೇಳಿದರು.

ಅವರು ಪಟ್ಟಣದ ನಾಲ್ವಡಿ ಕೃಷ್ಣರಾಜ ಒಡೆಯರ್ ತಾಲೂಕು ಕ್ರೀಡಾಂಗಣದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಅಗ್ರಹಾರ ಬಾಚಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಇವರ ಸಹಭಾಗಿತ್ವದಲ್ಲಿ ನಡೆದ ಕಸಬಾ ಹೋಬಳಿ 1ನೇ ವೃತ್ತ ಮಟ್ಟದ ಕ್ರೀಡಾಕೂಟವನ್ನು ಉದ್ಘಾಟನೆ ಮಾಡಿ ಮಾತನಾಡಿದರು.

ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಪದ್ಮೇಶ್ ಮಾತನಾಡಿ ಶಾಲಾ–ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಪಠ್ಯಕ್ರಮಗಳು ಎಷ್ಟು ಮುಖ್ಯವೋ ಪಠ್ಯೇತರ ಚಟುವಟಿಕೆಗಳು ಕೂಡ ಅಷ್ಟೇ ಮುಖ್ಯ ಕ್ರೀಡೆಗಳು ಕೇವಲ ಕ್ರೀಡಾಪಟುವಾಗುವುದಕ್ಕೆ ಮಾತ್ರವಲ್ಲ, ನಮ್ಮ ಜೀವನವನ್ನು ಸುಂದರವಾಗಿ ರೂಪಿಸುವಲ್ಲಿ ವ್ಯಾಯಾಮ ಮತ್ತು ಕ್ರೀಡೆಗಳು ಅತ್ಯಂತ ಮಹತ್ವ ಪಾತ್ರ ವಹಿಸುತ್ತವೆ ಆದ್ದರಿಂದ ದೈಹಿಕ ಶಿಕ್ಷಣದಿಂದ ನಾಯಕತ್ವ, ಹೋರಾಟ ಮನೋಭಾವ, ಸೋಲನ್ನು ಎದುರಿಸುವ ಶಕ್ತಿ, ಮುಂತಾದ ಗುಣಗಳು ಬೆಳೆಯುತ್ತವೆ ಎಂದರು.

ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಪ್ರಭುಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಅಗ್ರಹಾರಬಾಚಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕ ಎ.ಹೆಚ್. ಯೋಗೇಶ್ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಕಾರ್ಯಕ್ರಮದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಚ್.ಆರ್. ಪೂರ್ಣಚಂದ್ರ ತೇಜಸ್ವಿ, ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಪದ್ಮೇಶ್, ತಾಲೂಕು ಶಿಕ್ಷಣ ಇಲಾಖಾ ನೌಕರರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಆರ್.ಕೆ.ರಮೇಶ್, ತಾಲೂಕು ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷ ಎಸ್.ಆರ್.ಆನಂದ ಕುಮಾರ್, ಪ್ರಧಾನ ಕಾರ್ಯದರ್ಶಿ ಪಿ.ಜೆ. ಕುಮಾರ್ ಸೇರಿದಂತೆ ಹಲವು ಶಾಲೆಗಳ ಮುಖ್ಯ ಶಿಕ್ಷಕರು, ದೈಹಿಕ ಶಿಕ್ಷಣ ಶಿಕ್ಷಕರು ಸೇರಿದಂತೆ ಕ್ರೀಡಾಪಟು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ರಾಜ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮಂಡ್ಯ,ಆ.11– ವಿಶ್ವ ಹಿರಿಯ ದಿನಾಚರಣೆ ಅಂಗವಾಗಿ ಹಿರಿಯ ನಾಗರಿಕರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವವರನ್ನು ಸನ್ಮಾನಿಸಲು ವಿವಿಧ ಕ್ಷೇತ್ರಗಳಾದ ಶಿಕ್ಷಣ, ಸಾಹಿತ್ಯ, ಕಲೆ, ಕಾನೂನು, ಪ್ರತಿಭೆ/ಕ್ರೀಡೆ ಹಾಗೂ ಹಿರಿಯ ನಾಗರಿಕರ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿರುವ 6 ಹಿರಿಯ ನಾಗರಿಕರಿಗೆ ವೈಯುಕ್ತಿಕ ಪ್ರಶಸ್ತಿ ಹಾಗೂ ಹಿರಿಯ ನಾಗರಿಕರ ಕ್ಷೇತ್ರದಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿರುವ 1 ಸಂಸ್ಥೆ ಸೇರಿ ಒಟ್ಟು 7 ರಾಜ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ ದೂ.ಸಂ: 08232–231090.

ಮುಟ್ಟನಹಳ್ಳಿ ಜಮೀನುಗಳಿಗೆ ನುಗ್ಗಿದ ಸೂಳೆಕೆರೆ ನೀರು



ಭಾರತೀನಗರ ಸಮೀಪದ ಮುಟ್ಟನಹಳ್ಳಿ ಗ್ರಾಮದ ಜಮೀನುಗಳಿಗೆ ನುಗ್ಗಿದ ಸೂಳೆಕೆರೆ ನೀರು.

ಭಾರತೀನಗರ.ಆ.11–ಸಮೀಪದ ಮುಟ್ಟನಹಳ್ಳಿ ಸೂಳೆಕೆರೆ ನಾಲೆ ತುಂಬಿದ್ದು ಸೂಳೆಕೆರೆ ದಕ್ಷಿಣ ನಾಲೆಯಿಂದ ಯಥೇಚ್ಚವಾಗಿ ನೀರು ಬಂದ ಕಾರಣ ಬಲ ಭಾಗದ ಕಾಲುವೆಗಳಲ್ಲಿ ಹೂಳು ತೆಗೆಯದೆ ಮತ್ತು ಗಿಡಗೆಂಟೆಗಳನ್ನು ತೆರವುಗೊಳಿಸದ ಕಾರಣ ಅಕ್ಕ–ಪಕ್ಷದ ಜಮೀನುಗಳಿಗೆ ನೀರು ನುಗ್ಗಿ ಬೆಳೆಗಳು ನಾಶಗೊಂಡಿದೆ.

ಸೂಳೆಕೆರೆ ಬಲಭಾಗದ ಕಾಲುವೆಯಲ್ಲಿ ನೀರು ಯಥೇಚ್ಚವಾಗಿ ಹರಿದು ಬರುತ್ತಿರುವುದರಿಂದ 3 ರಿಂದ 4 ಕಿ.ಮೀ ದೂರದವರೆಗೂ ನೀರು ಜಮೀನುಗಳಿಗೆ ನುಗ್ಗಿ ರಸ್ತೆ ಸಂಚಾರಕ್ಕೆ ಅಡ್ಡಿ ಉಂಟಾಗಿದೆ.

ಜಮೀನುಗಳಿಗೆ ನೀರು ನುಗ್ಗಿರುವುದರಿಂದ ಸಾಲ ಸೋಲ ಮಾಡಿ ಬೆಳೆಯಲಾಗಿದ್ದ ಬೆಳೆಗಳು ಕೊಚ್ಚಿಕೊಂಡು ಹೋಗಿವೆ. ಇದರಿಂದ ರೈತರು ತಲೆ ಮೇಲೆ ಕೈಹೊತ್ತು ಕುಳಿತುಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಈ ಕೂಡಲೇ ಬೆಳೆ ಪರಿಹಾರ ಕೊಡಬೇಕು. ಜೊತೆಗೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಇತ್ತ ಗಮನ ಹರಿಸುವಂತೆ ಗ್ರಾಮದ ಮುಖಂಡ ಚಂದ್ರಶೇಖರ್ ಒತ್ತಾಯಿಸಿದ್ದಾರೆ.

ಶಿವದೇವಯ್ಯ ನಿಧನ



ಪಾಂಡವಪುರ,ಆ.11– ತಾಲೂಕಿನ ಚಿಕ್ಕಾರಂಯ ಹಳ್ಳಿ ಗ್ರಾಮದ ನಿವಾಸಿ ಶಿವದೇವಯ್ಯ(78) ಭಾನುವಾರ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು – ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ಅವರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಿವೃತ್ತ ಶಿಕ್ಷಕರಿಗೆ ಆತ್ಮೀಯ ಬೀಳ್ಕೊಡುಗೆ...



ಪಾಂಡವಪುರ ವಿಜಯ ಪ್ರೌಢ ಶಾಲೆಯಲ್ಲಿ ಸುಧೀರ್ಘ ಕಾಲ ಸೇವೆ ಸಲ್ಲಿಸಿ ನಿವೃತ್ತರಾದ ಎಂ.ರಮೇಶ್ ಮತ್ತು ಎ.ಮಂಜುನಾಥ್ ದಂಪತಿಯನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಭಿನಂದಿಸಿ, ಬೀಳ್ಕೊಟ್ಟರು. ಪ್ರೊ.ಕೃಷ್ಣೇಗೌಡ, ಕೆ.ಬಿ.ಬಸವರಾಜು, ಜೆ.ಬಿ.ಶಿವರಾಜು, ಎಸ್.ನಾಗರಾಜು, ಬಿ.ನಾರಾಯಣಗೌಡ, ಯುವ ಕಾಂಗ್ರೆಸ್ ಮುಖಂಡ ಕೆ.ದಿನೇಶ್ ಕಣಿಯನಹುಂಡಿ, ಮರಿಸ್ವಾಮಿ, ಲಿಂಗರಾಜು, ಚಂದ್ರಶೇಖರ್, ಪ್ರಕಾಶ್ ಚಿಕ್ಕಪಾಳ್ಯ, ಕುಮಾರಸ್ವಾಮಿ ಇತರರು ಈ ವೇಳೆ ಉಪಸ್ಥಿತರಿದ್ದರು.

ಪತ್ನಿ ನಾಪತ್ತೆ, ಪತಿ ದೂರು



ಹಲಗೂರು,ಆ.11– ಮಳವಳ್ಳಿ ತಾಲೂಕು ಕಸಬಾ ಹೋಬಳಿಯ ಅಗಸನ ಪುರದ ಗ್ರಾಮದ ಶಾಂತಕುಮಾರ್ ಅವರ ಪತ್ನಿ ತೇಜಸ್ವಿನಿ(26) ಅವರು ಭೀಮನ ಅಮಾವ್ಯಾಸೆಯಂದು ಕಾಣೆಯಾಗಿರುವ ಬಗ್ಗೆ ಪ್ರಕರಣ ದಾಖಲಾಗಿದೆ.

ಭೀಮನ ಅಮಾವ್ಯಾಸೆಯಂದು ಊಟ ಮುಗಿಸಿ ಮಲಗಿಕೊಂಡಿದ್ದು ತಡ ರಾತ್ರಿ ಎಚ್ಚರವಾಗಿ ನೋಡಿದಾಗ ಪತ್ನಿ ಮನೆಯಲ್ಲಿ ಇರಲಿಲ್ಲ. ಈ ವೇಳೆ ಆಕೆಯ ಮೊಬೈಲ್ ಸಂಖ್ಯೆಗೆ ಕರೆ ಮಾಡಿದಾಗ ಸ್ವಿಚ್ ಆಫ್ ಆಗಿತ್ತು. ಪತ್ನಿ ಮನೆಯಿಂದ ಹೋಗುವಾಗ ಆಧಾರ್ ಕಾರ್ಡ್ ಮತ್ತು ಪಾಸ್‌ಬುಕ್ ತೆಗೆದು ಹೋಗಿದ್ದಾಳೆ ಎಂದು ಪತಿ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬುಡಕಟ್ಟು ಜನರಿಗೆ ಮೂಲಸೌಲಭ್ಯ ಕಲ್ಪಿಸಲು ಕ್ರಮ



ಚಾ.ನಗರದಲ್ಲಿ ನಡೆದ ವಿಶ್ವ ಆದಿವಾಸಿ ದಿನಾಚರಣೆಯಲ್ಲಿ ಶಾಸಕ ಮಂಜುನಾಥ್ ಮಾತನಾಡಿದರು.

ಚಾಮರಾಜನಗರ: ಬುಡಕಟ್ಟು ಗಿರಿಜನರಿಗೆ ಮೂಲಸೌಕರ್ಯ ಕಲ್ಪಿಸಲು ಸರ್ಕಾರದೊಂದಿಗೆ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಶಾಸಕ ಎಂ.ಆರ್.ಮಂಜುನಾಥ್ ಭರವಸೆ ನೀಡಿದರು.

ನಗರದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಜಿಲ್ಲಾ ಬುಡಕಟ್ಟು ಗಿರಿಜನ ಅಭಿವೃದ್ಧಿ ಸಂಘದ ವತಿಯಿಂದ ಆಯೋಜಿಸಿದ್ದ 30ನೇ ವಿಶ್ವ ಆದಿವಾಸಿ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅರಣ್ಯ ಪ್ರದೇಶದಲ್ಲಿ ತಲಾ ತಲಾಂತರಗಳಿಂದ ವಾಸಿಸುತ್ತಿರುವ ಗಿರಿಜನರು ಮೂಲಸೌಕರ್ಯವಿಲ್ಲದೆ ಬಹಳಷ್ಟು ಸಮಸ್ಯೆ ಎದುರಿಸುತ್ತಿದ್ದಾರೆ. ಈ ಬಗ್ಗೆ ಸದನದಲ್ಲಿ ಸರ್ಕಾರದ ಗಮನ ಸೆಳೆದಿದ್ದು, ಹಾಡಿಗಳಿಗೆ ರಸ್ತೆ, ಕುಡಿಯುವ ನೀರು, ವಿದ್ಯುತ್ ಸಂಪರ್ಕ ಸೇರಿದಂತೆ ಮೂಲಸೌಲಭ್ಯ ಕಲ್ಪಿಸಲು ಇರುವ ಅಡೆ ತಡೆಗಳನ್ನು ದೂರ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಹನೂರು ತಾಲೂಕಿನಲ್ಲಿ 80 ಗಿರಿಜನ ಹಾಡಿಗಳಿದ್ದು, 11 ಹಾಡಿಗಳಿಗೆ ಮೂಲಸೌಲಭ್ಯಗಳಿಲ್ಲ. ಇಲ್ಲಿನ ಜನರಿಗೆ ಅನುಕೂಲ ಕಲ್ಪಿಸಲು ಅರಣ್ಯ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದೆ ಎಂದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೊನಾರೋತ್ ಮಾತನಾಡಿ, ಹಿಮೋಗ್ಲೋಬಿನ್ ಕಡಿಮೆ ಇರುವ ಗಿರಿಜನ ಮಕ್ಕಳ ಆರೋಗ್ಯ ಸುಧಾರಣೆಗೆ ಕ್ರಮ ವಹಿಸಲಾಗುತ್ತಿದೆ. ಎಲ್ಲಾ ಮಕ್ಕಳಿಗೂ ಶಿಕ್ಷಣ ಕೊಡಿಸಬೇಕೆಂದು ಸಲಹೆ ನೀಡಿದರು.

ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಕೆ.ಮಂಜುಳಾ ಮಾತನಾಡಿ, ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಜೊತೆಗೆ ದುಶ್ಚಟಗಳಿಂದ ದೂರವಿದ್ದು ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಕೈ ಜೊಡಿಸಬೇಕೆಂದು ತಿಳಿಸಿದರು.

ಜಿಲ್ಲಾ ಅರಣ್ಯ ಹಕ್ಕು ಸಮಿತಿ ಸದಸ್ಯ ಡಾ.ಸಿ.ಮಾದೇಗೌಡ ಮಾತನಾಡಿ, ಆದಿವಾಸಿಗಳ ಹಕ್ಕುಗಳಿಗಾಗಿ ಬಿರ್ಸಾಮುಂಡಾ ಅವರು ಬ್ರಿಟಿಷರ ಕಾಲದಲ್ಲೇ ಹೋರಾಟ ನಡೆಸಿದ್ದರು. ಕಾಡಿನಲ್ಲಿ ವಾಸಿಸುವ ಆದಿವಾಸಿಗಳು ಕಿರು ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಿ ಕಾಡು ಹಾಗೂ ಪ್ರಾಣಿಗಳಿಗೆ ಹೊಂದಿಕೊಂಡು ಜೀವನ ನಡೆಸುತ್ತಿದ್ದಾರೆ. ಈ ನಮ್ಮ ಜನರಿಗೆ ಮೂಲಸೌಲಭ್ಯ ಕಲ್ಪಿಸಲು ಜಿಲ್ಲಾಡಳಿತ ಕ್ರಮ ವಹಿಸಬೇಕೆಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ಗಿರಿಜನ ಅಭಿವೃದ್ಧಿ ಸಂಘದ ಜಿಲ್ಲಾಧ್ಯಕ್ಷ ರಂಗೇಗೌಡ, ಸಮಾಜ ಸೇವಕ ನಿಶಾಂತ್, ಡಾ.ಸಿದ್ದಪ್ಪಶೆಟ್ಟಿ, ಮಾಧು, ಜಿಪಂ ಮಾಜಿ ಉಪಾಧ್ಯಕ್ಷೆ ಕೇತಮ್ಮ, ಡಾ.ಎಂ.ಜಡೇಗೌಡ, ವಿ.ಮುತ್ತಯ್ಯ, ಕೋಣೂರೇಗೌಡ, ಲ್ಯಾಂಪ್ಸ್ ಉಪಾಧ್ಯಕ್ಷ ಶಿವಣ್ಣ ಇತರರು ಇದ್ದರು

ಜಲಪಾತೋತ್ಸವಕ್ಕೆ ಸಾಂಸ್ಕೃತಿಕ ರಂಗು

ಭರಚುಕ್ಕಿಯಲ್ಲಿ ಗಮನ ಸೆಳೆದ ವಿದ್ಯುತ್ ದೀಪಾಲಂಕಾರ



ಭರಚುಕ್ಕಿ ಜಲಪಾತೋತ್ಸವದಲ್ಲಿ ಹಾಡಿನ ಮೂಲಕ ವೇದಿಕೆಗೆ ಎಂಟ್ರಿ ಕೊಟ್ಟ ಅನನ್ಯಾ ಭಟ್.

ಚಾಮರಾಜನಗರ, ಆ.11–ಒಂದೆಡೆ ಹಾಲ ನೊರೆಯಂತೆ ಭೋರ್ಗರೆಯುತ್ತಿರುವ ಕಾವೇರಿ ನದಿಯ ಜಲಪಾತ, ಅದಕ್ಕೆ ಬಣ್ಣ ಬಣ್ಣದ ವಿದ್ಯುತ್ ದೀಪಾಲಂಕಾರದ ಮೆರುಗು, ಮತ್ತೊಂದೆಡೆ ಸ್ಥಳೀಯ ಹಾಗೂ ರಾಜ್ಯ ಕಲಾವಿದರ ಆಕರ್ಷಣೀಯ ಸಾಂಸ್ಕೃತಿಕ ಕಾರ್ಯಕ್ರಮಗಳ ರಂಗು... ಇದು ಕೊಳ್ಳೇಗಾಲ ತಾಲೂಕಿನ ಭರಚುಕ್ಕಿಯಲ್ಲಿ ಶನಿವಾರ ರಾತ್ರಿ ಕಂಡು ಬಂದ ದೃಶ್ಯಗಳು.

ಜಿಲ್ಲಾಡಳಿತ ವರ್ಷದಿಂದ ವರ್ಷಕ್ಕೆ ಆಕರ್ಷಣೀಯ ಕಾರ್ಯಕ್ರಮ ಆಯೋಜಿಸುವ ಮೂಲಕ ಪ್ರವಾಸಿಗರನ್ನು ಸೆಳೆಯುತ್ತಿದ್ದು, ಈ ಬಾರಿಯೂ ಅದ್ದೂರಿ ಕಾರ್ಯಕ್ರಮಗಳ ಮೂಲಕ ಯಶಸ್ವಿಯಾಗಿ ಜಲಪಾತೋತ್ಸವ ನಡೆಸಲಾಯಿತು.

ಭರಚುಕ್ಕಿಯಲ್ಲಿ 'ಚೆಲುವ ಚಾಮರಾಜನಗರ' ಹೆಸರಿನಡಿ ಕನ್ನಡ ಮತ್ತು ಸಂಸ್ಕೃತಿ, ಪ್ರವಾಸೋದ್ಯಮ ಇಲಾಖೆ ಮತ್ತು ಜಿಲ್ಲಾಡಳಿತದಿಂದ ನಡೆದ 'ಭರಚುಕ್ಕಿ ಜಲಪಾತೋತ್ಸವ' ಹಾಗೂ ವಿದ್ಯುತ್ ದೀಪಾಲಂಕಾರಕ್ಕೆ ಸಿಎಂ ಸಿದ್ದರಾಮಯ್ಯ ಚಾಲನೆ ನೀಡಿದರು.

ಸಾಂಸ್ಕೃತಿಕ ಕಾರ್ಯಕ್ರಮ ಮೆರಗು: ಜಲಪಾತೋತ್ಸವ ಅಂಗವಾಗಿ ಆಯೋಜಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮ ಡೊಳ್ಳು ಕುಣಿತದಿಂದ ಆರಂಭವಾಯಿತು. ನಂತರ ಕಂಬದ ರಂಗಯ್ಯ ತಮ್ಮ ಹಾಡಿನ ಮೂಲಕ ಮೋಡಿ ಮಾಡಿದರು. ಬಳಿಕ ಸೋಜಿಗದ ಸೂಜಿ ಮಲ್ಲಿಗೆ ಖ್ಯಾತಿಯ ಅನನ್ಯಾ ಭಟ್ ತಮ್ಮ ಕಂಠ ಸಿರಿಯಿಂದ ಪ್ರೇಕ್ಷಕರು ಹುಚ್ಚೆದ್ದು ಕುಣಿಯುವಂತೆ ಮಾಡಿದರು.

ಕೆಜಿಎಫ್ ಸಿನಿಮಾದ ವೀರ ವೀರ ಈ ಸುಲ್ತಾನ ಹಾಡಿನ ಮೂಲಕ ವೇದಿಕೆಗೆ ಎಂಟ್ರಿ ಕೊಟ್ಟ ಅನನ್ಯಾ ಭಟ್, ತಮ್ಮ ಅಮೋಘ ಗಾಯನದ ಮೂಲಕ ಎಲ್ಲರ ಮನಗೆದ್ದರು. ವೇದಿಕೆಯಲ್ಲಿ ಸುಮಾರು 2 ಗಂಟೆಗೂ ಹೆಚ್ಚು ಕಾಲ ಕಾರ್ಯಕ್ರಮ ನೀಡಿದ ಅನನ್ಯಾ ಭಟ್ ಅವರ ತಂಡದವರು ಪ್ರೇಕ್ಷಕರನ್ನು ರಂಜಿಸಿದರು. ಇದೇ ವೇಳೆ ಜಿಲ್ಲೆಯ ಸ್ಥಳೀಯ ಕಲಾವಿದರಿಂದ ಆಯೋಜಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮ ಸಭಿಕರ ಮನ ಸೆಳೆಯಿತು. ಭರಚುಕ್ಕಿಯಲ್ಲಿ ಇದು 4ನೇ ಜಲಪಾತೋತ್ಸವ.

ಭರಚುಕ್ಕಿ ಜಲಪಾತೋತ್ಸವದಲ್ಲಿ ಚಾಮರಾಜನಗರ, ಮೈಸೂರು ಜಿಲ್ಲೆ ಸೇರಿದಂತೆ ವಿವಿಧೆಡೆಯಿಂದ ಆಗಮಿಸಿದ್ದ ನೂರಾರು ಜನರು ಬಣ್ಣದ ಬೆಳಕಿನಲ್ಲಿ ಕಾವೇರಿ ನದಿಯ ಜಪಲಾತದ ವೈಭವವನ್ನು ಕಣ್ತುಂಬಿಕೊಂಡರು. ಈ ವೇಳೆ ಸಚಿವರಾದ ಎಚ್.ಕೆ.ಪಾಟೀಲ್, ಕೆ.ವೆಂಕಟೇಶ್, ಶಿವರಾಜ ತಂಗಡಗಿ, ಸಂಸದ ಸುನಿಲ್ ಬೋಸ್, ಶಾಸಕರಾದ ಎಂ.ಆರ್. ಮಂಜುನಾಥ್, ಸಿ.ಪುಟ್ಟರಂಗಶೆಟ್ಟಿ, ಎಚ್.ಎಂ.ಗಣೇಶಪ್ರಸಾದ್, ವಿಧಾನ ಪರಿಷತ್ ಸದಸ್ಯ ಡಾ.ತಿಮ್ಮಯ್ಯ ಮತ್ತಿತರರಿದ್ದರು.

ಹೆಚ್ಚುವರಿ ಕ್ರಿಯಾ ಯೋಜನೆಗೆ ಅನುಮೋದನೆ



ಚಂದಕವಾಡಿ ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ನಡೆದ ಗ್ರಾಮಸಭೆಯನ್ನು ಉದ್ಘಾಟಿಸಲಾಯಿತು.

ಚಾಮರಾಜನಗರ, ಆ.11– ತಾಲೂಕಿನ ಚಂದಕವಾಡಿ ಗ್ರಾಮ ಪಂಚಾಯಿತಿ ಕಚೇರಿಯಲ್ಲಿ 2023–24ನೇ ಸಾಲಿನ ಸಾಮಾಜಿಕ ಲೆಕ್ಕಪರಿಶೋಧನೆ ಗ್ರಾಮಸಭೆ ನಡೆಯಿತು.

ಸಭೆಯಲ್ಲಿ ನರೇಗಾ ಯೋಜನೆಯಡಿ 99 ಕಾಮಗಾರಿ ಮಂಡಿಸಲಾಯಿತು. 15ನೇ ಹಣಕಾಸು ಯೋಜನೆಯಡಿ 35 ಕಾಮಗಾರಿಗಳಿಗೆ ಹೆಚ್ಚುವರಿ ಕ್ರಿಯಾ ಯೋಜನೆಗೆ ಅನುಮೋದನೆ ಪಡೆಯಲಾಯಿತು.

ಸಭೆಯಲ್ಲಿ ನೋಡಲ್ ಅಧಿಕಾರಿಗಳಾದ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಕಚೇರಿ ವ್ಯವಸ್ಥಾಪಕ ಸುರೇಶ್, ಗ್ರಾಪಂ ಅಧ್ಯಕ್ಷ ನಟರಾಜು, ಉಪಾಧ್ಯಕ್ಷೆ ಆರ್.ರಾಜೇಶ್ವರಿ, ಎಂ.ಸಿದ್ದರಾಜು, ಕಾರ್ಯದರ್ಶಿ ಮಾದಪ್ಪ, ಲೆಕ್ಕಸಹಾಯಕ ರಾಜೇಶ್, ಸದಸ್ಯರು, ಸಿಬ್ಬಂದಿ ಇದ್ದರು.

ಶನೇಶ್ವರ ದೇವಸ್ಥಾನದಲ್ಲಿ ಶ್ರಾವಣ ಪೂಜೆ



ಚಾಮರಾಜನಗರ, ಆ.11–ತಾಲೂಕಿನ ಚಂದಕವಾಡಿ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಚೇರಿ ಹಿಂಭಾಗದ ಶ್ರೀ ಶನೇಶ್ವರಸ್ವಾಮಿ ದೇವಸ್ಥಾನದಲ್ಲಿ ಮೊದಲನೇ ಶ್ರಾವಣ ಶನಿವಾರ ಅಂಗವಾಗಿ ವಿಶೇಷ ಪೂಜಾ ಕಾರ್ಯಕ್ರಮ ನೆರವೇರಿಸಲಾಯಿತು.

ದೇವರಿಗೆ ಪಂಚ ದ್ರವ್ಯಗಳ ಅಭಿಷೇಕ ನೆರವೇರಿಸಲಾಯಿತು. ಶನೇಶ್ವರಸ್ವಾಮಿ ಕಥಾ ಕಲಾಕ್ಷೇಪ ನಡೆದ ನಂತರ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು ಎಂದು ದೇವಸ್ಥಾನ ಅಭಿವೃದ್ಧಿ ಸಮಿತಿ ಸಿ.ಎಲ್.ರಂಗರಾಮು ತಿಳಿಸಿದರು.

ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

ಮೈಸೂರು, ಆ.11– ಮೈಸೂರು ತಾಲೂಕಿನ ಮೆಟ್ರಿಕ್ ನಂತರದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ 2024–25ನೇ ಸಾಲಿಗೆ ವಿದ್ಯಾರ್ಥಿವೇತನಕ್ಕಾಗಿ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ www.ssp.postmatric.karnataka.gov.in ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಪೋಷಕರ ವಾರ್ಷಿಕ ವರಮಾನ 2.5 ಲಕ್ಷದೊಳಗಿರುವ ಅರ್ಹ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ಸಂಬಂಧಪಟ್ಟ ಬ್ಯಾಂಕಿಗೆ ಭೇಟಿ ನೀಡಿ, ಆಧಾರ್ ಸಂಖ್ಯೆಯನ್ನು NPCI (ನ್ಯಾಷನಲ್ ಪೇಮೆಂಟ್ ಕಾರ್ಪೋರೇಷನ್ ಆಫ್ ಇಂಡಿಯಾ) ರಲ್ಲಿ ಕಡ್ಡಾಯವಾಗಿ ಬ್ಯಾಂಕ್ ಖಾತೆಗೆ ಮ್ಯಾಪಿಂಗ್ ಮಾಡಿಸಿ, ಆಧಾರ್ ಸೀಡಿಂಗ್ ಮಾಡಿಸಿರಬೇಕು. ಹೆಚ್ಚಿನ ಮಾಹಿತಿಗಾಗಿ ಪಡುವಾರಹಳ್ಳಿಯ ಡಾ.ಬಾಬು ಜಗಜೀವನ ರಾಂ ಭವನ ಕಟ್ಟಡದ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಗ್ರೇಡ್–1 ಅವರ ದೂ.ಸಂ: 0821–2520910 ಅನ್ನು ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಗ್ರೇಡ್–1 ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೂರನೇ ಪುಟದಿಂದ

ನಿವೇಶನ ಪಡೆದಿರುವ ಸಿದ್ದರಾಮಯ್ಯ!

ವಿಜಯನಗರದಲ್ಲಿ ತಮ್ಮ ಪತ್ನಿ, ಪಾರ್ವತಿ ಕಾನೂನು ಬದ್ಧವಾಗಿ ನಿವೇಶನ, ಪಡೆದಿರುವುದಾಗಿ ಸಮರ್ಥನೆ ಮಾಡಿಕೊಂಡಿದ್ದ ಸಿದ್ದ ರಾಮಯ್ಯ, ಈ ತನಕ ನಾನು ಯಾವುದೇ ಬದಲಿ ನಿವೇಶನ ಪಡೆದಿಲ್ಲ ಎಂದು ಸ್ಪಷ್ಟ ಪಡಿಸುತ್ತಿದ್ದಾರೆ. ಸಿದ್ದರಾಮಯ್ಯ ಅವರ ಈ ಘೋಷಣೆ ಬೆನ್ನಲ್ಲೇ ಈಗ ಬದಲಿ ನಿವೇಶನ ಪಡೆದಿರುವ ಮತ್ತೊಂದು ಆರೋಪ ಸಿದ್ದರಾಮಯ್ಯ ಹೊತ್ತುಕೊಂಡಿದ್ದಾರೆ. ಆದರೆ ಅಂದಿನ ಮೈಸೂರು ನಗರಾಭಿ ವೃದ್ಧಿ ವಿಶ್ವಸ್ಥ ಮಂಡಳಿ ಅಧ್ಯಕ್ಷ ಬಿ.ಕೆ. ಪುಟ್ಟಯ್ಯ ಮಂಜೂರು ಮಾಡಿದ ನಂತರ ಸಿದ್ದರಾಮಯ್ಯ ಬದಲಿ ನಿವೇಶನ ವನ್ನು ಸ್ವಾಧೀನಕ್ಕೆ ಪಡೆದಿದ್ದಾರೆಯೇ, ಅದು ಇನ್ನು ಅವರ ಮಾಲೀಕತ್ವದಲ್ಲಿ ಇದೆಯೇ ಎಂಬುದರ ಬಗ್ಗೆ ಮಾಹಿತಿ ಇಲ್ಲ. ಆದರೆ ಮೈಸೂರಿನಲ್ಲಿ ಇತ್ತೀಚೆಗೆ ನಡೆದ ಕಾಂಗ್ರೆಸ್ ಜನಾಂದೋಲನ ಸಮಾವೇಶದಲ್ಲಿ ನನಗೆ ಎರಡು ನಿವೇಶನವಿತ್ತು. ಆದರೆ ಸಾಲದ ಹೊರೆಯಿಂದ ಅವುಗಳನ್ನು ಮಾರಾಟ ಮಾಡಿದ್ದೇನೆ ಎಂದು ಸಿದ್ದರಾಮಯ್ಯ ತಿಳಿಸಿದ್ದರು. ಅಂದು ಸಿದ್ದರಾಮಯ್ಯ ಮಾರಾಟ ಮಾಡಿದ ಎರಡು ನಿವೇಶನದಲ್ಲಿ ಇದು ಒಂದಾಗಿತ್ತೆ ಎಂಬುದು ಸ್ಪಷ್ಟವಾಗಿಲ್ಲ. ಒಟ್ಟಾರೆ ಸಿದ್ದರಾಮಯ್ಯರಿಗೆ ಒಂದಾದ ಮೇಲೊಂದರಂತೆ ಕಂಟಕ ಎದುರಾಗುತ್ತಿದ್ದು, ಇದು ಮುಂದೆ ಯಾವ ರಾಜಕೀಯ ತಿರುವು ಪಡೆದುಕೊಳ್ಳುತ್ತದೆ ಎಂಬುದನ್ನು ಕಾದು ನೋಡಬೇಕಿದೆ. ಈ ಮಧ್ಯೆ ಯಾವುದೇ ಮಾಹಿತಿ ಇಲ್ಲದ ಕಾರಣ ನಾನು ಈ ಬಗ್ಗೆ ಪ್ರತಿಕ್ರಿಯೆ ನೀಡುವುದಿಲ್ಲ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ತಿಳಿಸಿದ್ದಾರೆ.

ಹೈಕೋರ್ಟ್ ತಾತ್ಕಾಲಿಕ ಬ್ರೇಕ್

ಒಡೆಯರ್ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು. ಇಂದು ಆ ಅರ್ಜಿ ವಿಚಾರಣೆ ನಡೆಸಿ, ರಾಜ್ಯ ಸರ್ಕಾರದ ನಡೆಗೆ ಹೈಕೋರ್ಟ್ ಏಕಸದಸ್ಯ ಪೀಠ ತಾತ್ಕಾಲಿಕ ತಡೆ ನೀಡಿದೆ. ಕಾಯ್ದೆಯ ಸೆಕ್ಷನ್ 2(ಎ), 3, 12(1), 14(3), 14(4), 16(1), 17(1), 20(1)(M), 20(2) ಸಂಪೂರ್ಣ ಕಾನೂನು ಬಾಹಿರ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

ಸರ್ಕಾರವೇ ಸುಪ್ರೀಂ: ಸೆಕ್ಷನ್ 2(ಎ) ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 2024ರ ಅನ್ವಯ ಬೆಟ್ಟದ ಸಂಪೂರ್ಣ ಸೌಕರ್ಯಗಳ ಬಗ್ಗೆ ಸರ್ಕಾರವೇ ತೀರ್ಮಾನಿಸಲಿದೆ. ರಸ್ತೆ, ವಿದ್ಯುತ್ ದೀಪ, ಸ್ವಚ್ಛತೆ, ಮಳಿಗೆ, ಚರಂಡಿ, ಹಾಲಿನ ಅಂಗಡಿ, ಮನೋರಂಜನೆ ಕಾರ್ಯಕ್ರಮಗಳು ಸೇರಿದಂತೆ ಎಲ್ಲವೂ ರಾಜ್ಯ ಸರ್ಕಾರದ ಅಧಿಸೂಚನೆ ಮೇಲೆ ನಡೆಯಬೇಕಿದೆ. ಸೆಕ್ಷನ್ 3, ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 2024 ಪ್ರಾಧಿಕಾರದ ರಚನೆಯ ಅಧಿಕಾರ ಸರ್ಕಾರಕ್ಕೆ ಸೇರಿದ್ದಾಗಿದ್ದು, ಮುಖ್ಯಮಂತ್ರಿಗಳು ಅದರ ಅಧ್ಯಕ್ಷರಾಗಿರಲಿದ್ದಾರೆ ಎಂದು ಸರ್ಕಾರದ ಕಾಯ್ದೆಯಲ್ಲಿದೆ. ರಾಜಮನೆತನದವರನ್ನೇ ಬಿಟ್ಟು ಸಚಿವರು, ಸ್ಥಳೀಯ ಶಾಸಕರು, ಸಂಸದರು ಹಾಗೂ ಅಧಿಕಾರಿಗಳನ್ನು ಪ್ರಾಧಿಕಾರದ ಪದಾಧಿಕಾರಿಗಳಾಗಲಿದ್ದಾರೆ.

ಸೆಕ್ಷನ್ 12(1) ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ 2024, ಪ್ರಾಧಿಕಾರದ ನೌಕರರ ನೇಮಕ ಮಾಡುವ ವಿಚಾರದಲ್ಲಿಯೂ ಅರ್ಚಕರು ಸೇರಿದಂತೆ ನೌಕರರ ನೇಮಿಸುವ ಅಧಿಕಾರ ಸರ್ಕಾರಕ್ಕಿದೆ. ಪ್ರಾಧಿಕಾರದ ಸಭೆಯ ತೀರ್ಮಾನಗಳ ಮೇಲೂ ಸರ್ಕಾರಕ್ಕೆ ಅಧಿಕಾರವಿದೆ. ಯಾವುದೇ ತೀರ್ಮಾನವಿದ್ದರೂ ಸರ್ಕಾರದ ನಿರ್ಣಯವೇ ಅಂತಿಮವಾಗಿರುತ್ತದೆ. ಪ್ರಾಧಿಕಾರದ ತೀರ್ಮಾನ ಹಾಗೂ ಸರ್ಕಾರದ ಆದೇಶಗಳನ್ನು ಜಾರಿ ಮಾಡುವ ಅಧಿಕಾರವನ್ನು ಪ್ರಾಧಿಕಾರದ ಕಾರ್ಯದರ್ಶಿಗೆ ನೀಡಲಾಗಿದೆ. ಮುಖ್ಯಮಂತ್ರಿಗಳು ಯಾವುದೇ ತುರ್ತು ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಹೊಂದಿದ್ದಾರೆ. ಪ್ರಾಧಿಕಾರದ ಅಧ್ಯಕ್ಷರೂ ಆಗಿರುವುದರಿಂದ ತಾವು ಭಾವಿಸಿದ ಯಾವುದೇ ತೀರ್ಮಾನ ಮಾಡುವ ಅಧಿಕಾರವಿರುತ್ತದೆ.

ಚಾಮುಂಡಿ ಪ್ರಾಧಿಕಾರದ ಸ್ವತ್ತು ಮಾರಾಟದ ಅಧಿಕಾರಕ್ಕೆ ಸಂಬಂಧಿಸಿದಂತೆ ಯಾವುದೇ ಆಸ್ತಿಯ ಮಾರಾಟ, ಬಾಡಿಗೆ ನೀಡುವುದು ಹಾಗೂ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಪ್ರಾಧಿಕಾರಕ್ಕಿದೆ. ಸರ್ಕಾರ ಪ್ರಾಧಿಕಾರದ ನಿರ್ಧಾರದ ಮೇಲೆ ಅನುಮೋದನೆ ಮತ್ತು ತಿದ್ದುಪಡಿ ಮಾಡುವ ಅಧಿಕಾರ ಹೊಂದಿದೆ. ಚಾಮುಂಡಿ ಬೆಟ್ಟದ ಸಂಪೂರ್ಣ ಚರ ಮತ್ತು ಸ್ಥಿರ ಆಸ್ತಿ ಮೇಲಿನ ಹಕ್ಕು ಸರ್ಕಾರಕ್ಕಿದೆ ಎಂದಾದರೆ ದೇವಸ್ಥಾನ ನಿರ್ಮಿಸಿದ ರಾಜರ ಮನೆತನದವರಿಗೆ ಯಾವುದೇ ಸಂಪರ್ಕವಿಲ್ಲವಾಗುತ್ತದೆ ಎಂದು ನ್ಯಾಯಾಲಯದ ಮುಂದಿಡಲಾಗಿದೆ ಎಂದು ತಿಳಿದುಬಂದಿದೆ.

ವಾಹನಗಳಿಗೆ ವೇಗದ ಮಿತಿ ನಿಗದಿ

ಇಲಾಖೆ ಇದೀಗ ಪ್ರಮುಖ ರಸ್ತೆಗಳಲ್ಲಿ ವೇಗದ ಮಿತಿ ನಿರ್ಧರಿಸಿ, ಆ ಪ್ರಕಾರ ಫಲಕಗಳನ್ನು ಅಳವಡಿಸಿದೆ. ಈಗಾಗಲೇ ರಿಂಗ್ ರಸ್ತೆಯ ಹಲವೆಡೆ ಎರಡೂ ದಿಕ್ಕುಗಳಲ್ಲಿ ಸಂಚರಿಸುವ ವಾಹನ ಸವಾರರ ಗಮನಕ್ಕೆ ಬರುವಂತೆ ವಾಹನವಾರು ವೇಗದ ಮಿತಿ ಮಾಹಿತಿಯುಳ್ಳ ಫಲಕ ಅಳವಡಿಸಲಾಗಿದೆ. ಇದರಿಂದ ಕೆಲ ದಿನಗಳಿಂದ ರಿಂಗ್ ರಸ್ತೆಯಲ್ಲಿ ಅತೀ ವೇಗದ ಚಾಲನೆಗೆ ಕಡಿವಾಣ ಹಾಕಿದಂತಾಗಿದೆ. ವಾಹನ ಚಾಲನೆಯಲ್ಲಿ ಶಿಸ್ತು ತರುವುದು ಹಾಗೂ ಅಪಾಯಕಾರಿ ಚಾಲನೆಗೆ ಕಡಿವಾಣ ಹಾಕುವುದು ಇದರ ಪ್ರಮುಖ ಉದ್ದೇಶ.

ಸವಾರರ ಆಕ್ಷೇಪ: ರಿಂಗ್ ರಸ್ತೆಯಲ್ಲಿ 80 ಕಿ.ಮೀ.ಗಿಂತ ಹೆಚ್ಚು, ಎಕ್ಸ್‌ಪ್ರೆಸ್ ವೇನಲ್ಲಿ 100 ಕಿ.ಮೀ.ಗಿಂತ ಹೆಚ್ಚಿನ ವೇಗದಲ್ಲಿ ಚಾಲನೆ ಮಾಡಿದ ವಾಹನಗಳ ದೃಶ್ಯ ಸೆರೆ ಹಿಡಿದು ಚಾಲಕರಿಗೆ ಕೃತಕ ಬುದ್ಧಿಮತ್ತೆ ಕ್ಯಾಮರಾಗಳು ದಂಡದ ಬಿಸಿ ಮುಟ್ಟಿಸಿವೆ. ಅತೀ ವೇಗದ ಚಾಲನೆ ಕುರಿತಂತೆ ನೋಟಿಸ್ ಕೈಸೇರುತ್ತಿದ್ದಂತೆ ಅನೇಕ ವಾಹನ ಸವಾರರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಯಾವುದೇ ರಸ್ತೆಯಲ್ಲಿ ವೇಗದ ಮಿತಿ ನಿರ್ಧರಿಸಿರುವ ಸೂಚನಾ ಫಲಕಗಳಿಲ್ಲ ಎಂದು ಅಸಮಾದಾನ ವ್ಯಕ್ತಪಡಿಸಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಿದ ಪೊಲೀಸ್ ಇಲಾಖೆ ಈಗ ವೇಗದ ಮಿತಿ ಕುರಿತು ಫಲಕ ಅಳವಡಿಸಿದೆ.

ವೇಗದ ಮಿತಿ: ಪ್ರಸ್ತುತ ರಿಂಗ್ ರಸ್ತೆಯಲ್ಲಿ ಕಾರು ಹಾಗೂ ನಾಲ್ಕು ಚಕ್ರದ ವಾಹನಗಳಿಗೆ 60 ಕಿ.ಮೀ., ಬೈಕ್ ಮತ್ತು ಬಸ್‌ಗೆ 50 ಕಿ.ಮೀ, ಲಾರಿ, ಟೆಂಪೋ, ಗೂಡ್ಸ್ ಆಟೋ, ಲಘು ವಾಹನಗಳಿಗೆ 40 ಕಿ.ಮೀ. ಹಾಗೂ ಟ್ರಾಕ್ಟರ್‌ಗೆ 20 ಕಿ.ಮೀ. ವೇಗದ ಚಾಲನೆಗೆ ಅವಕಾಶ ವಿದ್ದು, ನಿಯಮ ಉಲ್ಲಂಘಿಸಿ ಹೆಚ್ಚಿನ ವೇಗದಲ್ಲಿ ಚಾಲನೆ ಮಾಡಿದರೆ ದಂಡ ವಿಧಿಸಲಾಗುತ್ತಿದೆ.

> **ವೇಗ ಹೆಚ್ಚಿಸಿ**
>
> ರಿಂಗ್ ರಸ್ತೆ ಅಗಲವಾಗಿ, ವಾಹನ ಸಂಚಾರಕ್ಕೆ ಉತ್ತಮವಾಗಿದೆ. ಅನೇಕ ವಾಹನಗಳು ಮೈಸೂರು ನಗರ ಪ್ರವೇಶ ಮಾಡುವುದನ್ನು ತಡೆಯಲು ರಿಂಗ್ ರಸ್ತೆ ಸಹಕಾರಿಯಾಗಿದೆ. ಕಾರ್‌ಗಳಿಗೆ ಕೇವಲ 60 ಕಿ.ಮೀ. ವೇಗದ ಮಿತಿ ಮಾಡಿರುವುದು ಸರಿಯಲ್ಲ. ಹಾಗಾಗಿ ಈ ಮಿತಿ ಹೆಚ್ಚಳ ಮಾಡಬೇಕು.
>
> – ವಾಹನ ಸವಾರರು

ವೇಗ ಹೆಚ್ಚಿಸಿ: ರಿಂಗ್ ರಸ್ತೆ, ಎಕ್ಸ್‌ಪ್ರೆಸ್ ವೇನಲ್ಲಿ ಹಾಲಿ ವೇಗದ ಮಿತಿಗೆ ಕೆಲವರು ಆಕ್ಷೇಪ ವ್ಯಕ್ತಪಡಿಸಿದ್ದು, ಅದನ್ನು ಹೆಚ್ಚಳ ಮಾಡುವಂತೆ ಕೋರಿದ್ದಾರೆ. ಸುಸ್ಥಿತಿಯ ರಸ್ತೆಯಲ್ಲಿ ಕಾರಿಗೆ 60 ಕಿ.ಮೀ. ವೇಗದ ಮಿತಿ ನಿಗದಿ ಮಾಡಿರುವುದು ಸರಿಯಲ್ಲ. ರಿಂಗ್ ರಸ್ತೆಯಲ್ಲಿ ಕಾರಿಗೆ 80 ಕಿ.ಮೀ., ಎಕ್ಸ್‌ಪ್ರೆಸ್ ವೇನಲ್ಲಿ 120 ಕಿ.ಮೀ.ವರೆಗೆ ಅವಕಾಶ ನೀಡುವಂತೆ ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಆದರೆ, ಅಪಘಾತ ತಪ್ಪಿಸುವ ನಿಟ್ಟಿನಲ್ಲಿ ಈ ವೇಗದ ಮಿತಿ ನಿರ್ಧರಿಸಿದ್ದು, ಅದನ್ನು ಹೆಚ್ಚಳ ಮಾಡುವುದು ಪೊಲೀಸ್ ಇಲಾಖೆಗೆ ಸಂಬಂಧಿಸಿದ್ದಲ್ಲ. ರೋಡ್ ಸೇಫ್ಟಿ ಕಮಿಟಿ ಈ ನಿರ್ಣಯ ಕೈಗೊಳ್ಳಬೇಕಾಗಿದ್ದು, ವಾಹನ ಚಾಲಕರ ಬೇಡಿಕೆಗೆ ಸ್ಪಂದನೆ ಸಿಗುವುದು ಸಂದೇಹವಾಗಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಬೇಕಾಗಿದ್ದಾರೆ
ಅನುಭವವುಳ್ಳ ಪುರುಷ ಸೆಕ್ಯೂರಿಟಿ ಗಾರ್ಡುಗಳು ತಕ್ಷಣ ಬೇಕಾಗಿದ್ದಾರೆ. ನಂಜನಗೂಡಿನ ಕಲ್ಲಹಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ESI+PF ವಾರದ ರಜೆ, ಕೆಲಸದ ಸಮಯದಲ್ಲಿ ಉಚಿತ ಊಟ+ತಿಂಡಿ ವ್ಯವಸ್ಥೆ ಇರುತ್ತದೆ. 8 ಗಂಟೆಗಳ ಕೆಲಸದ ಸಮಯ 26 ದಿನಗಳಿಗೆ 17,200/– ವೇತನ. ತಕ್ಷಣ ಸಂಪರ್ಕಿಸಿ.
7019378337
6361169194

ಸೈಟ್ ಮಾರಾಟಕ್ಕಿದೆ
30x40 S/F, 52x45 E/F Corner, 58x60 N/F Corner, 50x80 E/F ರಿಂಗ್ ರೋಡ್ ಹತ್ತಿರ ಯೂನಿವರ್ಸಿಟಿ ಲೇಔಟ್, ಎದುರು 30x40, 30x50 ವರಕೂಡು ಹತ್ತಿರ, 30x40 ಶ್ರೀನಗರ ಹತ್ತಿರ
9900372792

ಬೇಕಾಗಿದ್ದಾರೆ
ಟೈಲರ್ ಮತ್ತು ಹೆಲ್ಪರ್ ಕೆಲಸಕ್ಕೆ ಮಹಿಳೆಯರು ಹಾಗೂ ಪುರುಷರು ಬೇಕಾಗಿದ್ದಾರೆ. ಆಸಕ್ತಿ ಇದ್ದವರು ಈ ಸಂಖ್ಯೆಗೆ ಕರೆ ಮಾಡಿ.
ಅಕುಲ್ ಕ್ರಿಯೇಷನ್
ಸರಸ್ವತಿಪುರಂ, ಮೈಸೂರು
7411247214

ಶ್ರೀ ಗೌರೀಶಂಕರ ಟ್ರಾವೆಲ್ಸ್
4–10–24 (6 ದಿನ): ಅಯೋಧ್ಯೆ, ಪ್ರಯಾಗ್‌ರಾಜ್, ಕಾಶಿ, ಗಯಾ.
17–10–2024 (7 ದಿನ): ದೆಹಲಿ, ಆಗ್ರಾ, ಮಥುರಾ, ಅಯೋಧ್ಯೆ, ಕಾಶಿ, ಗಯಾ, ಇತ್ಯಾದಿ.
17–11–24 (ಭೂತಾನ್ ಪ್ರವಾಸ, 6 ದಿನ): ಬಾಗ್‌ಡೋಗ್ರ, ಜೈಗಿಯನ್, ಫೆನ್‌ಟ್‌ಶೋಲಿಂಗ್, ಥಿಂಪು, ದೊಚಲಾ, ಪುನಾಕ್ ಇತ್ಯಾದಿ.
(ವಿಮಾನ, ಬಸ್, ಊಟ, ರೂಂ)
Mob: 9620002114

ಮಹಿಳೆಯರಿಗೆ
ಆಫೀಸ್ ಕೆಲಸಕ್ಕೆ ಮತ್ತು ಮ್ಯಾನೇಜ್ಮೆಂಟ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
(ಕಂಪ್ಯೂಟರ್ ಅನುಭವವುಳ್ಳ)
9901080314

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108566022

ಸೈಟುಗಳು ಮಾರಾಟಕ್ಕಿವೆ
ಕೆ.ಆರ್.ನಗರದ ಮೈಸೂರು–ಹಾಸನ ರಾಷ್ಟ್ರೀಯ ಹೆದ್ದಾರಿ ಪಕ್ಕ, ಜೆಎಸ್‌ಎಸ್ ಕಾಂಪೌಂಡ್ ಹತ್ತಿರ 30x40 ಅಳತೆಯ 4 ಸೈಟುಗಳು ಮಾರಾಟಕ್ಕಿವೆ. ವಾಣಿಜ್ಯ ಉದ್ದೇಶಕ್ಕೆ ಅನುಕೂಲ. ಆಸಕ್ತರು ಸಂಪರ್ಕಿಸಿ:
9480384126, 8618626897

SITE FOR SALE
Dimensions : 30 feet x 40 feet
Facing : East
Location : BSNL Telcom, Nityananda Sagar Layout, Mysuru
9448877601

ಹೋಂ ನರ್ಸ್
ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಪುರುಷರು ಹಾಗೂ ಮಹಿಳೆಯರು ಬೇಕಾಗಿದ್ದಾರೆ. 12 Hrs ಅಥವಾ 24 ಗಂಟೆ ಸೇವೆ ಮಾಡುವವರು ಸಂಪರ್ಕಿಸಿ
8123252840

ಮನೆ ಮಾರಾಟಕ್ಕಿದೆ
20x30 ಗ್ರೌಂಡ್ ಫ್ಲೋರ್ 2 ಬೆಡ್ ರೂಂ ರಸ್ತೆ, ಫಸ್ಟ್ ಫ್ಲೋರ್ ಡೂಪ್ಲೆಕ್ಸ್ ಹೌಸ್ 3 ರೂಂ ಇದೆ. ಹೆಬ್ಬಾಳು ಮೊದಲನೆ ಹಂತ ಮೋರ್ ಸೂಪರ್ ಮಾರ್ಕೆಟ್ ಹತ್ತಿರ
9845494179

Sump & Tank Solar & Cleaning, Water Level Controller Service
Mob: 8861612486

ಉದ್ಯೋಗ ಅವಕಾಶ
ಬಿಂದ ವಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI / PF ನೊಂದಿಗೆ ಊಟ, ವಸತಿಯೊತ್ತಿದೆ ಸಂಬಳ – ರೂ. 15200 – 86,100
7411565140, 7892046990

REQUIRED GRAPHIC DESIGNER
Experienced in CorelDRAW & Photoshop
IMPACT SIGNS
99011 63200
97435 65907

Sudarshan Saur SOLAR WATER HEATER

ATTRACTIVE OFFER
ಸೇಲ್ಸ್ & ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

FOR SALE
1. Properties at Kuvempu Nagar Starting @ 45L
2. 30x40 & 30x50 Near Varuna Lake
3. 30x50 Sites at Brahmins Layout
4. 30x30 New House at Vijaya Nagar
5. Properties For Sale at Vidyaranyapuram
6. 20x30 Site Near SBM Lyt, Bogadhi
7. 30x40 Site at Kandhaya Lyt, Srirampura
8. 100x100 Farm House @ KRS Back Water Attach 20L
PRAKRUTHI PROPERTIES
95386 90359, 90359 90359

ಬೋಳು ತಲೆಯ ಸಮಸ್ಯೆಯೇ?

ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

ಓಂ ಶ್ರೀ ಮಲೆಮಾದೇಶ್ವರ ಸ್ವಾಮಿ ಜ್ಯೋತಿಷ್ಯ ಕೇಂದ್ರ
ಕೇರಳ ಮತ್ತು ಕೊಳ್ಳೇಗಾಲದ ನಂಬರ್ ಒನ್ ಗುರೂಜಿ ಶ್ರೀ ಡಿ.ಎಸ್.ರಾವ್ ನಿಮ್ಮ ಸಮಸ್ಯೆ ಪ್ರೀತಿಯಲ್ಲಿ ನಂಬಿ ಮೋಸ, ಅತ್ತೆ ಸೊಸೆ ನಾದಿನಿ ಅಣ್ಣ ತಮ್ಮಂದಿರಲ್ಲಿ ಕಲಹ, ವ್ಯಾಪಾರದಲ್ಲಿ ಲಕ್ಷ ನಷ್ಟ, ಇನ್ನು ನಿಮ್ಮ ಜೀವನದ ಯಾವುದೇ ಸಮಸ್ಯೆಗಳಿದ್ದರೂ ಕೆಲವೇ ದಿನಗಳಲ್ಲಿ ಪರಿಹಾರ ಶತಸಿದ್ಧ ವಿಶೇಷ ಸೂಚನೆ ನಾವು ಮಾಡಿಕೊಟ್ಟಂತೆ ಪರಿಹಾರ ನಮಗಿಂತ ಮೊದಲು ಬೇರೆ ಯಾರೇ ಮಾಡಿಕೊಟ್ಟಲ್ಲಿ ಅವರಿಗೆ ಸೂಕ್ತ ಬಹುಮಾನ ಕೊಡಲಾಗುವುದು ದೂರದ ಊರಿನವರಿಗೆ ಫೋನಿನ ಮೂಲಕ ಪರಿಹಾರ ತಿಳಿಸುತ್ತಾರೆ. ಬರುವ ಮುನ್ನ ಕರೆ ಮಾಡಿ ಬನ್ನಿ ವಿಳಾಸ ಬಸವನಗುಡಿ ಸರ್ಕಲ್ ಹೆಬ್ಬಾಳ್ ಮೇನ್ ರೋಡ್, ಮೈಸೂರು
9945182823

HOUSE FOR SALE & SITE
30x40 Residential House, Ground Floor -2 BHK, 1st Floor - 1 Attach Room, 1500 Sqft Construction area, 9 and 11A Property, & 40x30 Site Also Sale, Bank loan available, Near Yelawala City Bus stand, Yelawala, Mysore.
Further details contact
95354 80519

ITI ಗೆ ಪ್ರವೇಶಾವಕಾಶ
ITI (Fitter - NSQF) ವೃತ್ತಿಗೆ & SSLC / PUC pass or fail ಅಭ್ಯರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ. NCVT ಭಾರತ ಸರ್ಕಾರದಿಂದ ಸಂಯೋಜನೆಗೊಂಡಿರುತ್ತದೆ.
Benaka ITI College, Near Cauvery Circle, Dr. Rajkumar Road, Raghavendra Nagar, Mysore.
9342123467, 9141756695

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

JOBS IN MYSORE
Age (18-24), 10th PUC, BBM. Earn starts (9800 ರಿಂದ 18600+) PM. Only freshers. No fee. Meet us today join tomorrow.
Anu: 9342238667, 9342827788
Time: 9 am to 5.30 pm

SITE FOR SALE
30x40, Site No. 182, Athmananda Sagara Layout, 9 kms from Ring Road. 90% Bank loan available. Nagawala, Mysore. Contact:
Mob: 6360318172

SITE FOR SALE
Dimensions: 30 Feet x 40 Feet
Facing: East
Location: BSNL Telecom, Nityananda Sagara Layout, Mysuru. Contact:
Mob: 9448877601

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ವಿದ್ಯಾರ್ಹತೆ: 7th, 10th, ITI, SSLC, PUC, Diploma, Any Degree (Pass or fail).
Salary: 18,000 - 30,000
ಪುರುಷ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ. ತರಬೇತಿ ಸಮಯದಲ್ಲಿ ವೇತನ ಕೊಡಲಾಗುವುದು. ವಯಸ್ಸು: Below 35.
Mob: 9880151303

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

WANTED
Telecallers
Marketing Manager
TV Anchors
PigMe Collection Boy
Office Assistant
Call: 99809-59598

2.5 BHK HOME INTERIORS @ ₹ 2.5 Lakh*
Home Space Mart
*T&C Apply
91089 23123

ಶ್ರೀ ಗುರುರಾಘವೇಂದ್ರ ಹಾಲಿಡೇಸ್ ಪ್ಯಾಕೇಜ್ ಟೂರ್
ಕಾಶಿಯಾತ್ರ ಪ್ರವಾಸ 11 ದಿನಗಳು ರೈಲಿನಲ್ಲಿ 1 ಸೀಟಿಗೆ 16000/– ಸಾವಿರ
1) ದೇಹಲಿ 2) ಮಥುರಾ 3) ಬೃಂದಾವನ 4) ಆಗ್ರಾ 5) ಅಯೋಧ್ಯ 6) ಕಾಶಿ 7) ಗಯ 8) ಬುದ್ಧಗಯ
ರೈಲು ಮತ್ತು ಬಸ್ಸಿನಲ್ಲಿ ಪ್ರಯಾಣ ಕಾಫೀ, ತಿಂಡಿ, ಊಟ ವಸತಿ ಸೇರಿರುತ್ತದೆ. ಕೇವಲ 20 ಜನಕ್ಕೆ ಮಾತ್ರ (ದಸರಾ ಆದನಂತರ ಟ್ರಿಪ್)
ಟೂರ್ ಆರ್ಗನೈಸರ್ ಜಗದೀಶ್ ಎಸ್.ಎನ್.
9482847729, 7019528922

ORIGINAL NEEM PLYWOOD
ಫ್ಯಾಕ್ಟರಿ ದರದಲ್ಲಿ
Boards & Doors
neem BOND PLATINUM
10 ವರ್ಷಗಳ ವಾರೆಂಟಿ
9901291267, 9845426862

ನಿವೇಶನಗಳು ಮಾರಾಟಕ್ಕಿವೆ
ಡಿಟಿಸಿಪಿ ಅನುಮೋದಿತ 100% ಅಭಿವೃದ್ಧಿ ಹೊಂದಿರುವ ಬಡಾವಣೆ. 80% ಬ್ಯಾಂಕ್ ಸಾಲ ದೊರೆಯುತ್ತದೆ. ಸ್ಥಳ: ಜಟ್ಟಿಹುಂಡಿ, ಗದ್ದಿಗೆ ಮುಖ್ಯ ರಸ್ತೆ, ಮೈಸೂರು.
ಬೆಲೆ: 2500 Sqr. Ft.
Call: 96632-88665

ಸಪ್ತಪದಿ
ಸಪ್ತಪದಿ ಮ್ಯಾಟ್ರಿಮೋನಿ (ರಿ.)
BE/MBA/M.Tech/MCA/MBBS/MD/MS and Any Degree ಯ India/USA/UK/Germany/Canada/Australia/Bangalore/Mysore ನ ವಧು–ವರರ ಮಾಹಿತಿ/ನೋಂದಣಿಗೆ ಸಂಪರ್ಕಿಸಿ
9663199511,8088776211

ಬೇಕಾಗಿದ್ದಾರೆ
ಮೈಸೂರಿನ ಕಾಳಿದಾಸ ರಸ್ತೆ – ಜಯಲಕ್ಷ್ಮೀಪುರಂದಲ್ಲಿ ಇರುವ ಶುದ್ಧ ಸಸ್ಯಾಹಾರಿ ರೆಸ್ಟೋರೆಂಟ್‌ಗೆ ಅನುಭವವುಳ್ಳ (1) Assitant Cook ಸಹಾಯಕ ಹೆಲ್ಪರ್ Grinding Veg Cutting - (2) ಕೌಂಟರ್ ಪಾರ್ಸೆಲ್ counter parcel packing (3) Supplier with Tea /Coffee ಮಾಡುವ ಕೆಲಸಕ್ಕೆ ಬೇಕಾಗಿದ್ದಾರೆ. ಆಕರ್ಷಕ ಸಂಭಳ, ವಸತಿ ಹಾಗು ಉತ್ತಮ ಸೌಲಭ್ಯಗಳನ್ನೂ ನೀಡಲಾಗುತ್ತದೆ – ಸಂಪರ್ಕಿಸಿ
7899028086

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್
ಸಂಬಳ: 12000/– (12 ಗಂಟೆಗೆ)
ಸ್ಥಳ: ಬೋಗಾದಿ, ಆಲನಹಳ್ಳಿ, ನಜರ್‌ಬಾದ್, ಪಡುವಾರಹಳ್ಳಿ,
ವಯಸ್ಸು: 25 ರಿಂದ 55 ರವರೆಗೆ
9019586857
6361740914

WANTED DRIVER
FOR DOST VEHICLE
SALARY 14000-16000 + INCENTIVE
7090900099
(10-3 PM)

ಬೇಕಾಗಿದ್ದಾರೆ
ಹಾಸ್ಟೆಲ್‌ಗೆ ಅಡುಗೆ ಹೆಲ್ಪರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ ಊಟ ವಸತಿ ಉಚಿತ
ಸ್ಥಳ: ಸುಳ್ಯ
9902176566

WALK IN INTERVIEW
ಹೋಟೆಲ್‌ನಲ್ಲಿ ಜಿಲೇಬಿ, ಸಮೋಸ ಹಾಗೂ ಚಾಟ್ ಮಾಡುವವರು ಬೇಕಾಗಿದ್ದಾರೆ.
9538787037
9535332633

WALK IN INTERVIEW
ಶಾಲಾ ಆವರಣ ಮತ್ತು ಸ್ವಿಮ್ಮಿಂಗ್ ಪೂಲ್ ನೋಡಿಕೊಳ್ಳಲು ಆಯಾ ಮತ್ತು ಸೆಕ್ಯೂರಿಟಿ ಕುಟುಂಬ ಸಮೇತ ಬೇಕಾಗಿದ್ದಾರೆ. ಹಾಗೂ ಶಾಲೆಯಲ್ಲಿ ಅಡುಗೆ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ ಉಚಿತ ವಸತಿ ಸೌಲಭ್ಯವಿದೆ.
9538787037
9535332633

ಬೇಕಾಗಿದ್ದಾರೆ
ಹೆಬ್ಬಾಳು ಮೇಟಗಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಹುಡುಗ, ಹುಡುಗಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ ITI, Diploma, 8th to 2nd PUC ವರೆಗೆ. ಊಟ ವಸತಿ ESI, PF ಮತ್ತು ವಾಹನ ಸೌಲಭ್ಯ ಇರುತ್ತದೆ. ಸಂಬಳ: 11500 ರಿಂದ 18000 ಇರುತ್ತದೆ.
8951869646
9902645646

ಸೈಟುಗಳು ಮಾರಾಟಕ್ಕಿವೆ
30x40, 30x50 ಅಳತೆಯ ಸೈಟುಗಳು ಬೋಗಾದಿ–ಗದ್ದಿಗೆ ಮುಖ್ಯರಸ್ತೆ, ಜಟ್ಟಿಹುಂಡಿ ಹತ್ತಿರ ಸೈಟುಗಳು ಮಾರಾಟಕ್ಕಿವೆ.
8088702979
8310116598

ಸೈಟುಗಳು ಮಾರಾಟಕ್ಕಿವೆ
20x30, 30x40, 30x50 ಅಳತೆಯ ಮುಡಾ ಸೈಟುಗಳು ಲಲಿತಾದ್ರಿಪುರ ರಿಂಗ್ ರೋಡ್ ಹತ್ತಿರ ಸೈಟುಗಳು ಮಾರಾಟಕ್ಕಿವೆ.
8088176638
9591429166

ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ
ಸಂಬಳ: 10,000 (DRA Certificate ಇದ್ದರೆ 12,000) ಟೀಮ್ ಲೀಡರ್ ಬೇಕಾಗಿದ್ದಾರೆ. (ಸಂಬಳ–12000) ಸ್ಥಳ: ಚಾಮುಂಡಿಪುರಂ ಮತ್ತು ಎನ್.ಆರ್.ಮೊಹಲ್ಲಾ, Field Executive ಬೇಕಾಗಿದ್ದಾರೆ (ಸಂಬಳ–13000), 2000/- (Petrol Charges) DRA CERTICATE ಇದ್ದರೆ
8150005111

Mach Makers Bride/Groom ವಧು/ವರರ ಮದುವೆ ಆಯ್ಕೆ
All Cast Govt Job/Private Job/Own/ ಇಂಡಸ್ಟ್ರಿ/ಪ್ರಗತಿಪರರ ಡಾಕ್ಟರ್, ಇಂಜಿನಿಯರ್ ಎಲ್ಲಾ ಡಿಗ್ರಿ ಡಿಪ್ಲಮೊ ಇತರೆ ಎಲ್ಲಾ ಜಾತಿಯ ವಧುಗಳು/ವರಗಳು ಮದುವೆ ಆಯ್ಕೆಗೆ ಲಕ್ಷಾಂತರದಲ್ಲಿ ಆರಿಸಲು ಭೇಟಿ ನೀಡಿ ಕರ್ನಾಟಕಾದ್ಯಂತ ಕಛೇರಿಗಳಿವೆ ಮೊದಲ ಮದುವೆ/ಡೈವೋರ್ಸ್‌ಗಳು ವಿದವೆ ವಿಧುರರ ಮದುವೆ ಆಯ್ಕೆಗೆ ಮದುವೆಯ ಒಪ್ಪಂದ ಕೊಟ್ಟಲ್ಲಿ ನಾವೇ ಹೆಣ್ಣು/ಗಂಡುಗಳನ್ನು ತೋರಿಸಿ ಮದುವೆ ಮಾಡಿಸುತ್ತೇವೆ.
9481692083

ಕರ್ನಾಟಕದಾದ್ಯಂತ ಪ್ರಸಿದ್ಧ MNC ಕಂಪನಿಗಳಿಗೆ
ಕಂಪನಿ ಮತ್ತು ಆಫೀಸ್ ಕೆಲಸದ ಉದ್ಯೋಗಗಳಿಗೆ ತಕ್ಷಣ ಯುವಕ ಯುವತಿಯರು ಬೇಕಾಗಿದ್ದಾರೆ ಯಾವುದೇ ಸಂದರ್ಶನ ಇರುವುದಿಲ್ಲ ಪ್ರಸಿದ್ಧ ಕಂಪನಿಗಳಲ್ಲಿ, ಅಕೌಂಟೆಂಟ್, ಡೇಟಾ ಆಪರೇಟರ್, ಟೆಲಿಕಾಲರ್, ಕ್ಯಾಶಿಯರ್, ಆಫೀಸ್ ಬಾಯ್, ಮತ್ತು ಮ್ಯಾನುಫ್ಯಾಕ್ಚರಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ, ಶಿಕ್ಷಣ 4ನೇ ತರಗತಿ ಇಂದ ಯಾವುದೇ ಪದವೀಧರರು, (ಸಂಬಳ: 18000rs ಇಂದ 30000rs+ ಇನ್ಸೆಂಟಿವ್) ಹೆಚ್ಚಿನ ಮಾಹಿತಿಗಾಗಿ ಇಂದೇ ಸಂಪರ್ಕಿಸಿ:
9632831680,7411273440

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರಿನ MNC ಕಂಪನಿಗಳಿಗೆ ಆಫೀಸ್‌ಗಳಿಗೆ ಶೋರೂಂಗಳಿಗೆ 7th, 10th, PUC, Degree, ITI, Diploma Pass & Fail ಆದ ಯುವಕ ಯುವತಿಯರು Packing, Helper, Front Office, Telecalling, Data Entry, Billing, Cashier, HR Admin Driving ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಷರತ್ತು ಅನ್ವಯ ಸಂಬಳ 18000/- ರಿಂದ 39000/- (ESI+PF+OT)
6364103418
9740468212

SITE FOR SALE
30x50 S/F
Brammanandha Sagara Phase-1
8050821108

30x40 HOUSE FOR SALE (MUDA)
4th Stage, 2nd Phase Vijayanagara Near NPS School Mysore
Ground 1150 Sqft & 1st Floor 750 Sqft
Price: 1.35 Lackhs
9342677390

ತಕ್ಷಣ ಬೇಕಾಗಿದ್ದಾರೆ
ತಾಂಡ್ಯ ಹಿಮ್ಮಾವು ಮತ್ತು ಬೇಗೂರು ತೊಂಡುವಾಡಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ: SSLC
ಸಂಬಳ: 17,000/-
ESI + PF ಊಟ ತಿಂಡಿ ಸೌಲಭ್ಯವಿರುತ್ತದೆ.
9620667819
9620777819

ಬೇಕಾಗಿದ್ದಾರೆ
ಫರ್ನಿಷಿಂಗ್ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಬಳ: 12000 ರಿಂದ 15000 ಸಾವಿರದವರೆಗೆ
ಸ್ಥಳ : ಶಾರದಾದೇವಿನಗರ, ಮೈಸೂರು
8050744784

SITE FOR SALE
Near MIT College Corner
40x50 & 30x40
Very Good Location
Bank Loan Available
9535601201

50x80 E/F DTCP
'A' ಖಾತೆ ಸೊಸೈಟಿ ಸೈಟು ಮಾರಾಟಕ್ಕಿದೆ 55 ಲಕ್ಷಗಳು ನಂಜುಂಡೇಶ್ವರ ನಗರ TVS ಫ್ಯಾಕ್ಟರಿ ಹತ್ತಿರ, 28x40 S/W ಕಾರ್ನರ್ ಸೈಟು ಮಾರಾಟಕ್ಕಿದೆ. 16 ಲಕ್ಷಗಳು TVS ಫ್ಯಾಕ್ಟರಿ ಹತ್ತಿರ ಮೈಸೂರು
9742198093

ಜಾಗ ಮಾರಾಟಕ್ಕಿದೆ
ನಂಜನಗೂಡು ನರಸಣ್ಣನ ಅಗ್ರಹಾರ 40x80 ಅತಿ ಕಡಿಮೆ ಬೆಲೆಯಲ್ಲಿ ಚದರಡಿಗೆ 1500/– ರೂ. ಮಾತ್ರ
9379784749
9482842421

SITES FOR SALE
BALAJI SIRI
30X40, 30X50 Premium Plots at T.Narasipura Main Road, attached to National Highway
Ready for Registration
9113687489

ತಕ್ಷಣ ಬೇಕಾಗಿದ್ದಾರೆ
1) ಹೌಸ್ ಕೀಪರ್ (ಮಹಿಳೆಯರು)
ಸ್ಥಳ: ಕುವೆಂಪುನಗರನಗರ ಸುತ್ತಮುತ್ತ
2) ಸೆಕ್ಯೂರಿಟಿ ಗಾರ್ಡುಗಳು / ಸೂಪರ್‌ವೈಸರ್ ಮೈಸೂರು ಸುತ್ತಮುತ್ತ
ಉಚಿತ ವಸತಿ / ಊಟದ ವ್ಯವಸ್ಥೆಯಿದೆ
9686422400
9242406261

ಸೆಕ್ಯೂರಿಟಿ ಸೂಪರ್ ವೈಸರ್‌ಗಳು ಬೇಕಾಗಿದ್ದಾರೆ
ಕಡಕೊಳ ಕೈಗಾರಿಕಾ ಮತ್ತು ತಾಂಡ್ಯ ಕೈಗಾರಿಕಾ ಪ್ರದೇಶದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಸೂಪರ್ ವೈಸರ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC & ಮೇಲ್ಪಟ್ಟು ಸಂಬಳ: 17,000/-(26 ದಿನಗಳು (General Shift Only)
ESI + PF, Bonus & EL ಸೌಲಭ್ಯವಿರುತ್ತದೆ.
9620777819
9620667819

ಸೈಟು ಬೇಕಾಗಿದೆ
ಲಾಲ್‌ಬಹದ್ದೂರ್ ಶಾಸ್ತ್ರಿನಗರ ವಸಂತನಗರ, ಶಾಂತವೇರಿ ಗೋಪಾಲಗೌಡ ನಗರ ಸಪ್ತ ಮಾತೃಕ ಲೇಔಟ್ ಪೊಲೀಸ್ ಲೇಔಟ್ ಜೆ.ಎಸ್.ಎಸ್ ಲೇಔಟ್
9844436672

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಬೀಡನಹಳ್ಳಿಯಲ್ಲಿ ಸ್ಮಶಾನ ಒತ್ತುವರಿ ತೆರವು

ಸ್ಮಶಾನ ವಂಚಿತ ಗ್ರಾಮಗಳಿಗೆ ಸ್ಮಶಾನ ಕಲ್ಪಿಸಿ: ದಸಂಸ ಜಿಲ್ಲಾ ಸಂಚಾಲಕ ಸಿ.ಉಮಾ ಮಹದೇವ ಆಗ್ರಹ

ತಿ.ನರಸೀಪುರ, ಆ.11– ತಾಲೂಕಿನ ಸ್ಮಶಾನ ವಂಚಿತ ಪ್ರತಿಯೊಂದು ಗ್ರಾಮಗಳಿಗೂ ಸ್ಮಶಾನ ಕಲ್ಪಿಸುವವರೆಗೆ ದಲಿತ ಸಂಘರ್ಷ ಸಮಿತಿ(ಬಣ ರಹಿತ) ಹೋರಾಟ ಮುಂದುವರೆಯಲಿದೆ ಎಂದು ಜಿಲ್ಲಾ ಸಂಚಾಲಕ ಸಿ.ಉಮಾ ಮಹದೇವ ತಿಳಿಸಿದರು.

ಸಂಘಟನೆ ಹೋರಾಟದ ಫಲವಾಗಿ ತಾಲೂಕಿನ ಬೀಡನಹಳ್ಳಿಯಲ್ಲಿ ಒತ್ತುವರಿಯಾಗಿದ್ದ ದಲಿತರ ಸ್ಮಶಾನ ಭೂಮಿ ಸಮುದಾಯದ ಕೈ ಸೇರಿದ ಹಿನ್ನೆಲೆಯಲ್ಲಿ ಕಂದಾಯ ಇಲಾಖೆ ಹಾಗೂ ಗ್ರಾಪಂ ಅಧಿಕಾರಿಗಳ ತಂಡದೊಂದಿಗೆ ಸ್ಮಶಾನ ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಿರಂತರ ಹೋರಾಟದ ನಂತರ ಅತಿಕ್ರಮಣಗೊಂಡಿದ್ದ ಸ್ಮಶಾನ ಭೂಮಿ ಕಂದಾಯ ಇಲಾಖೆಯಿಂದ ಗ್ರಾಪಂಗೆ ಹಸ್ತಾಂತರವಾಗಿದ್ದು, ಸ್ಮಶಾನದ ಅಭಿವೃದ್ಧಿ ಮತ್ತು ಮೂಲ ಸೌಲಭ್ಯ ಕಲ್ಪಿಸಬೇಕೆಂದು ಅಧಿಕಾರಿಗಳನ್ನು ಅಗ್ರಹಿಸಿದರು.



ಒತ್ತುವರಿ ತೆರವುಗೊಂಡ ಸ್ಮಶಾನವನ್ನು ಕಂದಾಯ ಇಲಾಖೆ ಹಾಗೂ ಗ್ರಾಪಂ ಅಧಿಕಾರಿಗಳು ಪರಿಶೀಲಿಸಿದರು.

ಬನ್ನೂರು ಹೋಬಳಿ ಬೀಡನಹಳ್ಳಿ ಗ್ರಾಮದಲ್ಲಿ ಸರ್ವೇ ನಂ.28/1 ರಲ್ಲಿ 0.22 ಗುಂಟೆ ಸ್ಮಶಾನ ಭೂಮಿ ಅತಿಕ್ರಮಣವಾಗಿದ್ದರಿಂದ ಸಮುದಾಯದವರು ಅಂತ್ಯಸಂಸ್ಕಾರಕ್ಕೆ ಪರದಾಡುತ್ತಿದ್ದುದನ್ನು ಅರಿತು ಕೈತಪ್ಪಿ ಹೋಗಿದ್ದ ಸ್ಮಶಾನ ಭೂಮಿ ಪಡೆಯಲು ದಲಿತ ಸಂಘರ್ಷ ಸಮಿತಿ (ಬಣ ರಹಿತ)ಯು ಹಲವು ವರ್ಷಗಳಿಂದಲೂ ಹೋರಾಟ ಮಾಡಿಕೊಂಡು ಬರುತ್ತಿತ್ತು. ಹೋರಾಟಕ್ಕೆ ಸ್ಪಂದಿಸಿ ಹೋರಾಟಕ್ಕೆ ಬೆಲೆ ನೀಡಿ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಸಮಾಜ ಕಲ್ಯಾಣ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದರಿಂದ ಎಚ್ಚೆತ್ತುಕೊಂಡ ಅಧಿಕಾರಿಗಳು ತುರ್ತು ಕ್ರಮ ಕೈಗೊಂಡು ಸಾರ್ವಜನಿಕ ಸ್ಮಶಾನ ಭೂಮಿ ಒತ್ತುವರಿ ತೆರವುಗೊಳಿಸಿ ಗ್ರಾಪಂಗೆ ಹಸ್ತಾಂತರಿಸಿದ್ದಾರೆ ಎಂದರು.

ಕಂದಾಯ ನಿರೀಕ್ಷಕ ಸಿದ್ದರಾಜು ಮಾತನಾಡಿ, ಸದರಿ ಸ್ಮಶಾನಕ್ಕೆ ಸಂಪರ್ಕ ಕಲ್ಪಿಸಲು 2 ರಸ್ತೆಗಳಿದ್ದು, ಒಂದು ರಸ್ತೆ ದಲಿತರ ಕಾಲೋನಿಯಿಂದ ತೆರಳಲು ತುಂಬಾ ಅನುಕೂಲವಾಗಿದೆ. ಆ ರಸ್ತೆ ಒತ್ತುವರಿ ತೆರವುಗೊಳಿಸಲು ತಹಸೀಲ್ದಾರ್ ಅವರ ಸೂಚನೆ ಮೇರೆಗೆ ಶೀಘ್ರ ಕಾರ್ಯಾಚರಣೆ ಮಾಡಲಾಗುವುದು ಎಂದು ಭರವಸೆ ನೀಡಿದರು. ಈ ಸಂದರ್ಭ ಗ್ರಾಮಸ್ಥರು ಸ್ಮಶಾನಕ್ಕಾಗಿ ಹೋರಾಟ ಮಾಡುತ್ತಿರುವ ದಲಿತ ಸಂಘರ್ಷ ಸಮಿತಿ ಹೋರಾಟಗಾರರ ಪರವಾಗಿ ಜಿಲ್ಲಾ ಸಂಚಾಲಕ ಸಿ.ಉಮಾ ಮಹದೇವ ಅವರನ್ನು ಸನ್ಮಾನಿಸಿದರು. ದಲಿತ ಸಂಘರ್ಷ ಸಮಿತಿ ತಾಲೂಕು ಸಂಚಾಲಕ ಕೇತುಪುರ ಶಿವಪ್ರಕಾಶ್, ಸಂಘಟನಾ ಸಂಚಾಲಕ ಚಂದಳ್ಳಿ ಮಲ್ಲೇಶ್, ಹನುಮನಾಳು ಮಹದೇವ, ಬೀಡನಳ್ಳಿ ಮಹಾದೇವಮ್ಮ, ಯಡದೊರೆ ಜಯಪ್ಪ, ಯಜಮಾನರಾದ ಸಿದ್ದಯ್ಯ, ಮಹದೇವ, ದಿನೇಶ್ ಕುಮಾರ್ ಸೇರಿದಂತೆ ಗ್ರಾಮಸ್ಥರಿದ್ದರು.

> ಕಂದಾಯ ಇಲಾಖೆ ಒತ್ತುವರಿ ತೆರವುಗೊಳಿಸಿ, ಸ್ಮಶಾನದ ನಕ್ಷೆ ನೀಡಿದ ತಕ್ಷಣ ಅದರ ದುರಸ್ತಿಗೆ ಕ್ರಮ ಕೈಗೊಳ್ಳಲಾಗುವುದು. ಅಗತ್ಯವಿರುವ ಅನುದಾನವನ್ನು ಪಂಚಾಯತಿಯಲ್ಲಿ ಕಾಯ್ದಿರಿಸಲಾಗಿದೆ. ಮೂಲ ಸೌಲಭ್ಯ ಕಲ್ಪಿಸಲು ಸಮಾಜ ಕಲ್ಯಾಣ ಇಲಾಖೆಗೆ ಹೆಚ್ಚುವರಿ ಅನುದಾನಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. - **ಪವಿತ್ರಾ, ಪಿಡಿಓ**

ಶ್ರೀನಂಜುಂಡೇಶ್ವರ ಉತ್ಸವ ಮೂರ್ತಿ ಮೆರವಣಿಗೆ



ಬನ್ನೂರಿನ ಪ್ರಮುಖ ಬೀದಿಗಳಲ್ಲಿ ಶ್ರಾವಣ ಮಾಸದ ಅಂಗವಾಗಿ ಶ್ರೀಶನೇಶ್ವರ ಮತ್ತು ಶ್ರೀನಂಜುಂಡೇಶ್ವರ ಉತ್ಸವ ಮೂರ್ತಿ ಮೆರವಣಿಗೆ ನಡೆಯಿತು.

ಸರ್ಕಾರದಿಂದ 187 ಕೋಟಿ ಲೂಟಿ



ಮಲ್ಲುಂಡಿ, ಆ.11– ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ 187 ಕೋಟಿ ಲೂಟಿ ಮಾಡಿರುವ ಕಾಂಗ್ರೆಸ್ ಸರ್ಕಾರ 100 ಪರ್ಸೆಂಟ್ ಸರ್ಕಾರ ಎಂದು ಬಿಜೆಪಿ ಎಸ್ಟಿ ಮೋರ್ಚಾ ಜಿಲ್ಲಾ ಉಪಾಧ್ಯಕ್ಷ ಚಿಕ್ಕರಂಗನಾಯಕ ಆಕ್ರೋಶ ವ್ಯಕ್ತಪಡಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಆಡಳಿತ ವ್ಯವಸ್ಥೆ ಸಂಪೂರ್ಣ ಕುಸಿದಿದೆ. ದಲಿತರು ಹಾಗೂ ಹಿಂದುಳಿದ ವರ್ಗದವರ ಹೆಸರೇಳಿಕೊಂಡು ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ದಲಿತರಿಗೆ ಹಾಗೂ ಹಿಂದುಳಿದವರಿಗೆ ದ್ರೋಹ ಬಗೆದಿದೆ. ಪರಿಶಿಷ್ಟ ಜಾತಿ ಹಾಗೂ ಪಂಗಡದ ಅಭಿವೃದ್ಧಿಗಾಗಿ ಮೀಸಲಿಟ್ಟಿದ ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಂಡು ಅನ್ಯಾಯ ಮಾಡಿದ್ದಾರೆ. ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿದ್ದ 187 ಕೋಟಿ ಹಣವನ್ನು ತೆಲಂಗಾಣ ಚುನಾವಣೆಗೆ ಬಳಸಿಕೊಂಡಿದ್ದಾರೆ. ಅಲ್ಲದೇ ಲೋಕಸಭಾ ಚುನಾವಣೆಯಲ್ಲಿ ಶ್ರೀರಾಮುಲು ಅವರನ್ನು ಸೋಲಿಸಲು ಈ ಹಣ ಬಳಸಿದ್ದಾರೆ ಎಂದು ಆರೋಪಿಸಿದ ಅವರು, ಇಂತಹ ಭ್ರಷ್ಟ ಸರ್ಕಾರ ತೊಲಗಬೇಕಿದೆ. ಮುಖ್ಯಮಂತ್ರಿಗಳು ಇದರ ಹೊಣೆ ಹೊತ್ತು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಗಾಗಿ ಕೇಂದ್ರದಿಂದ ಯೋಜನೆ

ವಿಚಾರ ಸಂಕಿರಣದಲ್ಲಿ ಮಾನಸ ಗಂಗೋತ್ರಿ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ನವೀತ ತಿಮ್ಮಯ್ಯ



ವಿಚಾರ ಸಂಕಿರಣವನ್ನು ಪ್ರಾಧ್ಯಾಪಕಿ ಡಾ.ನವೀತ ತಿಮ್ಮಯ್ಯ ಉದ್ಘಾಟಿಸಿದರು.

ತಿ.ನರಸೀಪುರ, ಆ.11– ಪ್ರಸಕ್ತ ಕೇಂದ್ರ ಬಜೆಟ್‌ನಲ್ಲಿ 9 ಕ್ಷೇತ್ರಗಳನ್ನು ಗುರುತಿಸಿದ್ದು, ದೇಶದ ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಯ ಚೌಕಟ್ಟಿನಲ್ಲಿ ಈ ಆದ್ಯತೆಗಳನ್ನು ಸಾಕಾರಗೊಳಿಸಲು ಕೇಂದ್ರ ಸರ್ಕಾರ ಯೋಜನೆ ರೂಪಿಸಿದೆ. ಅಲ್ಲದೇ ಬಜೆಟ್‌ನಲ್ಲಿ ಬಡವರು, ಮಹಿಳೆಯರು, ಯುವ ಜನತೆ ಹಾಗೂ ರೈತರನ್ನು ಗುರಿಯಾಗಿಸಿಕೊಂಡು ವಿವಿಧ ಯೋಜನೆಗಳನ್ನು ರೂಪಿಸಲಾಗಿದೆ ಎಂದು ಮೈಸೂರು ಮಾನಸ ಗಂಗೋತ್ರಿ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಹಾಗೂ ಪ್ರಾಧ್ಯಾಪಕಿ ಡಾ.ನವೀತ ತಿಮ್ಮಯ್ಯ ತಿಳಿಸಿದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಅರ್ಥಶಾಸ್ತ್ರ ವಿಭಾಗ, ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಆಂತರಿಕ ಗುಣಮಟ್ಟ ಭರವಸೆ ಕೋಶದ ಸಹಯೋಗದಲ್ಲಿ ಕೇಂದ್ರದ ಪ್ರಸಕ್ತ ಸಾಲಿನ ಮುಂಗಡ ಪತ್ರ ಕುರಿತ ವಿಚಾರ ಸಂಕಿರಣವನ್ನು ಗಿಡಕ್ಕೆ ನೀರೆರೆದು ಉದ್ಘಾಟಿಸಿ ಮಾತನಾಡಿದ ಅವರು, ಭಾರತ ಸ್ವಾತಂತ್ರ್ಯಗಳಿಸಿ 100 ವರ್ಷ ಪೂರೈಸುವ ವೇಳೆಗೆ ವಿಕಸಿತ ರಾಷ್ಟ್ರವನ್ನಾಗಿ ರೂಪಿಸುವ ಆಶಯದಿಂದ ಯೋಜನೆಗಳನ್ನು ಪ್ರಸಕ್ತ ಸಾಲಿನ ಮುಂಗಡ ಪತ್ರದಿಂದಲೇ ಜಾರಿಗೊಳಿಸಲಾಗಿದ್ದು, ಹೊಸ ಪೀಳಿಗೆಯ ಸುಧಾರಣೆಗಳನ್ನು ಜಾರಿಗೆ ತರಲು ಯೋಜಿಸಿದೆ ಎಂದು ಹೇಳಿದರು.

ಪ್ರಸಕ್ತ ಸಾಲಿನ ಮುಂಗಡ ಪತ್ರದಲ್ಲಿ ಯುವ ಜನತೆಗೆ ಲಭ್ಯವಿರುವ ಉದ್ಯೋಗವಕಾಶಗಳು, ಪ್ರಗತಿ ಹಾದಿಗಳು ಹಾಗೂ ಸೌಲಭ್ಯಗಳ ಕುರಿತು ಅರಿವು ಮೂಡಿಸಲು ಕಾರ್ಯಕ್ರಮ ಆಯೋಜಿಸಲಾಗಿದೆ. ಯುವಜನತೆ ಈ ಬಗ್ಗೆ ಅರಿವು ಮೂಡಿಸಿಕೊಳ್ಳಬೇಕು. ಜೊತೆಗೆ ಅವಕಾಶಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲ ಡಾ.ಹೆಚ್.ವಿ.ಉದಯಕುಮಾರ್ ವಹಿಸಿದ್ದರು. ರಾ.ಸೇ.ಯೋ ಘಟಕ 2ರ ಕಾರ್ಯಕ್ರಮಾಧಿಕಾರಿ ಡಾ.ಡಿ.ಕವಿತಾ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ.ರೇಷ್ಮಾ ಚಂಗಪ್ಪ, ಐಕ್ಯೂಎಸಿ ಸಂಚಾಲಕಿ ಡಾ.ಎಂ.ಕೆ.ಮಾಧವಿ, ಸಹ ಪ್ರಾಧ್ಯಾಪಕಿ ಡಾ.ಮುತ್ತಮ್ಮ, ದೇವರಾಜೇಗೌಡ, ಹೇಮಂತಕುಮಾರ್, ಡಾ.ಅಮಿತ್, ಅನಂತ ಪದ್ಮನಾಭನ್ ಉಪಸ್ಥಿತರಿದರು.

ಕೊತ್ತೇಗಾಲ ಗ್ರಾಪಂಗೆ ಚಿಕ್ಕರಾಚಶೆಟ್ಟಿ ಅಧ್ಯಕ್ಷ



ಕೊತ್ತೇಗಾಲ ಗ್ರಾಪಂ ಅಧ್ಯಕ್ಷರಾಗಿ ಚಿಕ್ಕರಾಚಶೆಟ್ಟಿ ಆಯ್ಕೆಯಾಗಿದ್ದಾರೆ.

ಸರಗೂರು, ಆ.11– ತಾಲೂಕಿನ ಕೊತ್ತೇಗಾಲ ಗ್ರಾಪಂ ಅಧ್ಯಕ್ಷರಾಗಿ ಚಿಕ್ಕರಾಚಶೆಟ್ಟಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಚಿಕ್ಕರಾಚಶೆಟ್ಟಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಸಿ.ಗಣೇಶ್, ಪಿಡಿಓ ನಾಗೇಂದ್ರ ಘೋಷಿಸಿದರು. ಈ ವೇಳೆ ಉಪಾಧ್ಯಕ್ಷೆ ವಿಮಲಾ, ಸದಸ್ಯರಾದ ಶೋಭಾ, ಮಹದೇವಯ್ಯ, ಚೆಲುವಪ್ಪ, ಕೆ.ಆರ್.ಶೋಭಾ, ಗೌರಮ್ಮ, ಕೆಂಪಾಲಮ್ಮ, ಮಹೇಶ್, ಟಿ.ಕುಮಾರ್, ಸವಿತಾ, ಲಕ್ಷ್ಮಿದೇವಿ, ಜಿಪಂ ಮಾಜಿ ಸದಸ್ಯ ಪಿ.ರವಿ, ಬಸವರಾಜು, ಗ್ರಾಪಂ ಮಾಜಿ ಅಧ್ಯಕ್ಷ ಮಂಜುನಾಥ್ ಹಾಗೂ ಸುಂದರ್, ಬಾಲಾಜಿ, ಶಂಕರಪ್ಪ ಪುಟ್ಟೇಗೌಡ, ಕರಿಯಶೆಟ್ಟಿ, ಮಾರಶೆಟ್ಟಿ, ಚಾಮನಾಯಕ, ಬಿಲ್ ಕಲೆಕ್ಟರ್ ಗುಂಡು ಗ್ರಾಮಸ್ಥರಿದ್ದರು.

ಇಂದು ತಿ.ನರಸೀಪುರಕ್ಕೆ ಸಂಸದ ಸುನೀಲ್ ಬೋಸ್

ತಿ.ನರಸೀಪುರ, ಆ.11– ಸಂಸದ ಸುನೀಲ್ ಬೋಸ್ ಅವರು ಆ.12ರಂದು ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ಪ್ರವಾಸ ಕೈಗೊಂಡಿದ್ದಾರೆ.

ಮಧ್ಯಾಹ್ನ 12.30ಕ್ಕೆ ತಾಲೂಕಿನ ಬನ್ನೂರು ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಬಳಿಕ ಬನ್ನೂರಿನ ಅತಿಥಿ ಗೃಹದಲ್ಲಿ ಸಾರ್ವಜನಿಕರು, ಕಾರ್ಯಕರ್ತರ ಕುಂದುಕೊರತೆ ಆಲಿಸುವರು. ಬಳಿಕ 2 ಗಂಟೆಗೆ ತಿ.ನರಸೀಪುರದ ವಿನಾಯಕ ಕಾಲೋನಿಯಲ್ಲಿ ಅಂಗನವಾಡಿ ಕಟ್ಟಡಕ್ಕೆ ಗುದ್ದಲಿ ಪೂಜೆ ನೆರವೇರಿಸುವರು. ಬಳಿಕ ಮೂಗೂರಲ್ಲಿ ವಿದ್ಯಾರ್ಥಿ ನಿಲಯಕ್ಕೆ ಗುದ್ದಲಿ ಪೂಜೆ ನೆರವೇರಿಸುವರು ಎಂದು ಪ್ರಕಟಣೆ ತಿಳಿಸಿದೆ.

ಸುತ್ತೂರು ಶ್ರೀಗಳ ಆಶೀರ್ವಾದ ಪಡೆದ ಕಾರಜೋಳ



ಸಂಸದ ಗೋವಿಂದ ಎಂ.ಕಾರಜೋಳ ಅವರು ಸುತ್ತೂರು ಮಠಕ್ಕೆ ಭೇಟಿ ನೀಡಿ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಆಶೀರ್ವಾದ ಪಡೆದರು. ಈ ವೇಳೆ ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಎನ್.ಸಿ.ಬಸವಣ್ಣ, ಜಿಲ್ಲಾ ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿ ಮಧುರಾಜ್, ಓಬಿಸಿ ಮೋರ್ಚಾ ಅಧ್ಯಕ್ಷ ಉಮೇಶ್ ಮೋದಿ, ಬಿಜಾಪುರ ಜಿಪಂ ಸದಸ್ಯ ನವೀನ್ ಉಪಸ್ಥಿತರಿದ್ದರು.

ಜಿಲ್ಲಾ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷರಿಗೆ ಸನ್ಮಾನ

ಮೈಸೂರು ಜಿಲ್ಲಾ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಹಿನ್‌ಕಲ್ ಬಸವರಾಜು ಅವರನ್ನು ಮೈಸೂರಿನ ಬಸವ ಪ್ರತಿಮೆ ಬಳಿ ಪಿರಿಯಾಪಟ್ಟಣ ತಾಲೂಕು ವೀರಶೈವ ಲಿಂಗಾಯತ ಸಮಾಜದಿಂದ ಸನ್ಮಾನಿಸಲಾಯಿತು. ಈ ವೇಳೆ ತಾಲೂಕು ಶಿವಕುಮಾರ ಸ್ವಾಮಿಗಳ ಸಂಘದ ಅಧ್ಯಕ್ಷ ಶಿವಕುಮಾರಸ್ವಾಮಿ, ಪಿರಿಯಾಪಟ್ಟಣ ತಾಲೂಕು ನಿರ್ದೇಶಕ ಮಲ್ಲೇಶ್, ಬೆಟ್ಟದಪುರ ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷ ಶಿವದೇವ್, ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಚಂದ್ರಶೇಖರ್, ಕಾರ್ಯದರ್ಶಿ ಶಿವು, ಮುಖಂಡರಾದ ಎಸ್.ಮಲ್ಲೇಶ್ ಮಂಜುನಾಥ್, ಮಹದೇವಪ್ಪ, ರಾಜೇಂದ್ರ, ಪುನೀತ್, ನಂದಕುಮಾರ್, ಪ್ರಸನ್ನ, ಶಾಂತಕುಮಾರ್



ಮೂರನೇ ಪುಟದಿಂದ

ಸಚಿವ ಕುಮಾರಸ್ವಾಮಿ ಭತ್ತ ನಾಟಿ

ತೆಗೆದುಕೊಳ್ಳಲು ಮುಗಿಬಿದ್ದರು. ನಾಟಿ ಮಾಡಿದ ಬಳಿಕ ನಿಖಿಲ್ ಕುಮಾರಸ್ವಾಮಿ ಅವರು ಗದ್ದೆಯೊಳಗೆ ನಿಂತುಕೊಂಡು ಮಹಿಳೆಯರೊಂದಿಗೆ ಫೋಟೋ ಕ್ಲಿಕ್ಕಿಸಿಕೊಂಡರು.

ನೂರಾರು ಮಂದಿ: ಕುಮಾರಸ್ವಾಮಿ ಅವರೊಂದಿಗೆ ನಾಟಿ ಮಾಡಲು ನೂರಾರು ಮಂದಿ ಮಹಿಳೆಯರು, 50 ಮಂದಿ ಪುರುಷರು ಹಾಗೂ 12 ಜತೆ ಎತ್ತುಗಳ ಬಳಕೆ ಮಾಡಿಕೊಳ್ಳಲಾಗಿತ್ತು. ಭತ್ತದ ಗದ್ದೆ ಸುತ್ತ ಬಣ್ಣ ಬಣ್ಣದ ಬ್ಯಾನರ್‌ಗಳು, ನಾನಾ ಚಿತ್ರಗಳು, ಎತ್ತಿನಗಾಡಿಗಳು, ತಳಿರು ತೋರಣಗಳಿಂದ ಶೃಂಗರಿಸುವ ಮೂಲಕ ಹಬ್ಬದ ವಾತಾವರಣವನ್ನು ಸೃಷ್ಟಿಸಲಾಗಿತ್ತು. ನಾಟಿಗದ್ದೆ ಪಕ್ಕದಲ್ಲಿಯೇ ಜಾನಪದ ಗೀತೆ ಹಾಗೂ ಗೀತಗಾಯನಕ್ಕಾಗಿ ಪ್ರತ್ಯೇಕ ವೇದಿಕೆಯನ್ನು ನಿರ್ಮಿಸಲಾಗಿತ್ತು.

ಜಾನಪದ ಕಲಾವಿದರಾದ ಕೆರೆತೊಣ್ಣೂರು ಸ್ವಾಮೀಗೌಡ, ಹೆಗ್ಗಡಹಳ್ಳಿ ಕೃಷ್ಣೇಗೌಡ ಹಾಗೂ ಲಕ್ಷ್ಮೀಸಾಗರ ಲಕ್ಷ್ಮಮ್ಮ ಮತ್ತು ತಂಡದವರು ಸೋಬಾನೆ ಗೀತೆಗಳನ್ನು ಹಾಡಿದರು. ಮೈಸೂರಿನ ನಾಗೇಶ್ ಕಂದೇಗಾಲ ಮತ್ತು ತಂಡ ಸುಗಮ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟಿತು. ನಾಟಿ ವೀಕ್ಷಿಸಲು ಆಗಮಿಸಿದ್ದ ಎಲ್ಲರಿಗೂ ರಾಗಿಮುದ್ದೆ, ಅವರೆಕಾಳು ಕೂಟು, ಮೊಸಪ್ಪು, ಹೆಸರುಬೇಳೆ ಪಾಯಸ, ಅನ್ನಸಾಂಬಾರ್ ಊಟವನ್ನು ಬಡಿಸಲಾಯಿತು. ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಎಚ್.ಮಂಜುನಾಥ್, ಜೆಡಿಎಸ್ ಯುವ ನಾಯಕ ಸಿ.ಪಿ.ಶಿವರಾಜು, ನಲ್ಲಿಗೆರೆ ಬಾಲು, ಅಮರಾವತಿ ಚಂದ್ರಶೇಖರ್, ಎಸ್.ಎ.ಮಲ್ಲೇಶ್, ಡಿಸಿಸಿ ಬ್ಯಾಂಕ್ ನಿರ್ದೇಶಕರಾದ ಗುರುಸ್ವಾಮಿ, ಚಲುವರಾಜು, ಟಿಎಪಿಸಿಎಂಎಸ್ ನಿರ್ದೇಶಕ ರಾಮಕೃಷ್ಣೇಗೌಡ, ವಿ.ಎಸ್.ನಿಂಗೇಗೌಡ, ಗವೀಗೌಡಪ್ರವೀಣ್, ಚೇತನ್, ಗ್ರಾಪಂ ಮಾಜಿ ಅಧ್ಯಕ್ಷರಾದ ಮಹದೇವು, ವಿಶ್ವನಾಥ್ ಸೇರಿದಂತೆ ಅನೇಕ ಮುಖಂಡರು ಈ ವೇಳೆ ಹಾಜರಿದ್ದರು.

ರೈತರ ಜೀವನ ಈಗ ಸಂಕಷ್ಟದಲ್ಲಿದೆ

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್‌ಕುಮಾರಸ್ವಾಮಿ ಮಾತನಾಡಿ, ರೈತರ ಕುಟುಂಬದಿಂದ ಬಂದ ಎಚ್.ಡಿ.ದೇವೇಗೌಡರು, ಎಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಗಳಾಗಿ ರಾಜ್ಯದ ಉದ್ದಗಲಕ್ಕೂ ಸಾಕಷ್ಟು ಜನಪರ, ರೈತಪರವಾದ ಆಡಳಿತ ನಡೆಸಿದ್ದಾರೆ. ಎಚ್.ಡಿ.ಕುಮಾರಸ್ವಾಮಿ ಅವರಿಗೆ ಸಿಕ್ಕಂತಹ ಕಡಿಮೆ ಅಧಿಕಾರದ ಅವಧಿಯಲ್ಲಿ ರೈತರ ಸಾಲಮನ್ನಾ ಮಾಡಿದ್ದರು. ಆತ್ಮಹತ್ಯೆ ಮಾಡಿಕೊಂಡ ರೈತರ ಮನೆಗೆ ತೆರಳಿ ಆರ್ಥಿಕ ನೆರವು ನೀಡಿ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಿದ್ದರು ಎಂದರು. ಪ್ರಸ್ತುತ ದಿನಗಳಲ್ಲಿ ರೈತ ಸಮುದಾಯ ಸಂಕಷ್ಟದಲ್ಲಿದೆ, ರೈತರ ಬೆಳೆಗಳಿಗೆ ಸೂಕ್ತವಾದ ಬೆಲೆಗಳು ದೊರೆಯುತ್ತಿಲ್ಲ. ಎಚ್.ಡಿ.ಕುಮಾರಸ್ವಾಮಿ ಅವರು ಪಂಚರತ್ನ ಯೋಜನೆಗಳನ್ನು ಹಮ್ಮಿಕೊಂಡಿದ್ದರು. ಇದೊಂದು ಉತ್ತಮವಾದ ಯೋಜನೆಯಾಗಿದೆ. ಎಚ್‌ಡಿಕೆಗೆ ಅವರಿಗೆ ಐದು ವರ್ಷ ಅಧಿಕಾರ ಸಿಕ್ಕರೆ ರೈತರು, ಜನರ ಸಮಸ್ಯೆಗಳನ್ನು ಪರಿಹರಿಸಲಿದ್ದಾರೆ ಎನ್ನುವ ವಿಶ್ವಾಸವಿದೆ ಎಂದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜಣ್ಣ ಅವರ ನೇತೃತ್ವದಲ್ಲಿ ಯಶಸ್ವಿಯಾಗಿ ಭತ್ತದ ನಾಟಿ ಮಾಡುವ ಕಾರ್ಯ ಮಾಡಿದ್ದೇವೆ. ಜಿಲ್ಲೆಯ ಜನತೆ ನಮ್ಮ ಕುಟುಂಬದ ಮೇಲೆ ಸಾಕಷ್ಟು ವಿಶ್ವಾಸ ಇಟ್ಟುಕೊಂಡಿದ್ದೀರಿ. ಭ್ರಷ್ಟ ಕಾಂಗ್ರೆಸ್ ವಿರುದ್ಧಜೆಡಿಎಸ್–ಬಿಜೆಪಿ ಮೈಸೂರು ಚಲೋ ಪಾದಯಾತ್ರೆ ಮಾಡಿದ ಸಂದರ್ಭದಲ್ಲಿ ತಾಯಂದಿರು ಆರತಿ ಬೆಳಗಿ ಆಶೀರ್ವದಿಸಿ ನಮ್ಮ ಜತೆಯಲ್ಲಿ ಮೈಸೂರುವರೆಗೂ ಹೆಜ್ಜೆ ಹಾಕಿ ಯಶಸ್ವಿಗೊಳಿಸಿದ್ದೀರಿ ಎಂದು ಕೃತಜ್ಞತೆ ಸಲ್ಲಿಸಿದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ಎರಡು ವರ್ಷಗಳಿಂದ ಬರಗಾಲದಿಂದ ಕೆಂಗೆಟ್ಟಿದ್ದ ರೈತರು ಎಚ್.ಡಿ.ಕುಮಾರಸ್ವಾಮಿ ಅವರು ಗೆದ್ದು ಮಂತ್ರಿಯಾಗುತ್ತಿದ್ದಂತೆಯೇ ಉತ್ತಮ ಮಳೆಯಾಗಿ ಕಾವೇರಿ ತುಂಬಿ ಹರಿದಿದ್ದಾಳೆ. ರೈತರ ಬಯಕೆಯಂತೆ ಎಚ್.ಡಿ.ಕುಮಾರಸ್ವಾಮಿ ಅವರನ್ನು ಕರೆಸಿ ಭತ್ತದ ನಾಟಿ ಮಾಡುವ ಕಾರ್ಯಕ್ಕೆ ಚಾಲನೆ ನೀಡಿ ರೈತರ ಉತ್ಸಾಹ ಹೆಚ್ಚಿಸಿದ್ದೇವೆ. ಎಚ್.ಡಿ.ಕುಮಾರಸ್ವಾಮಿ ಅವರು 2018ರಲ್ಲೂ ಇದೇ ಆಗಸ್ಟ್ 11ರಂದೇ ನಾಟಿ ಮಾಡಿದ್ದರು. ಕಾಕತಾಳೀಯ ಎಂದರೆ ಕೇಂದ್ರ ಸಚಿವರಾದಾಗಲೂ ಸಹ ಆ.11ರಂದು ಕಾವೇರಿಗೆ ಪೂಜೆಸಲ್ಲಿಸಿ ಭತ್ತದ ನಾಟಿ ಮಾಡಿದ್ದಾರೆ ಎಂದರು.

ಧ್ಯಾನದಿಂದ ಚಿಂತೆ, ಯೋಚನೆ, ಮಾನಸಿಕ ರೋಗ ಮುಕ್ತ

ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾನಿಲಯದ ರಾಜಯೋಗಿ ಡಾ.ಬಿ.ಕೆ.ಮೃತ್ಯುಂಜಯ



ಕಾರ್ಯಕ್ರಮವನ್ನು ರಾಜಯೋಗಿ ಡಾ.ಬಿ.ಕೆ ಮೃತ್ಯುಂಜಯ ಉದ್ಘಾಟಿಸಿದರು.

ಹೆಚ್.ಡಿ.ಕೋಟೆ, ಆ.11– ಧ್ಯಾನ ಮಾಡುವುದರಿಂದ ಚಿಂತೆ, ಯೋಚನೆಗಳು, ಮಾನಸಿಕ ರೋಗದಿಂದ ಮುಕ್ತರಾಗಬಹುದು ಎಂದು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾನಿಲಯದ ರಾಜಯೋಗಿ ಡಾ.ಬಿ.ಕೆ.ಮೃತ್ಯುಂಜಯ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ನಡೆದ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯದ ನೂತನ ಸಭಾಂಗಣ ಉದ್ಘಾಟನಾ ಸಮಾರಂಭ ಹಾಗೂ 39ನೇ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲಿವರೆಗೆ ನಮ್ಮ ಮನಸ್ಸನ್ನು ಸ್ವಚ್ಛ ಮಾಡಿಕೊಳ್ಳುವುದಿಲ್ಲವೋ, ಅಲ್ಲಿವರೆಗೆ ನಾವು ಆರೋಗ್ಯವಾಗಿ ಹಾಗೂ ನಮ್ಮ ಜೀವನ ಸುಖಮಯವಾಗಿರಲು ಸಾಧ್ಯವಿಲ್ಲ. ಆದ್ದರಿಂದ ನಮ್ಮ ಆತ್ಮಶುದ್ಧಿಯಾಗಲು ಧ್ಯಾನ ಮಾಡಲು ಮುಂದಾಗಬೇಕು ಎಂದರು.

ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯವು ಒಂದು ಅಂತಾರಾಷ್ಟ್ರೀಯ ಸರ್ಕಾರೇತರ ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಾಗಿದ್ದು, 140 ರಾಷ್ಟ್ರಗಳಲ್ಲಿ ಮೌಲ್ಯಾಧಾರಿತ ಜೀವನ ನಡೆಸುವ ಕೌಶಲ ಕಲಿಸುವ ಸೇವೆ ಮಾಡುತ್ತಿದೆ. ಕಳೆದ 88 ವರ್ಷಗಳಿಂದ ರಾಜಯೋಗ ಧ್ಯಾನದ ಅಭ್ಯಾಸ ಹಾಗೂ ಆತ್ಮ ನಿರೀಕ್ಷೆ ತರಬೇತಿ ಮೂಲಕ ಸ್ವಪರಿವರ್ತನೆ ಹಾಗೂ ಮಾನವನಲ್ಲಿರುವ ನಿಗೂಢ ಸಾಮರ್ಥ್ಯಗಳನ್ನು ಹೊರತಂದು ಶಾಂತಿ ಹಾಗೂ ಸಾಮರ್ಥ್ಯವನ್ನು ಪುನಃ ವಿಶ್ವದಲ್ಲಿ ಸ್ಥಾಪಿಸಲು ತನ್ನ 9000 ಸೇವಾ ಕೇಂದ್ರಗಳ ಮೂಲಕ ಸೂಕ್ತ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಸಂಸ್ಥೆಯು ತನ್ನ ಕೃಷಿ, ಶಿಕ್ಷಣ, ಮಹಿಳಾ, ರಾಜಕಾರಣಿಗಳ ಸೇವಾ ವಿಭಾಗ, ಆಡಳಿತಗಾರರ ಸೇವಾ ವಿಭಾಗ, ಯುವ ವಿಭಾಗ, ಮುಂತಾದ 20 ಸೇವಾ ವಿಭಾಗಗಳ ಮೂಲಕ ಸಮಾಜದ ವಿವಿಧ ವೃತ್ತಿಪರರಿಗೆ ಅವಶ್ಯಕತೆ ಇರುವ ಶೈಕ್ಷಣಿಕ ಕೋರ್ಸ್‌ಗಳನ್ನು ಆಯೋಜಿಸುತ್ತಿದೆ. ಇದರಿಂದ ಬದಲಾಗುತ್ತಿರುವ ಸನ್ನಿವೇಶಗಳನ್ನು ಸಮರ್ಥವಾಗಿ ನಿಭಾಯಿಸುವ ಕಲೆ ಸಿದ್ಧಿಸುತ್ತಿದೆ ಹಾಗೂ ತಮ್ಮ ನೈತಿಕ ಸ್ಥೈರ್ಯ ಗಟ್ಟಿ ಮಾಡಿಕೊಳ್ಳುತ್ತಾ ಕಠಿಣ ಸಮಯದಲ್ಲಿ ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳಲು ಕೂಡ ಸಾಧ್ಯವಾಗುತ್ತಿದೆ ಎಂದರು.

ಮೌಲ್ಯಗಳನ್ನು ನಮ್ಮಲ್ಲಿ ಬೆಳೆಸಿಕೊಂಡಾಗ ನಾವು ಅವುಗಳ ಸೌರಭವನ್ನು ಹಂಚಿಕೊಳ್ಳುತ್ತೇವೆ ಹಾಗೂ ಇನ್ನೂ ಉತ್ತಮವಾದ ಪ್ರಪಂಚದೆಡೆಗೆ ಮುನ್ನಡೆಯುತ್ತೇವೆ. ಮೌಲ್ಯಗಳೇ ಜೀವನದ ಸತ್ಯ ಖಜಾನೆ. ಅವು ಮನುಷ್ಯನನ್ನು ಐಶ್ವರ್ಯವಂತನಾಗಿ ಮಾಡಿ ಶ್ರೀಮಂತಗೊಳಿಸುತ್ತವೆ. ಮೌಲ್ಯಗಳು ಜೀವನಕ್ಕೆ ಸಂತೋಷ ತರುವ ಮಿತ್ರರು. ಮೌಲ್ಯಗಳಿಂದ ತುಂಬಿದ ಜೀವನವು ಆತ್ಮಗೌರವ ಮತ್ತು ಘನತೆಗಳ ಸಮ್ಮಿಲನ. ಜೀವನ ಮೌಲ್ಯಗಳು ಸಬಲೀಕರಣ ತರುವುದರಿಂದ ದೌರ್ಬಲ್ಯ, ಲೋಪಗಳನ್ನು ನಿವಾರಿಸಲು ಸಾಧ್ಯವಾಗುತ್ತದೆ ಎಂದರು.

ಕಾರ್ಯಕ್ರಮಕ್ಕೂ ಮುನ್ನ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಶಾಂತಿ ಸದ್ಭಾವನಾ ಮೆರವಣಿಗೆ ನಡೆಯಿತು. ವೇದಿಕೆ ಕಾರ್ಯಕ್ರಮದಲ್ಲಿ ಮಕ್ಕಳಿಂದ ಭರತನಾಟ್ಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ರಾಜಯೋಗಿ ಬಿ.ಕೆ ಲಕ್ಷ್ಮಿ ಜಿ, ಗೋವಿಂದೇಗೌಡ, ರಾಜಯೋಗಿ ಬಿ.ಕೆ.ನಾಗರಾಜ್, ರಘು, ಜಯಸಿಂಹ, ಪ್ರಾಣೇಶ್, ರಂಗನಾಥ್, ಕಲ್ಪನಾ, ರಾಜಣ್ಣ ಕುಮಾರ್, ಗೀತಾ ಇನ್ನಿತರರಿದ್ದರು.

ಗಾವಡಗೆರೆ ಕರ್ನಾಟಕ ಪಬ್ಲಿಕ್ ಶಾಲೆಗೆ ಸಮಗ್ರ ಪ್ರಶಸ್ತಿ

ಹೋಬಳಿ ಮಟ್ಟದ ಪ್ರೌಢಶಾಲಾ ವಿಭಾಗದ ಕ್ರೀಡಾಕೂಟ



ಸಮಗ್ರ ಪ್ರಶಸ್ತಿಯೊಂದಿಗೆ ಗಾವಡಗೆರೆ ಕರ್ನಾಟಕ ಪಬ್ಲಿಕ್ ಪ್ರೌಢಶಾಲೆ ವಿದ್ಯಾರ್ಥಿಗಳು.

ಹಿರೀಕ್ಯಾತನಹಳ್ಳಿ, ಆ.11– ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿ ಮಟ್ಟದ ಪ್ರೌಢಶಾಲಾ ವಿಭಾಗದ ಕ್ರೀಡಾಕೂಟದಲ್ಲಿ ಗಾವಡಗೆರೆ ಕರ್ನಾಟಕ ಪಬ್ಲಿಕ್ ಪ್ರೌಢಶಾಲೆ ಸಮಗ್ರ ಪ್ರಶಸ್ತಿ ಪಡೆದಿದೆ.

ಗ್ರಾಮದ ಪ್ರೌಢಶಾಲಾ ಆವರಣದಲ್ಲಿ ನಡೆದ ಕ್ರೀಡಾಕೂಟದ ಸಮಾರೋಪ ಸಮಾರಂಭದಲ್ಲಿ ಗಾವಡಗೆರೆ ಕೆಪಿಎಸ್‌ಸಿ ಶಾಲೆ ಸಮಗ್ರ ಪ್ರಶಸ್ತಿ ಪಡೆದರೆ, ಬಾಲಕಿಯರ ವಿಭಾಗದಲ್ಲಿ ಹರವೆ ಸರ್ಕಾರಿ ಪ್ರೌಢಶಾಲೆ ಸ್ಫೂರ್ತಿ, ಬಾಲಕರ ವಿಭಾಗದಲ್ಲಿ ಕಟ್ಟೆಮಳಲವಾಡಿ ಸರ್ಕಾರಿ ಪ್ರೌಢಶಾಲೆಯ ರಾಹುಲ್ ಚಾಂಪಿಯನ್‌ಶಿಪ್ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ.

ಬಹುಮಾನ ವಿತರಿಸಿ ಮಾತನಾಡಿದ ಹಿರೀಕ್ಯಾತನಹಳ್ಳಿ ಸರ್ಕಾರಿ ಪ್ರೌಢಶಾಲೆ ಮುಖ್ಯಶಿಕ್ಷಕಿ ಸರಳ ಮಾತನಾಡಿ, ಗೆಲುವು ಸಾಧಿಸಿದ ಕ್ರೀಡಾಪಟುಗಳು ಮುಂದೆ ಮತ್ತಷ್ಟು ಅಭ್ಯಾಸದೊಂದಿಗೆ ಆಯ್ಕೆಯಾಗಿ ತಾಲೂಕಿಗೆ ಕೀರ್ತಿ ತರುವ ಜೊತೆಗೆ ತಮ್ಮ ಭವಿಷ್ಯವನ್ನು ಕ್ರೀಡೆಯೊಂದಿಗೆ ರೂಪಿಸಿಕೊಳ್ಳಲು ಸುವರ್ಣ ಅವಕಾಶವಿದ್ದು, ಹೀಗಾಗಿ ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವಂತೆ ಕಿವಿಮಾತು ಹೇಳಿದರು. ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಲೋಕೇಶ್ ಮಾತನಾಡಿ, ಗ್ರಾಮೀಣ ಕ್ರೀಡಾಪಟುಗಳಿಗೆ ಪೌಷ್ಟಿಕ ಆಹಾರದ ಕೊರತೆ ಇದ್ದು, ಹೆಚ್ಚಿನ ಪೌಷ್ಟಿಕಾಂಶವಿರುವ ಆಹಾರ ಸೇವಿಸಿ ಬಲಿಷ್ಠಗೊಳ್ಳಬೇಕಿದೆ. ಆದರೂ ಸಾಧನೆ ಮಾಡುತ್ತಿರುವುದು ಹೆಮ್ಮೆಯ ವಿಷಯ ಎಂದರು.

ಬಾಲಕರ ವಿಭಾಗದ ಖೋಖೋ ಪಂದ್ಯಾವಳಿಯಲ್ಲಿ ಹಿರೀಕ್ಯಾತನಹಳ್ಳಿ ಸರ್ಕಾರಿ ಪ್ರೌಢಶಾಲೆ ಪ್ರಥಮ, ಗಾವಡಗೆರೆ ಕೆಪಿಎಸ್‌ಸಿ ಶಾಲೆ ದ್ವಿತೀಯ, ವಾಲಿಬಾಲ್‌ನಲ್ಲಿ ಗಾವಡಗೆರೆ ಕೆಪಿಎಸ್‌ಸಿ ಶಾಲೆ ಪ್ರಥಮ, ಮುಳ್ಳೂರು ಸರ್ಕಾರಿ ಪ್ರೌಢಶಾಲೆ ದ್ವಿತೀಯ, ಕಬಡ್ಡಿಯಲ್ಲಿ ಗಾವಡಗೆರೆ ಕೆಪಿಎಸ್‌ಸಿ ಶಾಲೆ ಪ್ರಥಮ, ಬಿಳಿಗೆರೆ ಗ್ರಾಮದ ಅನ್ವೇಷಣಾ ಪ್ರೌಢಶಾಲೆ ದ್ವಿತೀಯ, ಥ್ರೋಬಾಲ್‌ನಲ್ಲಿ ಕಟ್ಟೆಮಳಲವಾಡಿ ಸರ್ಕಾರಿ ಪ್ರೌಢಶಾಲೆ ಪ್ರಥಮ, ಹರವೆ ಸರ್ಕಾರಿ ಪ್ರೌಢಶಾಲೆ ದ್ವಿತೀಯ ಸ್ಥಾನ ಪಡೆದಿದೆ. ಬಾಲಕಿಯರ ವಿಭಾಗದ ಖೋ ಖೋ ಪಂದ್ಯಾವಳಿಯಲ್ಲಿ ಹರವೆ ಗ್ರಾಮದ ಬಸವೇಶ್ವರ ಪ್ರೌಢಶಾಲೆ ಪ್ರಥಮ, ಹಿರೀಕ್ಯಾತನಹಳ್ಳಿ ಪ್ರೌಢಶಾಲೆ ದ್ವಿತೀಯ, ಕಬಡ್ಡಿಯಲ್ಲಿ ಗಾವಡಗೆರೆ ಕೆಪಿಎಸ್‌ಸಿ ಶಾಲೆ ಪ್ರಥಮ, ಹರವೆ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ದ್ವಿತೀಯ, ವಾಲಿಬಾಲ್‌ನಲ್ಲಿ ಗಾವಡಗೆರೆ ಕೆಪಿಎಸ್‌ಸಿ ಶಾಲೆ ಪ್ರಥಮ, ಹಿರೀಕ್ಯಾತನಹಳ್ಳಿ ಸರ್ಕಾರಿ ಪ್ರೌಢಶಾಲೆ ದ್ವಿತೀಯ, ಥ್ರೋಬಾಲ್‌ನಲ್ಲಿ ಹರವೆ ಸರ್ಕಾರಿ ಪ್ರೌಢಶಾಲೆ ಪ್ರಥಮ, ಹರವೆ ಬಸವೇಶ್ವರ ಪ್ರೌಢಶಾಲೆ ದ್ವಿತೀಯ ಸ್ಥಾನ ಪಡೆದಿದೆ.

ಕಾರ್ಯಕ್ರಮದಲ್ಲಿ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಪುಟ್ಟರಾಜು, ಸದಸ್ಯರಾದ ಜಯಣ್ಣ, ಮಹದೇವ, ಸಂಪತ್ತು, ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಹರೀಶ್, ಕೃಷ್ಣೇಗೌಡ, ತಾಲೂಕು ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷ ಜಗದೀಶ್, ಸಹ ಶಿಕ್ಷಕರಾದ ಚಿಕ್ಕಣ್ಣ, ಮಹೇಶ್, ಮಮತಾ, ಭಾರತಿ, ಡಯಾನ ಟೆಲ್ಲಿಸ್, ಸುನೀಲ್ ಸೇರಿದಂತೆ ಇತರರಿದ್ದರು.

ಮೈಸೂರು ಮಿತ್ರ

ಅನ್ನದಾತರಿಗೆ ಎಲ್ಲಾ ವರ್ಗದವರ ಪ್ರೋತ್ಸಾಹ ಅಗತ್ಯ


ಯು.ಜಿ.ಮೋಹನ್ ಕುಮಾರ್ ಸ್ವಾತಂತ್ರ್ಯ ಹೋರಾಟಗಾರರ ಚಿತ್ರಕಲಾ ಪ್ರದರ್ಶನ

ಮೈಸೂರು, ಆ.11(ಜಿಎ)–ಅನ್ನದಾತ ಎಷ್ಟೇ ಕಷ್ಟ ಇರಲಿ ಎಲ್ಲರಿಗೂ ಅನ್ನವನ್ನು ಬೆಳೆದುಕೊಡುತ್ತಾನೆ. ಆತ ಇಲ್ಲದಿದ್ದಲ್ಲಿ ಹಸಿವು ನೀಗಿಸಲಾಗದು ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ ಅಭಿಪ್ರಾಯಪಟ್ಟರು.

ಕನ್ನಡ ಸಾಹಿತ್ಯ ಕಲಾಕೂಟ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯು ಕಲಾಮಂದಿರದ ಸುಚಿತ್ರ ಕಲಾ ಗ್ಯಾಲರಿಯಲ್ಲಿ ಭಾನುವಾರ ಏರ್ಪಡಿಸಿದ್ದ ಯು.ಜಿ. ಮೋಹನಕುಮಾರ್ ಆರಾಧ್ಯ ಅವರ ಸ್ವಾತಂತ್ರ್ಯ ಹೋರಾಟಗಾರರ ಚಿತ್ರಕಲಾ ಪ್ರದರ್ಶನ ಹಾಗೂ ಅನ್ನದಾತರೊಂದಿಗೆ ಸ್ವಾತಂತ್ರ್ಯೋತ್ಸವ ಆಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹಸಿದವರಿಗೆ ಮಾತ್ರ ಅನ್ನ ಹಾಗೂ ಅನ್ನದಾತರ ಬೆಲೆ ಗೊತ್ತಿರುತ್ತದೆ. ಅನ್ನದಾತ ಎಷ್ಟೇ ಕಷ್ಟ ಇರಲಿ ಎಲ್ಲರಿಗೂ ಅನ್ನವನ್ನು ಬೆಳೆದುಕೊಡುತ್ತಾನೆ. ಆತ ಇಲ್ಲದಿದ್ದಲ್ಲಿ ಹಸಿವು ನೀಗಿಸಲಾಗದು. ಹೀಗಾಗಿ ಅನ್ನದಾತರಿಗೆ ಸಮಾಜದ ಎಲ್ಲ ವರ್ಗದ ಜನ ಪ್ರೋತ್ಸಾಹ ನೀಡಬೇಕು ಎಂದು ಅವರು ಕರೆ ನೀಡಿದರು.

ಕಲಾವಿದ ಮೋಹನಕುಮಾರ್ ಆರಾಧ್ಯ ಅವರು ಕೇವಲ ಪೆನ್ ಬಳಸಿ, ಸ್ವಾತಂತ್ರ್ಯಯೋಧರ ಚಿತ್ರಗಳನ್ನು ರಚಿಸಿ, ಪ್ರದರ್ಶಿಸಿರುವುದು ಮೆಚ್ಚುಗೆ ವಿಷಯ. ನಮಗೆ ಕೇವಲ ಬೆರಳೆಣಿಕೆಯಷ್ಟು ಸ್ವಾತಂತ್ರ್ಯ



ಕಲಾಮಂದಿರದ ಸುಚಿತ್ರ ಕಲಾ ಗ್ಯಾಲರಿಯಲ್ಲಿ ಕನ್ನಡ ಸಾಹಿತ್ಯ ಕಲಾಕೂಟ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯು ಭಾನುವಾರ ಏರ್ಪಡಿಸಿದ್ದ ಯು.ಜಿ. ಮೋಹನಕುಮಾರ್ ಆರಾಧ್ಯ ಅವರ ಸ್ವಾತಂತ್ರ್ಯ ಹೋರಾಟಗಾರರ ಚಿತ್ರಕಲಾ ಪ್ರದರ್ಶನಕ್ಕೆ ಚಾಲನೆ ನೀಡಲಾಯಿತು.

ಯೋಧರು ಮಾತ್ರ ಗೊತ್ತು. ಆದರೆ ಇಲ್ಲಿ 73 ಮಂದಿಯ ಚಿತ್ರ ಹಾಗೂ ಅವರ ಬಗ್ಗೆ ವಿವರಗಳನ್ನು ಹಾಕಿರುವುದು ಉತ್ತಮವಾದುದು ಎಂದರು.

ಕರ್ನಾಟಕ ರಾಜ್ಯ ರೈತ ಸಂಘದ ಸಂಸ್ಥಾಪಕ ಸದಸ್ಯ ಪ್ರೊ.ಕೆ.ಸಿ.ಬಸವರಾಜು ಮಾತನಾಡಿ, ಹಸಿರು ಸಮೃದ್ಧಿಯ ಸಂಕೇತ. ಹಸಿರು ಬದಲಾವಣೆಯ ಸಂಕೇತ. ಇವತ್ತು ಕೂಡ ಪರ್ಯಾಯ ಶಕ್ತಿಯಾಗಬಲ್ಲ ತಾಕತ್ತು ಇರುವುದು ರೈತ ಸಂಘಕ್ಕೆ ಮಾತ್ರ ಎಂದರು.

ಎಪ್ಪತ್ತರ ದಶಕದ ದಲಿತ, ಎಂಭತ್ತರ ದಶಕದ ರೈತ ಹಾಗೂ ಭಾಷಾ ಚಳವಳಿಯಿಂದಾಗಿ ರಾಜ್ಯದಲ್ಲಿ ಸರ್ಕಾರಗಳೇ ಉರುಳಿವೆ. ಎಂಭತ್ತರ ದಶಕದಲ್ಲಿ ರೈತರು ಬಂದರೇ ವಿಧಾನಸೌಧ ಗಡಗಡ ನಡುಗುತ್ತಿತ್ತು. ಆದರೆ ಇವತ್ತು ಯಾರ್ಯಾರೋ ಹಸಿರು ಶಾಲು ಹಾಕಿಕೊಂಡಿದ್ದಾರೆ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಹುಣಸೂರು ತಾಲೂಕು ಮನುಗನಹಳ್ಳಿಯ ಬಿ. ವೀರಭದ್ರಪ್ಪ, ಹನುಮಂತಪುರದ ವಸಂತ, ನಂಜನಗೂಡು ತಾ. ಕಪ್ಪಸೋಗೆಯ ಮಹೇಂದ್ರ ಮುದ್ದಹಳ್ಳಿಯ ಕುಮಾರಸ್ವಾಮಿ, ಚಿಕ್ಕಸ್ವಾಮಿ, ಟಿ. ನರಸೀಪುರ ತಾಲೂಕು ಅತ್ತಹಳ್ಳಿಯ ದೇವರಾಜ್, ಹುಣಸೂರು ತಾ. ಹೊಸೂರು ಕುಮಾರ್, ಮಂಜು ಕಿರಣ್, ಕುಳ್ಳೇಗೌಡ ಅವರನ್ನು ಸನ್ಮಾನಿಸಲಾಯಿತು.

ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಹೆಳವರ ಹುಂಡಿ ಸಿದ್ದಪ್ಪ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಆಲನಹಳ್ಳಿ ಶಾಶ್ವತ ಸೇವಾ ಸ್ಕೂಲ್ ಕಾರ್ಯದರ್ಶಿ ಎಂ.ಆರ್. ಚೌದರಿ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ. ಲಿಂಗರಾಜು, ಕರ್ನಾಟಕ ರಾಜ್ಯಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್. ಶಿವರಾಂ, ಕನ್ನಡ ಚಳವಳಿಗಾರ ಮೂಗೂರು ನಂಜುಂಡಸ್ವಾಮಿ, ಜಿಲ್ಲಾ ಉಪ್ಪಾರ ಸಮಾಜದ ಅಧ್ಯಕ್ಷ ಯೋಗೇಶ್ ಉಪ್ಪಾರ್, ಮಡಿವಾಳ ಸಮಾಜದ ಮುಖಂಡ ರವಿನಂದನ್, ಶೋಭಾರಾಣಿ, ಶಿ.ಕುಮಾರಸ್ವಾಮಿ, ಮುಖ್ಯ ಶಿಕ್ಷಕಿ ಪವಿತ್ರಾ, ಮುಕ್ತಕ ಕವಿ ಮುತ್ತುಸ್ವಾಮಿ, ಕಲಾವಿದ ಯು,ಜಿ. ಮೋಹನಕುಮಾರ್ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಪಾರ್ಕ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ರಾಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಬ್ಯಾಡ್ ನ್ಯೂಸ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಕಬಂಧ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಫ್ಯಾಮಿಲಿ ಡ್ರಾಮಾ (ಕ)	4 ಪ್ರದರ್ಶನಗಳು
ರಾಜಕಮಲ್	
ಅಂಧಗನ್ (ತ)	4 ಪ್ರದರ್ಶನಗಳು
ಸಂಗಂ	
ಭೀಮಾ (ಕ)	4 ಪ್ರದರ್ಶನಗಳು
ಲಿಡೋ	
ಜೀನಿಯಸ್ ಮುತ್ತ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಕೇಸ್ ನಂ.15 (ತೆ)	4 ಪ್ರದರ್ಶನಗಳು
ಪ್ರಭಾ	
ಕಬಂಧ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಬೆ.10.55ಕ್ಕೆ, ಮ.1.35ಕ್ಕೆ, ಸಂ.4.20ಕ್ಕೆ, ರಾ.7.10ಕ್ಕೆ, ಕಮಿಟಿ ಕುರ್ರೋಳು (ತೆ): ರಾ.9.55ಕ್ಕೆ.
ಸ್ಕ್ರೀನ್ 2	ಭೀಮಾ (ಕ): ಬೆ.10.05ಕ್ಕೆ, ಮಿನ್‌ಮಿನಿ (ತ): ಮ.1ಕ್ಕೆ, ಕಲ್ಕಿ 2898 ಎಡಿ(3ಡಿ)(ತೆ): ಮ.3.50ಕ್ಕೆ, ರಾಯನ್ (ತ): ರಾ.7.15ಕ್ಕೆ, ಅಡಿಯೋಸ್ ಅಮಿಗೋ (ಮ): ಬೆ.10.05ಕ್ಕೆ.
ಸ್ಕ್ರೀನ್ 3	ಕಬಂಧ (ಕ): ಬೆ.10.35ಕ್ಕೆ, ಜೀನಿಯಸ್ ಮುತ್ತ (ಕ): ಮ.1.20ಕ್ಕೆ, ಅಂಧಗನ್ ದಿ ಪೇನಿಸ್ಟ್ (ತ): ಸಂ.4ಕ್ಕೆ, ಇಟ್ ಎಂಡ್ಸ್ ವಿಥ್ ಅಸ್ (ಇಂ): ರಾ.7ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 4	ಭೀಮಾ (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಅಂಧಗನ್ (ತ): ಮ.1.30ಕ್ಕೆ, ಸಂ.6.30ಕ್ಕೆ, ಪೇಚಿ (ತ): ಸಂ.4.15ಕ್ಕೆ, ಸೂಪರ್ ಜಿಂದಗಿ (ಮ): ರಾ.9.15ಕ್ಕೆ.
ಸ್ಕ್ರೀನ್ 2	ಭೀಮಾ (ಕ): ಬೆ.9.30ಕ್ಕೆ, ಮ.12.30ಕ್ಕೆ, ಮ.3.30ಕ್ಕೆ, ಸಂ.6.30ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಭೀಮಾ (ಕ): ಸಂ.4.45ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ರಾಯನ್ (ತ): ಮ.1.15ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ತುಂಗಭದ್ರಾ ಜಲಾಶಯ 19ನೇ ಗೇಟ್ ಲಿಂಕ್ ಮುರಿತ

ನದಿ ಪಾತ್ರದ ಜನರಲ್ಲಿ ಆತಂಕ



ತುಂಗಭದ್ರಾ ಅಣೆಕಟ್ಟೆಯ 19ನೇ ಗೇಟ್ ಲಿಂಕ್ ಮುರಿದಿರುವುದು

ಕೊಪ್ಪಳ, ಆ.11– ತುಂಗಭದ್ರಾ ಅಣೆಕಟ್ಟೆಯ 19ನೇ ಗೇಟ್ ಲಿಂಕ್ ಮುರಿದು ಸಾಕಷ್ಟು ಪ್ರಮಾಣದಲ್ಲಿ ನೀರು ಹರಿದು ಹೋಗುತ್ತಿರುವ ಕಾರಣ ಜಲಾಶಯಕ್ಕೆ ಸಾರ್ವಜನಿಕರ ಪ್ರವೇಶಕ್ಕೆ ನಿರ್ಬಂಧ ವಿಧಿಸಲಾಗಿದೆ.

ತುಂಗಭದ್ರಾ ಜಲಾಶಯದ ಕ್ರಸ್ಟ್‌ಗೇಟ್ ಸಂಖ್ಯೆ 19ರಲ್ಲಿ ಚೈನ್ ಲಿಂಕ್ ತುಂಡಾಗಿರುವ ಕಾರಣ ನದಿಗೆ ಅಪಾರ ಪ್ರಮಾಣದ ನೀರು ಹರಿಸಲಾಗುತ್ತಿದೆ. ನೀರಿನ ರಭಸಕ್ಕೆ ತುಂಡಾಗಿರುವ ಭಾಗವೂ ಕಾಣುತ್ತಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕೊಪ್ಪಳ ತಾಲೂಕಿನ ಮುನಿರಾಬಾದ್ ಬಳಿಯಿರುವ ತುಂಗಭದ್ರಾ ಜಲಾಶಯದ ಕ್ರಸ್ಟ್‌ಗೇಟ್‌ನ ಚೈನ್ ಲಿಂಕ್ ಶನಿವಾರ (ಆ.10) ತಡರಾತ್ರಿ 11 ಗಂಟೆ ಸುಮಾರಿಗೆ ತುಂಡಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸದ್ಯ 105 ಟಿಎಂಸಿ ಸಾಮರ್ಥ್ಯದ ಜಲಾಶಯ ಸಂಪೂರ್ಣ ಭರ್ತಿಯಾಗಿದೆ. ಗೇಟ್ ಸಂಖ್ಯೆ 19 ರಿಂದ 35 ರಿಂದ 45 ಸಾವಿರ ಕ್ಯುಸೆಕ್ ನೀರು ನದಿಗೆ ಹರಿಸಲಾಗುತ್ತಿದೆ. ಉಳಿದ ಗೇಟ್‌ಗಳಿಂದ ಸುಮಾರು 75 ಸಾವಿರ ಕ್ಯುಸೆಕ್ ನೀರನ್ನ ಹೊರಬಿಡಲಾಗುತ್ತಿದೆ. ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಸಿದ್ರೆ ಮಾತ್ರವೇ ಗೇಟ್‌ಗೆ ಏನಾಗಿದೆ ಎಂಬುದನ್ನ ನೋಡೋದಕ್ಕೆ ಸಾಧ್ಯ. ಆದ್ದರಿಂದ ನದಿ ಪಾತ್ರದ ಜನರು ಹೆಚ್ಚಿನ ನಿಗಾ ವಹಿಸುವಂತೆ ಅಧಿಕಾರಿಗಳು ಸೂಚನೆ ನೀಡಿದ್ದಾರೆ.

ನೀರಾವರಿ ಇಲಾಖೆಯ ಉನ್ನತ ಅಧಿಕಾರಿಗಳು ಈಗಾಗಲೇ ಬೆಂಗಳೂರಿನಿಂದ ಹೊರಟಿದ್ದು, ನೀರಿನ ಹೊರ ಹರಿವಿನ ಪ್ರಮಾಣವನ್ನ 1 ರಿಂದ 2 ಲಕ್ಷ ಕ್ಯುಸೆಕ್‌ಗೆ ಏರಿಸಬೇಕು. ನೀರು ಕಡಿಮೆಯಾದ್ರೆ ಬಳಿಕ ತುಂಡಾದ ಚೈನ್‌ಲಿಂಕ್ ಸರಿಪಡಿಸಲು ಸಾಧ್ಯವಾಗುತ್ತದೆ. ದುರಸ್ತಿಗೆ ಅಗತ್ಯವಾಗಿ ಬೇಕಾದ ನೀರು ಕಡಿಮೆ ಮಾಡಲು ಕನಿಷ್ಠ 3–4 ದಿನವಾದ್ರೂ ಬೇಕು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಎರಡು ವರ್ಷಗಳ ಬಳಿಕ ಅಣೆಕಟ್ಟು ಭರ್ತಿಯಾಗಿರುವ ಕಾರಣ ವಾರಾಂತ್ಯದ ದಿನಗಳಲ್ಲಿ ತಂಡೋಪತಂಡವಾಗಿ ಜನ ಪ್ರತಿವಾರವೂ ಬರುತ್ತಿದ್ದರು. ಸೆಲ್ಫಿ ತೆಗೆದುಕೊಂಡು ಖುಷಿಪಡುತ್ತಿದ್ದರು. ಆದ್ದರಿಂದ ಪೊಲೀಸ್ ಸರ್ಪಗಾವಲು ಹಾಕಲಾಗಿದೆ. ಸೇತುವೆ ಮೇಲೆ ಅತಿ ಗಣ್ಯವ್ಯಕ್ತಿಗಳು ಮತ್ತು ಅಧಿಕಾರಿಗಳನ್ನು ಹೊರತುಪಡಿಸಿ ಉಳಿದ ಎಲ್ಲರಿಗೂ ನಿರ್ಬಂಧ ಹೇರಲಾಗಿದೆ.

ತಜ್ಞರ ವರದಿ ಬಳಿಕ ಗೇಟ್ ದುರಸ್ತಿ : ಡಿಕೆಶಿ



ತುಂಗಭದ್ರಾ ಜಲಾಶಯಕ್ಕೆ ಭೇಟಿ ನೀಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

ಬೆಂಗಳೂರು, ಆ.11– ಮೂರು ರಾಜ್ಯಗಳಿಗೆ ಸೇರಿರುವ ನೀರನ್ನು ಹೇಗಾದರೂ ಮಾಡಿ ಉಳಿಸಿಕೊಂಡು ತುಂಗಭದ್ರಾ ಅಣೆಕಟ್ಟಿನ ಗೇಟನ್ನು ದುರಸ್ತಿ ಮಾಡುವ ಬಗ್ಗೆ ಚರ್ಚೆ ನಡೆಸಲಾಗುತ್ತಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಹೇಳಿದರು.

ತುಂಗಭದ್ರಾ ಜಲಾಶಯಕ್ಕೆ ತೆರಳುವ ಮುನ್ನ ಮಾಧ್ಯಮದವರನ್ನು ಉದ್ದೇಶಿಸಿ ಮಾತನಾಡಿದ ಅವರು ನೀರನ್ನು ಹೊರಗೆ ಬಿಡದ ಹೊರತು ಗೇಟ್ ದುರಸ್ತಿ ಮಾಡಲು ಸಾಧ್ಯವಿಲ್ಲ ಎಂದು ತಜ್ಞರು ತಿಳಿಸಿದ್ದಾರೆ. ಆದ ಕಾರಣ ತಂತ್ರಜ್ಞರ ವರದಿಯ ಬಳಿಕ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದರು. ಅಣೆಕಟ್ಟಿನ 1 ರಿಂದ 16ನೇ ಗೇಟುಗಳನ್ನು ಸಿಡಬ್ಲ್ಯೂಸಿ ನಿರ್ವಹಣೆ ಮಾಡುತ್ತದೆ. 17 ರಿಂದ 32 ರವರೆಗಿನ ಜವಾಬ್ದಾರಿ ಕರ್ನಾಟಕ ಸರ್ಕಾರದ್ದಾಗಿದೆ. ಕೇಂದ್ರ ಜಲ ಆಯೋಗದವರು ಸಹ ಒಂದಷ್ಟು ತಂತ್ರಜ್ಞರನ್ನು ಕಳುಹಿಸಿದ್ದಾರೆ. ನಾವು ಸಹ ನುರಿತ ತಂತ್ರಜ್ಞರನ್ನು ಕಳುಹಿಸಿ ದ್ದೇವೆ. ನಾನು ಸಹ ಶನಿವಾರ ರಾತ್ರಿ ಯಿಂದಲೇ ಅಧಿಕಾರಿಗಳ ಜೊತೆ ದೂರವಾಣಿ ಸಂಪರ್ಕದಲ್ಲಿದ್ದು ಪ್ರತಿ ಕ್ಷಣದ ಮಾಹಿತಿ ಪಡೆಯುತ್ತಿದ್ದೇನೆ ಎಂದು ಹೇಳಿದರು.

ತುಂಗಭದ್ರಾ ಅಣೆಕಟ್ಟಿನ 19ನೇ ಗೇಟ್ ಚೈನ್ ಲಿಂಕ್ ಮುರಿದ ಕಾರಣ ಈ ತೊಂದರೆ ಉಂಟಾಗಿದೆ. ಭಾರಿ ಪ್ರಮಾಣದಲ್ಲಿ ನೀರು ಹೊರ ಹೋಗುತ್ತಿದ್ದು, ಅಣೆಕಟ್ಟಿನ ಭದ್ರತೆಯ ದೃಷ್ಟಿಯಿಂದ ಎಲ್ಲಾ ಗೇಟ್‌ಗಳನ್ನು ತೆರೆದು ನದಿಗೆ ನೀರು ಬಿಡಲಾಗುತ್ತಿದೆ. ಅಣೆಕಟ್ಟಿನ ಕೆಳಭಾಗದ ಹಾಗೂ ನದಿ ಪಾತ್ರದ ಎಲ್ಲಾ ಜನರಿಗೆ ಎಚ್ಚರಿಕೆಯಿಂದ ಇರಬೇಕು ಎಂದು ಸೂಚನೆ ನೀಡಲಾಗಿದೆ ಎಂದರು. ಮುಂದಿನ ದಿನಗಳಲ್ಲಿ ನೀರಿನ ಅಭಾವ ಉಂಟಾಗುತ್ತದೆಯೇ ಎಂದು ಪ್ರಶ್ನಿಸಿದಾಗ 'ಇದು ಅತ್ಯಂತ ಗಂಭೀರವಾದ ವಿಚಾರವಾಗಿದ್ದು, ಇದರಲ್ಲಿ ನಾನು ಯಾರ ಮಾತನ್ನು ಕೇಳುವುದಿಲ್ಲ. ಸ್ಥಳೀಯರು ಹಾಗೂ ರೈತರು ಒಂದಷ್ಟು ಅಭಿಪ್ರಾಯಗಳನ್ನು ಸೂಚಿಸುತ್ತಿದ್ದಾರೆ. ಎಲ್ಲರ ಅಭಿಪ್ರಾಯ ಗಳನ್ನು ಗೌರವಿಸಲಾಗುವುದು. ಆದರೆ ಅಂತಿಮವಾಗಿ ತಂತ್ರಜ್ಞರ ವರದಿ ಆಧರಿಸಿ ಕ್ರಮ ತೆಗೆದುಕೊಳ್ಳಲಾಗುವುದು. ನಮಗೆ ನಮ್ಮ ರೈತರ ಹಿತ ಮುಖ್ಯ' ಎಂದು ಹೇಳಿದರು.

ಮೈಸೂರು ಸೇರಿದಂತೆ ಕರ್ನಾಟಕದಲ್ಲಿ ಅಪಘಾತದ ಸಾವು ಪ್ರಕರಣ ಇಳಿಮುಖ



ಅಲೋಕ್‌ಕುಮಾರ್

ಮೈಸೂರು, ಆ.11(ಬಿಎಲ್‌ಯು)– ಕರ್ನಾಟಕದಲ್ಲಿ ಅಪ ಘಾತದಲ್ಲಿ ಸಾವನ್ನಪ್ಪುವವರ ಸಂಖ್ಯೆ ಕ್ರಮೇಣ ಇಳಿಕೆ ಯಾಗಿದೆ ಎಂದು ಸಂಚಾರ ಮತ್ತು ರಸ್ತೆ ಸುರಕ್ಷತಾ ಎಡಿಜಿಪಿ ಅಲೋಕ್ ಕುಮಾರ್ ತಿಳಿಸಿದ್ದಾರೆ. ಈ ಕುರಿತು ತಮ್ಮ ಎಕ್ಸ್ ಖಾತೆಯಲ್ಲಿ ಅಂಕಿ ಅಂಶಗಳ ಸಹಿತ ಅವರು ಮಾಹಿತಿ ನೀಡಿದ್ದಾರೆ.

ಕಳೆದ ವರ್ಷ ಅಂದರೆ 2023ರ ಮೇ, ಜೂನ್ ಹಾಗೂ ಜುಲೈಗೆ ಹೋಲಿಸಿದರೆ 2024ರ ಮೇ, ಜೂನ್ ಹಾಗೂ ಜುಲೈ ತಿಂಗಳಲ್ಲಿ ಅಪಘಾತದಲ್ಲಿ ಸಾವನ್ನಪ್ಪಿ ದವರ ಸಂಖ್ಯೆ ಕಡಿಮೆಯಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ರಾಜ್ಯದಲ್ಲಿ ಕಳೆದ ವರ್ಷ ಮೇ ತಿಂಗ ಳಲ್ಲಿ 1201 ಜನರು ಮೃತಪಟ್ಟಿದ್ದರೆ, ಈ ವರ್ಷದ ಮೇನಲ್ಲಿ 1012 ಜನರು ಮೃತ ಪಟ್ಟಿದ್ದಾರೆ. ಹಾಗೆಯೇ ಕಳೆದ ವರ್ಷದ ಜೂನ್‌ನಲ್ಲಿ 1059 ಜನರು ಸಾವನ್ನಪ್ಪಿ ದ್ದರೆ, ಈ ವರ್ಷದ ಜೂನ್‌ನಲ್ಲಿ 860 ಜನರು ಮೃತರಾಗಿದ್ದಾರೆ ಎಂದು ಹೇಳಿದ್ದಾರೆ. ಇನ್ನು ಕಳೆದ ವರ್ಷದ ಜುಲೈನಲ್ಲಿ 862 ಜನರು ಮೃತಪಟ್ಟಿದ್ದರೆ, ಈ ವರ್ಷದ ಜುಲೈನಲ್ಲಿ 802 ಜನರು ಮೃತಪಟ್ಟಿದ್ದಾರೆ ಎಂದು ಅಲೋಕ್ ಕುಮಾರ್ ತಿಳಿಸಿದ್ದಾರೆ. ಮೈಸೂರು ನಗರದಲ್ಲಿ ಕೂಡ ಅಪಘಾತದಲ್ಲಿ ಸಾವನ್ನಪ್ಪಿದವರ ಸಂಖ್ಯೆ ಕಡಿಮೆಯಾಗಿದೆ ಎಂಬ ಮಾಹಿತಿಯನ್ನು ಕೂಡ ಅಲೋಕ್ ಕುಮಾರ್ ನೀಡಿದ್ದಾರೆ.

ಮೈಸೂರು ನಗರದಲ್ಲಿ 2023ರ ಮೇನಲ್ಲಿ 14 ಜನರು ಮೃತ ಪಟ್ಟಿದ್ದರೆ, ಈ ವರ್ಷದ ಮೇನಲ್ಲಿ 21 ಜನರು ಸಾವನ್ನಪ್ಪಿದ್ದಾರೆ. ಈ ತಿಂಗಳಲ್ಲಿ ಮಾತ್ರ ಸಾವಿನ ಸಂಖ್ಯೆ ಸ್ವಲ್ಪ ಹೆಚ್ಚಾಗಿದೆ. ಇನ್ನು ಕಳೆದ ವರ್ಷದ ಜೂನ್‌ನಲ್ಲಿ 15 ಜನರು ಮೃತಪಟ್ಟಿದ್ದರೆ, ಈ ವರ್ಷದ ಜೂನ್‌ನಲ್ಲಿ 10 ಜನರು ಸಾವನ್ನಪ್ಪಿದ್ದಾರೆ. ಜುಲೈ ತಿಂಗಳಲ್ಲಿ 14 ಜನರು ಸಾವನ್ನ ಪ್ಪಿದ್ದರೆ, ಈ ವರ್ಷದ ಜುಲೈನಲ್ಲಿ 12 ಜನರು ಸಾವನ್ನಪ್ಪಿದ್ದಾರೆ ಎಂದು ಎಡಿಜಿಪಿ ಅಲೋಕ್ ಕುಮಾರ್ ಅಂಕಿ ಅಂಶಗಳ ಸಹಿತ ವಿವರ ನೀಡಿದ್ದಾರೆ.

ತುಂಡಾದ ತುಂಗಭದ್ರಾ ಜಲಾಶಯ ಗೇಟ್

ಉನ್ನತ ಮಟ್ಟದ ತನಿಖೆಗೆ ಆಗ್ರಹ; ಡಿಸಿಎಂ ರಾಜೀನಾಮೆಗೂ ಒತ್ತಾಯ



ಮೈಸೂರು, ಆ.11(ಜಿಎ)–ತುಂಗಭದ್ರಾ ಜಲಾಶಯದ ಗೇಟ್ ಮುರಿದ ಪ್ರಕರಣದ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಬೇಕು. ಹೀಗಾಗಿ ನೀರಾವರಿ ಸಚಿವ ಡಿ.ಕೆ.ಶಿವಕುಮಾರ್ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಲಿ ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಆಗ್ರಹಿಸಿದ್ದಾರೆ.

ಕಳೆದ ಒಂದು ತಿಂಗಳಿಂದ ನಿರಂತರ ಮಳೆ, ಪ್ರವಾಹ ಬರುತ್ತಿದ್ದರೂ ಜಲಾಶಯಗಳ ಸುರಕ್ಷತೆ ಮತ್ತು ಪ್ರವಾಹ ಹಾನಿ ಬಗ್ಗೆ ಗಂಭೀರ ಚಿಂತನೆ ನಡೆಸದೆ ನಿರ್ಲಕ್ಷ್ಯತನ ಮಾಡಿದ ನೀರಾವರಿ ಸಚಿವ ಡಿ.ಕೆ. ಶಿವಕುಮಾರ್ ಬೇಜವಾಬ್ದಾರಿತನ ಉತ್ತರ ಕರ್ನಾಟಕದ 4–5 ಜಿಲ್ಲೆಗಳ 22 ಲಕ್ಷ ಹೆಕ್ಟೇರ್‌ನಲ್ಲಿ ಭತ್ತ ಬೆಳೆಯುತ್ತಿದ್ದ ರೈತರ ಬದುಕು ನಾಶವಾಗಲು ಕಾರಣವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕಳೆದ ಎರಡು ವರ್ಷಗಳಿಂದ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ 70 ವರ್ಷಗಳ ಹಳೆಯದಾದ ಗೇಟ್‌ಗಳನ್ನು ಬದಲಾಯಿಸಬೇಕು. ಈ ಬಗ್ಗೆ ನಿಗಾ ವಹಿಸುವಂತೆ ಒತ್ತಾಯ ಮಾಡಿದ್ದರೂ ನಿರ್ಲಕ್ಷ್ಯ ಮಾಡಿದ ನೀರಾವರಿ ಇಲಾಖೆ ಈ ಘಟನೆಗೆ ಕಾರಣವಾಗಿದೆ. ರೈತರು ಬೆಳೆದ ಅನ್ನ ತಿನ್ನುವ ಅವಿವೇಕಿ ಜನಪ್ರತಿನಿಧಿಗಳಿಗೆ ರೈತರ ಸಂಕಷ್ಟ ಅರಿವಾಗುತ್ತಿಲ್ಲ. ಸ್ವಹಿತಾಶಕ್ತಿಯ ರಾಜಕೀಯವೇ ಮುಖ್ಯವಾಗಿರುವ ಕಾರಣ ರೈತರ ಬದುಕು ಬೀದಿ ಪಾಲಾಗುತ್ತಿದೆ. ಕಳೆದ ವರ್ಷದ ಬರಗಾಲ ರೈತರನ್ನು ಕಾಡಿತ್ತು. ಈ ವರ್ಷ ಉತ್ತಮ ಮಳೆಯಾಗಿದೆ ಜಲಾಶಯ ಭರ್ತಿಯಾಗಿದೆ. ಉತ್ತಮ ಬೆಳೆ ಬರುತ್ತದೆ ಎನ್ನುವಷ್ಟರಲ್ಲಿ ರೈತರ ಸಂತೋಷ ಕಮರಿ ಹೋಗುವಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ನೀರಾವರಿ ಸಚಿವರು ಕಳೆದ ವರ್ಷ ಕಾವೇರಿ ಭಾಗದ ನೀರನ್ನು ಖಾಲಿ ಮಾಡಿ ರೈತರನ್ನು ಬಲಿಕೊಟ್ಟಾಗಿದೆ. ಇವರ ಬೇಜವಾಬ್ದಾರಿತನ ಈ ವರ್ಷ ಈ ಭಾಗದ ರೈತರು ಬಲಿಪಶು ಆಗಿದ್ದಾರೆ. ನೀರಾವರಿ ಸಚಿವರು ಕೂಡಲೇ ರಾಜೀನಾಮೆ ನೀಡಿ ಪಕ್ಷದ ಅಧ್ಯಕ್ಷಗಿರಿ ರಾಜಕೀಯ ಮಾಡುವುದು ಒಳ್ಳೆಯದು ಎಂದು ಕುರುಬೂರು ಶಾಂತಕುಮಾರ್ ಮನವಿ ಮಾಡಿದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮುಗೆ ತಿಮೋರ್ ಅತ್ಯುನ್ನತ ನಾಗರಿಕ ಗೌರವ: ಪ್ರಧಾನಿ ಮೋದಿ ಅಭಿನಂದನೆ

ನವದೆಹಲಿ, ಆ.11– ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ತಿಮೋರ್ ದೇಶದ



ಅತ್ಯುನ್ನತ ನಾಗರಿಕ ಗೌರವವಾದ 'ಗ್ರ್ಯಾಂಡ್ ಕಾಲರ್ ಆಫ್ ದಿ ಆರ್ಡರ್ ಆಫ್ ತಿಮೋರ್–ಲೆಸ್ಟ್' ನೀಡಿ ಗೌರವಿಸಲಾಯಿತು. ಶಿಕ್ಷಣ, ಸಮಾಜ ಕಲ್ಯಾಣ ಮತ್ತು ಮಹಿಳಾ ಸಬಲೀಕರಣಕ್ಕಾಗಿ ಸಾರ್ವಜನಿಕ ಸೇವೆಯಲ್ಲಿನ ಅವರ ಸಾಧನೆಗಳನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗಿದೆ

'ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಗ್ರ್ಯಾಂಡ್ ಕಾಲರ್ ಆಫ್ ದಿ ಆರ್ಡರ್ ಆಫ್ ತಿಮೋರ್–ಲೆಸ್ಟ್ ಪ್ರಶಸ್ತಿ ನೀಡಿರುವುದು ದೇಶದ ಜನತೆಗೆ ಹೆಮ್ಮೆಯ ಕ್ಷಣವಾಗಿದೆ' ಎಂದು ರಾಷ್ಟ್ರಪತಿಯವರನ್ನು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಅಭಿನಂದಿಸಿದ್ದಾರೆ. ಇದು ಉಭಯ ದೇಶಗಳ ನಡುವಿನ ಬಲವಾದ ಸಂಬಂಧ ಮತ್ತು ಪರಸ್ಪರ ಗೌರವವನ್ನು ಪ್ರತಿಬಿಂಬಿಸುತ್ತದೆ ಎಂದು ಮೋದಿ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಪರಸ್ಪರ ಭಾಷೆ ಕಲಿಕೆಯಿಂದ ಭಾಷೆಯ ವ್ಯಾಪ್ತಿ ಹೆಚ್ಚಾಗುತ್ತದೆ

● ಖ್ಯಾತ ಹಿರಿಯ ಸಾಹಿತಿ ಡಾ.ಎಸ್.ಎಲ್.ಭೈರಪ್ಪ ಅಭಿಮತ ● ಗೋಸ್ವಾಮಿ ತುಳಸಿದಾಸ ಜಯಂತಿ ಹಾಗೂ ಗೋಸ್ವಾಮಿ ತುಳಸಿದಾಸ ಸರಸ್ವತಿ ಸಮ್ಮಾನ್ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಚಾಲನೆ ● ಮಾತೃ ಭಾಷೆಯಲ್ಲೇ ವಿಜ್ಞಾನ ಅಧ್ಯಯನದಿಂದಲೂ ಭಾಷೆ ಬೆಳವಣಿಗೆ

ಮೈಸೂರು, ಆ.11(ಎಂಕೆ)– ಪರಸ್ಪರ ಭಾಷಾ ಕಲಿಕೆ ಹಾಗೂ ಮಾತೃ ಭಾಷೆಯಲ್ಲೇ ವಿಜ್ಞಾನ ವಿಷಯ ಅಧ್ಯಯನ ಮಾಡುವುದರಿಂದ ಭಾಷೆಯ ಬೆಳವಣಿಗೆ ಮತ್ತು ಅದರ ವ್ಯಾಪ್ತಿ ಹೆಚ್ಚಾಗುತ್ತದೆ ಎಂದು ಖ್ಯಾತ ಕಾದಂಬರಿಕಾರರಾದ ಡಾ. ಎಸ್.ಎಲ್.ಭೈರಪ್ಪ ಅಭಿಪ್ರಾಯಿಸಿದರು.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಕೇಂದ್ರಿಯ ಹಿಂದಿ ಸಂಸ್ಥೆ, ಮೈಸೂರು ಕೇಂದ್ರದಲ್ಲಿ ಭಾನುವಾರ ಆಯೋಜಿಸಿದ್ದ ಗೋಸ್ವಾಮಿ ತುಳಸಿದಾಸ ಜಯಂತಿ ಹಾಗೂ ಗೋಸ್ವಾಮಿ ತುಳಸಿದಾಸ ಸರಸ್ವತಿ ಸಮ್ಮಾನ್ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕರ್ನಾಟಕದಲ್ಲಿ ಹಿಂದಿ ಭಾಷೆಯ ಮೇಲಿರುವ ತಿರಸ್ಕಾರ ದೂರವಾಗಬೇಕಾದರೆ, ಇಲ್ಲಿ ನೆಲೆಸಿರುವ ಹಿಂದಿ ಮಾತನಾಡುವವರು ಕನ್ನಡ ಭಾಷೆಯನ್ನು ಕಲಿಯಬೇಕು. ಭಾಷೆಗಳ ಪರಸ್ಪರ ಕಲಿಕೆಯಿಂದ ತಿರಸ್ಕಾರವೆಂಬುದು ತಾನಾಗಿಯೇ ದೂರವಾಗುತ್ತದೆ ಎಂದು ಸಲಹೆ ನೀಡಿದರು.

ಮುಖ್ಯವಾಗಿ ಮಾತೃ ಭಾಷೆಯಲ್ಲಿ ವಿಜ್ಞಾನ ವಿಷಯವನ್ನು ಅಧ್ಯಯನ ಮಾಡಬೇಕು. ಇದರಿಂದ ಭಾಷೆಯ ಬಳಕೆ ಹೆಚ್ಚಾಗುವುದಲ್ಲದೆ ಅದರ ವ್ಯಾಪ್ತಿಯೂ ವಿಸ್ತಾರಗೊಳ್ಳುತ್ತದೆ. ಮೋಟಾರ್ ಎಂಬ ಇಂಗ್ಲಿಷ್ ಪದವನ್ನು ಕನ್ನಡದಲ್ಲಿ ಅದೇ ರೀತಿ ಬಳಸುತ್ತಿರುವುದು ಉದಾಹರಣೆಯಾಗಿದೆ. ಅದರಂತೆ ಹಿಂದಿ ಭಾಷೆ ಬಳಕೆಯ ವ್ಯಾಪ್ತಿ ಹೆಚ್ಚಾಗಬೇಕಾದರೆ ಅದೇ ಭಾಷೆಯಲ್ಲಿ ವಿಜ್ಞಾನದ ಪದಗಳ ಬಳಕೆಯೂ ಹೆಚ್ಚಾಗಬೇಕು ಎಂದರು.

ಜರ್ಮನಿಯಲ್ಲಿ ಯಾರೇ ವಿದ್ಯಾಭ್ಯಾಸಕ್ಕೆ ತೆರಳಿದರೂ ಮೊದಲು ಅಲ್ಲಿನ ಭಾಷೆ ಕಲಿಸಿ, ನಂತರ ಅವರ ಭಾಷೆಯಲ್ಲೇ ಅಧ್ಯಯನ ಪ್ರಕ್ರಿಯೆಗಳನ್ನು ನಡೆಸುತ್ತಾರೆ. ಅದರಂತೆ ನಮ್ಮ ದೇಶದಲ್ಲಿಯೂ ಆಗಬೇಕು. ಮಾತೃ ಭಾಷೆಯಲ್ಲಿ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಭಾಷೆಯ ಡಿಮ್ಯಾಂಡ್



ಕೇಂದ್ರಿಯ ಹಿಂದಿ ಸಂಸ್ಥೆ, ಮೈಸೂರು ಕೇಂದ್ರದಲ್ಲಿ ಆಯೋಜಿಸಿದ್ದ ಗೋಸ್ವಾಮಿ ತುಳಸಿದಾಸ ಜಯಂತಿ ಆಚರಣೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಖ್ಯಾತ ಕಾದಂಬರಿಕಾರರಾದ ಡಾ.ಎಸ್.ಎಲ್.ಭೈರಪ್ಪ, ಗೋಸ್ವಾಮಿ ತುಳಸಿದಾಸರ ಭಾವಚಿತ್ರ ಪುಷ್ಪಾರ್ಚನೆ ಸಲ್ಲಿಸಿದರು. ಹಿರಿಯ ವಿಮರ್ಶಕ ಪ್ರದಾನ್ ಗುರುದತ್ ಮತ್ತಿತರರಿದ್ದರು.

ಹೆಚ್ಚಿಸಬೇಕು. ಭಾಷೆಯ ಮೂಲಕ ಜ್ಞಾನ ಹೆಚ್ಚಾದರೆ, ಭಾಷೆ ಬೆಳೆಯುತ್ತದೆ ಎಂದು ತಿಳಿಸಿದರು.

ಪ್ರಕಾಶಕರ ಮೇಲಿರಲಿ ಗಮನ: ಭಾಷೆಯ ವ್ಯಾಪ್ತಿ ವಿಸ್ತಾರಗೊಳ್ಳಲು ಬರವಣಿಗೆ ಪ್ರಮುಖ ಸಾಧನ. ನಾನು ಕನ್ನಡದಲ್ಲಿ ಬರೆದ ಕಾದಂಬರಿಗಳು ಹಲವು ಭಾಷೆಗಳಿಗೆ ಭಾಷಾಂತರಗೊಂಡಿದ್ದು, ನೇಪಾಳದಲ್ಲಿ ನೆಲೆಸಿರುವವರು ಕೂಡ ನನ್ನ ಕಾದಂಬರಿಗಳನ್ನು ಹಿಂದಿಯಲ್ಲಿ ಓದಿದ್ದೇವೆ ಎಂದು ಹೇಳುತ್ತಾರೆ. ಇದಕ್ಕೆ ನನ್ನ ಪುಸ್ತಕಗಳನ್ನು ಪ್ರಕಟಿಸಿದ ಪ್ರಕಾಶಕರಲ್ಲಿನ ಪ್ರಾಮಾಣಿಕತೆ ಕಾರಣವಾಗಿದೆ. ಹಲವು ಪ್ರಕಾಶಕರು ಮೊದಲ ಮುದ್ರಣದ ಮಾಹಿತಿ ನೀಡಿ, ನಂತರದ ಮುದ್ರಣಗಳ ಮಾಹಿತಿ ನೀಡುವುದಿಲ್ಲ. ಇದರಿಂದ ಲೇಖಕನಿಗೆ ತನ್ನ ಕೃತಿಯ ಎಷ್ಟು ಪ್ರತಿಗಳು ಮಾರಾಟವಾಗಿವೆ ಎಂಬ ಮಾಹಿತಿ ಇರುವುದಿಲ್ಲ. ಆದ್ದರಿಂದ ಪ್ರಕಾಶಕರ ಮೇಲೂ ಗಮನ ಹರಿಸಬೇಕು. ಅಲ್ಲದೆ ಮುದ್ರಣಕ್ಕೆ ಪೇಪರ್ ಪೂರೈಕೆ ಮಾಡುವವರು ಪೇಪರ್ ಸ್ಟಾಕ್ ಇಲ್ಲವೆನ್ನುತ್ತಿರುವುದರಿಂದಲೂ ಭಾಷೆಯ ಬೆಳವಣಿಗೆಗೆ ತೊಡಕಾಗುತ್ತಿದೆ ಎಂದು ವಿವರಿಸಿದರು.

ರಾಮಭಕ್ತ ತುಳಸಿದಾಸರು: ಪ್ರಾಸ್ತಾವಿಕವಾಗಿ ಮಾತನಾಡಿದ ಕೇಂದ್ರಿಯ ಹಿಂದಿ ಸಂಸ್ಥೆ, ಮೈಸೂರು ಕೇಂದ್ರದ ನಿರ್ದೇಶಕ ಯೋಗೇಂದ್ರ ಮಿಶ್ರಾ, ಗೋಸ್ವಾಮಿ ತುಳಸಿದಾಸರ ಜಯಂತಿಯನ್ನು ಪ್ರತಿ ವರ್ಷ ಶ್ರಾವಣ ಮಾಸದ ನಂತರ ಏಳನೇ ದಿನದಂದು ಆಚರಿಸಲಾಗುತ್ತದೆ. ಗೋಸ್ವಾಮಿ ತುಳಸಿದಾಸರು ಮಹಾನ್ ಕವಿ ಮತ್ತು ಧಾರ್ಮಿಕ ಚಿಂತಕರು. ಶ್ರೀರಾಮನ ಆರಾಧಕರಾಗಿದ್ದ ಅವರು, ರಾಮಭಕ್ತಿಯ ಮೈಗೂಡಿಸಿಕೊಂಡಿದ್ದರು. ವಾಲ್ಮೀಕಿ ರಾಮಾಯಣದ ಆಧಾರದ ಮೇಲೆ ಹಿಂದಿಯಲ್ಲಿ ರಾಮನ ಭಕ್ತಿಯಲ್ಲಿ ರಾಮಚರಿತಮಾನ್ ರಚಿಸಿದರು. ಅಲ್ಲದೆ ಹನುಮಾನ್ ಚಾಲೀಸಾದ ಸಂಯೋಜಕರೂ ಆಗಿದ್ದಾರೆ ಎಂದು ತಿಳಿಸಿದರು.

"ತುಳಸಿದಾಸರು ಹಿಂದಿಯಲ್ಲಿ ರಚಿಸಿದ ರಾಮಾಯಣವನ್ನು 1925ರಲ್ಲಿಯೇ ಕನ್ನಡಕ್ಕೆ ಭಾಷಾಂತರ ಮಾಡಲಾಗಿತ್ತು. ಪರಸ್ಪರ ಭಾಷೆಗಳ ಕಲಿಕೆ ಮತ್ತು ಭಾಷಾಂತರದಿಂದ ಭಾಷೆಯ ವ್ಯಾಪ್ತಿ ಹೆಚ್ಚಾಗುತ್ತದೆ. ಇಂಗ್ಲಿಷ್‌ಗೆ ನೀಡುವ ಪ್ರಾಮುಖ್ಯತೆಯನ್ನು ಹಿಂದಿಗೂ ನೀಡಬೇಕು. ಆದ್ಯತೆ ಎಂಬುದು ಬರೀ ಮಾತಿಗೆ ಸೀಮಿತವಾಗದೆ ಅಳವಡಿಕೆಯಾಗಬೇಕು.

- ಪ್ರದಾನ್ ಗುರುದತ್, ಹಿರಿಯ ವಿಮರ್ಶಕ

ರಾಮಚರಿತಮಾನಸ್ ಹಿಂದೂ ಪುರಾಣದ ಅತ್ಯಂತ ಮಹತ್ವದ ಕೃತಿಗಳಲ್ಲಿ ಒಂದಾಗಿದೆ. ತುಳಸಿ ದಾಸರು ಭಗವಾನ್ ರಾಮನ ದೈವಿಕ ಅನುಯಾಯಿಯಾಗಿದ್ದರು. ಭಗವಂತನಲ್ಲಿ ಅವರ ಸಮರ್ಪಣೆ ಮತ್ತು ಭಕ್ತಿ ಅನನ್ಯವಾಗಿತ್ತು. ತುಳಸಿದಾಸರು ಮಹರ್ಷಿ ವಾಲ್ಮೀಕಿಯ ಅವತಾರ ಎಂದು ಕೆಲವು ದಂತಕಥೆಗಳು ಹೇಳುತ್ತವೆ ಎಂದು ಮಾಹಿತಿ ನೀಡಿದರು.

ಇದೇ ವೇಳೆ ಖ್ಯಾತ ಕಾದಂಬರಿಕಾರರಾದ ಡಾ.ಎಸ್.ಎಲ್.ಭೈರಪ್ಪ, ಹಿರಿಯ ವಿಮರ್ಶಕ ಪ್ರದಾನ್ ಗುರುದತ್, ಶಾರದಾ ವಿಲಾಸ ಕಾಲೇಜಿನ ಡಾ.ಹನುಮಂತಚಾರ್ ಜೋಶಿ, ಮೈಸೂರು ಎನ್‌ಸಿಇಆರ್‌ಟಿಯ ಪ್ರೊರಾಜೇಶ್ ಸರ್ಕಾರ್ ಶಾ, ಮೈಸೂರು ವಿವಿಯ ಡಾ.ಪ್ರವೀಣ್ ಅವರಿಗೆ 'ಗೋಸ್ವಾಮಿ ತುಳಸಿದಾಸ ಸರಸ್ವತಿ ಸಮ್ಮಾನ್ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಗೂಗಲ್ ಮೀಟ್ ಮೂಲಕ ಕೇಂದ್ರಿಯ ಹಿಂದಿ ಶಿಕ್ಷಣ ಮಂಡಲ್‌ನ ಉಪಾಧ್ಯಕ್ಷ ಸುರೇಂದ್ರ ದುಬೆ ಭಾಗವಹಿಸಿದ್ದರು. ಸಂಘಟಕ ಅಮೃತ್ ಪುರೋಹಿತ್ ನಿರೂಪಣೆ ಮಾಡಿದರು.





WANTED
CIVIL ENGINEER
Minimum 5 years Experience
9611434785

HIRING
- **PHARMACIST** (B.Pharma / D.Pharma)
- **ACCOUNTANT** (M.Com / MBA Regular, 3 to 5 years of Experience)
- **NURSES** - (B.Sc., (N) / GNM) Min. 2 years experience required

Send Your Resume to : hr@sjhmysuru.com
St. JOSEPH'S HOSPITAL
Bannimantap, Mysore.
Mob : 9606990713

WANTED
We are seeking a
SKILLED & YOUNG FEMALE STAFF NURSE
for our SKIN CARE CLINIC in Hadajana (Near RMC Market).
Salary: ₹20,000/-
Send your resume to WhatsApp:
63663 45111 / 83100 91538

FOR ADVERTISEMENT
STAR OF MYSORE
Please Call: 0821-2496522 / 23
Email: ad@starofmysore.com
ಮೈಸೂರು ಮಿತ್ರ
Please Call: 0821-2496522 / 23
Email: ad@mysurumithra.com

